# ನೂರೊಂದು ನೆಲೆಯ ನಿಲವು ಮತ್ತು ನೀತಿ ಮುಕ್ತಾವಲಿ

ಲಕ್ಕಪ್ಪ ಅ. ಶಿರಹಟ್ಟಿ

ಅರುಣೋದಯ ಪ್ರಕಾಶನ, ವಿಜಾಪೂರ

# ನೂರೊಂದು ನೆಲೆಯ ನಿಲವು

ಮತ್ತು

# ನೀತಿ ಮುಕ್ತಾವಲಿ

ಲಕ್ಕಪ್ಪ ಅ. ಶಿರಹಟ್ಟಿ

ಅರುಣೋದಯ ಪ್ರಕಾಶನ, ವಿಜಾಪುರ

ಶ್ರೀ ಶಶಿಧರ ಶಿವಶಂಕರ ಶಿರಹಟ್ಟಿ
ಅರುಣೋದಯ ಪ್ರಕಾಶನ
ರಾಮಪ್ರಸಾದ ಓಣಿ
ವಿಜಾಪುರ-೫೮೬ ೧೦೧

ಮೊದಲ ಮುದ್ರಣ: ೧ನೇ ಜೂನ ೧೯೯೦

೧೦೦೦ ಪ್ರತಿಗಳು

ಬೆಲೆ: ೧೦-೦೦
(ಹತ್ತು ರೂಪಾಯಿಗಳು)

ಹಕ್ಕುಗಳು: ಪ್ರಕಾಶಕರವು

ಮುದ್ರಣ:
ಗಂಗಾಪೂರ ಓಣಿ, ಕುಂಬಾರಗರಡಿ ಹತ್ತಿರ
ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣ
ಗದಗ-೫೮೨ ೧೦೧

ಮುದ್ರಣದ ಅವಧಿ
ಕೇವಲ ನಾಲ್ಕು ದಿನ



ಕರುಣಾಕರ ಸದ್ಗುರು

ಪ. ಬ್ರ. ಪಟ್ಟಾಧ್ಯಕ್ಷ,

ಶ್ರೀ ಶಾಂತವೀರ ಪ. ಬ್ರ. ಪಟ್ಟಾಧ್ಯಕ್ಷ ಶಿವಾಚಾರ್ಯರು ಮಹಾ ಸ್ವಾಮಿಗಳವರು ಹಿರಿಯಮಠ ಬಬಲೇಶ್ವರ. ಈ ನನ್ನ ಪರಮ ಸದ್ಗುರುಗಳು, ಹರಳೇಶ್ವರ ಆಶ್ರಮದಲ್ಲಿ ಇದ್ದಾಗಿನ ೧೦ ವರ್ಷ, ಬಬಲೇಶ್ವರ ಹೊರಗಿನ ಮಠದಲ್ಲಿ ಇದ್ದಾಗಿನ ೧೦ ವರ್ಷ ಆ ಮಹಾಸನ್ನಿಧಿಯ ನಿಕಟ ಒಡನಾಟದಲ್ಲಿ ಇದ್ದು ಪಡೆದ ಅವಧಿಯು ನನ್ನ ಜೀವನದಲ್ಲಿ ಒಂದು ಮಹಾ ಬೆಳಕಿನ ಭಾಗವಾಗಿ ಪರಿಣಮಿಸಿತು. ಆಗ ದಿನ ದಿನಗಳಲ್ಲಿ ಅನುಭವಿಸಿದ ಆನಂದವನ್ನು ಇಂದು ದಿನ ದಿನಕ್ಕೂ ಅನುಭವಿಸಿ ಸ್ಮರಿಸಿ ಆನಂದಿಸುತ್ತಿದ್ದೇನೆ. ಹೀಗೆ ಆ ಸದ್ಗುರುವಿನಿಂದ ಅನುಗ್ರಹಿತನಾಗಿರುವ, ಅವರ ಅಧಿಕಾಧಿಕ ಕಾರುಣ್ಯಕ್ಕೆ ಪಾತ್ರನಾಗಿರುವ,



ಲಕ್ಕಪ್ಪ ಆವ್ವಪ್ಪ ಶಿರಹಟ್ಟಿ

ದಿ. ೧-೬-೧೯೯೦

೮೭ ವರ್ಷ ಪರಿಪೂರ್ಣ

ಶ್ರೀಗುರು

## ಶ್ರೀ ಶಾಂತವೀರ ಶಿವಯೋಗಿಗಳ ಸನ್ನಿಧಿ ಸ್ಮರಣೆ

"ಭಾವದಲಿ ಬೆಳಕಾಗಿ ಮನಕೆ ಹಂಬಲವಾಗಿ
ಆವಗಂ ದರ್ಶನೋತ್ಸವಮಾಗಿ ರಾಜಿಸುವ
ಪಾವನವಿರಾಗಿ ಸದ್ಭಕ್ತ ಜನರಾಗಿ ವರಲಿಂಗಾನುರಾಗಿ ನಿರುತ
ನೀವೆ ಪರಮಾರ್ಥಮಾದೊಡೆ ಸಾಕು ಬುಧರು ಸಂ
ಭಾವಿಸುವ ಆಸೆಯೆನಗಿಲ್ಲ ಕೃಪೆಯಾಗಿ ಬಿಡ
ದೋವಿ ನುಡಿಗಲಿಸಿ ನಡೆನುಡಿಸಿ ನೋಡುವಿರಾಗಿ
ಯಿನ್ನಾನದೇಂ ಸುಕೃತನೋ"

— **ಲೇಖಕ ಶಿರಹಟ್ಟಿ ಲ. ಅ.**
೧–೧–೧೯೬೫

# ನಿವೇದನೆ

ಪ್ರಿಯ ಓದುಗ,

'ವರ್ಣ ಮಾತ್ರಂ ಕಲಿಸಿದಾತಂ ಗುರು' ಈ ಅಮೃತೋಕ್ತಿಯು ನನಗೆ ಕಲಿಸಿದ ಗುರು ಶ್ರೀ ಲಕ್ಕಪ್ಪ ಅವಪ್ಪ ಶಿರಹಟ್ಟಿ ಮಾಸ್ತರರ ಒಂದು ವರ್ಷದ ಸಂಬಂಧ ನನ್ನ ಪಾಲಿಗೆ ಪರಮ ಪಾವನ. ಅವರ ನಿಷ್ಠೆ, ವಾತ್ಸಲ್ಯ, ಪ್ರತಿಭೆ, ಅಚ್ಚುಕಟ್ಟುತನ ಮತ್ತು ನಿರಾಡಂಬರದ ನಡವಳಿಕೆ ನನ್ನ ಭವಿಷ್ಯ ಜೀವನಕ್ಕೆ–ವ್ಯಕ್ತಿತ್ವ ವಿಕಾಸಕ್ಕೆ ಮೂಲ ತಳಹದಿಯಾದುದನ್ನು ಸ್ಮರಿಸುತ್ತಲೇ ಬದುಕಿದ್ದೇನೆ. ೧೯೩೮ರಲ್ಲಿ ನಾನು ಆಗ ನಾಲ್ಕನೆಯ ತರಗತಿಯ ವಿದ್ಯಾರ್ಥಿ. ವಿಜಾಪುರ ನಗರದ ೧೦ ನೆಯ ನಂಬರ ಶಾಲೆಯ ಮುಖ್ಯ ಗುರು ಮತ್ತು ೪ನೆಯ ತರಗತಿಯ ಮಾಸ್ತರರು ಪೂಜ್ಯ ಲ. ಅ. ಶಿರಹಟ್ಟಿಯವರಾಗಿದ್ದರು. ಕಲಿಸುವಿಕೆಯ ರೀತಿ ನೀತಿಗಳನ್ನು ಅವರ ಹಾಗೆಯೇ ಮುಂದೆ ಅನುಸರಿಸಿದುದೇ ನಾನು ಸಾಧಿಸಿದ ಪ್ರಗತಿಗೆ, ಪಡೆದ ಪ್ರಶಸ್ತಿ ಪುರಸ್ಕಾರಗಳಿಗೆ ಕಾರಣವೆಂಬುದನ್ನು ಹೇಳಲೇಬೇಕು.

ವಚನ ಪಿತಾಮಹ ಲಿಂಗೈಕ್ಯ ಫ. ಗು. ಹಳಕಟ್ಟಿಯವರ ಶರಣ ಜೀವನದ–ಸಮರ್ಪಣ ಭಾವದ ಪರಿಸರದಲ್ಲಿ ಅವರ ಒಡನಾಡಿಗರಾಗಿ ಬೆಳೆದು ಬಂದವರಲ್ಲಿ ಶ್ರೀ ಲ. ಅ. ಶಿರಹಟ್ಟಿ ಮಾಸ್ತರರೂ ಒಬ್ಬರು. ಬಬಲೇಶ್ವರದ ಜ್ಞಾನಸಿಂಧು ತಪೋನಿಧಿ ಶ್ರೀ ಶಾಂತವೀರ ಶಿವಯೋಗಿಗಳವರ ಅನುಗ್ರಹಕ್ಕೆ ಪಾತ್ರರಾಗಿ, ಶರಣ ಜೀವನವನ್ನು ಸ್ವೀಕರಿಸಿ, ಸದಾಚಾರಿಗಳಾಗಿ ಒಳ್ಳೆಯ ವಿಚಾರಗಳನ್ನು ಆಚಾರದಲ್ಲಿಳಿಸಿದ ಶ್ರೀ ಲ. ಅ. ಶಿರಹಟ್ಟಿಯವರು ಒಳ್ಳೆಯ ಲೇಖಕರು. ಕನ್ನಡ ಭಾಷೆಯ ಆಳ ಅಗಲಗಳನ್ನು ಅರಿತುಕೊಂಡವರು. ಪಂಡಿತ ಮ. ಪ್ರ. ಪೂಜಾರ ಅವರ ಪ್ರಶಂಸೆಗೆ ಪಾತ್ರರಾದವರೆಂಬುದು ಗಮನಾರ್ಹ.

ತಮ್ಮ ಶಿಕ್ಷಕ ವೃತ್ತಿಯ ಆರಂಭ ಕಾಲದಲ್ಲಿಯೇ ಅಂದರೆ ೨೮ನೆಯ ವಯಸ್ಸಿನಲ್ಲಿ (೧೯೩೧) 'ನೀತಿ ಮುಕ್ತಾವಲಿ' ನೈತಿಕ ಕಾವ್ಯವನ್ನು ನಾಡಿನ ಸಾಹಿತ್ಯ ಭಾಂಡಾರಕ್ಕೆ ನೀಡಿದ್ದಾರೆ. ಪಂಡಿತ ಮ. ಪ್ರ. ಪೂಜಾರ ಅವರು ಮುನ್ನುಡಿ ಬರೆದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರೆ ಪಂಡಿತ ಕೇಶವಶರ್ಮಾ ಗಲಗಲಿ

ಅವರು ಕೂಡ ಅನುಮೋದಿಸಿ ಮುನ್ನಡೆಯಲು ಕೋರಿದ್ದಾರೆ. ಹೀಗೆ ಅಂದಿನ ಪಂಡಿತರ ಅನುಗ್ರಹ ಆದರ ಪಡೆದವರು ನಮ್ಮ ಶಿರಹಟ್ಟಿ ಮಾಸ್ತರರು.

ಶಿಷ್ಯರ ಪ್ರತಿಭೆ ಏಳ್ಗೆ ಸದಾಚಾರಗಳನ್ನು ಕಂಡು ಕೇಳಿ ಹಿರಿಹಿರಿ ಹಿಗ್ಗುತ್ತ, ಆನಂದಿಸುವ ಗುರುವರ್ಗ ಅಪರೂಪ ಇಂದಿನ ಕಾಲದಲ್ಲಿ. ಅಂಥ ಪುಣ್ಯಾತ್ಮರು ಇಂದಿಗೂ ಬದುಕಿದ್ದಾರೆ–ಸಾವಿರಕ್ಕೊಬ್ಬರು. ಶ್ರೀ ಲ. ಅ. ಶಿರಹಟ್ಟಿಯವರು ತಮ್ಮ ಲಲನೆಯ ವಯಸ್ಸಿನಲ್ಲಿಯೂ ಸಾಧನೆ, ಅಧ್ಯಯನ, ಬರೆಹಗಳಲ್ಲಿ, ಸಾಮಾಜಿಕ, ಧಾರ್ಮಿಕ ಚಿಂತನೆಯಲ್ಲಿ ತನ್ಮಯರಾಗಿದ್ದಾರೆ. ಆಗಾಗ ಅವರ ದರ್ಶನ ಸಹಚಿಂತನಗಳು ನನ್ನ ಜೀವಕ್ಕೆ ಚೈತನ್ಯದಾಯಕವಾಗಿ ಪರಿಣಮಿಸುತ್ತಿವೆ.

'ನೀತಿ ಮುಕ್ತಾವಲಿ' ಅವರಲ್ಲಿ, ದಾಖಲೆಗಾಗಿ ಮಾತ್ರ ಒಂದು ಪ್ರತಿ ಉಳಿದಿತ್ತು. ಹಾಗೆಯೆ 'ನೂರೊಂದು ನೆಲೆಯ ನಿಲವು' ಕೂಡ ಒಂದೇ ಪ್ರತಿ ಅವರಲ್ಲಿತ್ತು. 'ಇವೆರಡನ್ನು ಪ್ರಕಟಿಸಿರಿ; ನೈತಿಕ ಜೀವನ ಬಯಸುವವರಿಗೆ ನನ್ನ ಅಳಿಲು ಸೇವೆ ಸಂದುವಂತಾಗಲಿ' ಎಂದು ತಮ್ಮ ಬಲವಾದ ಹಂಬಲವನ್ನು ಪ್ರಕಟಿಸಿದರು. ಈ ವಿಚಾರವನ್ನು ಅವರ ಮಕ್ಕಳು, ಮೊಮ್ಮಕ್ಕಳು ಪಿಟ್ಟೆನ್ನದೆ ಅನುಮೋದಿಸಿದರು. ಶ್ರೀ ಶಿರಹಟ್ಟಿ ಮಾಸ್ತರರ ಅಭೀಪ್ಸೆಯಂತೆ ಅವರ ವಂಶದ ವಿಸ್ತಾರವಾದ ಬಳಗದ ಪ್ರೇರಣೆಯನ್ನು ಪಡೆದು ಎರಡೂ ಕೃತಿಗಳನ್ನು 'ನೂರೊಂದು ನೆಲೆ' ಮತ್ತು 'ನೀತಿ ಮುಕ್ತಾವಲಿ' ಎಂದು ಹೆಸರಿಸಿ ಶ್ರೀ ಗುರುವಿನ ಆಣತಿಯನ್ನು ನಿಷ್ಠೆಯಿಂದ ನೆರವೇರಿಸುತ್ತಿದ್ದೇನೆ.

ಷಟಸ್ಥಲ ಸಿದ್ಧಾಂತದ ನೂರೊಂದು ನೆಲೆಯ ರಹಸ್ಯಗಳನ್ನು ವಾರ್ಧಕ ಷಟ್ಪದಿಯಲ್ಲಿ ನಿರೂಪಿಸಿದ್ದಾರಲ್ಲದೆ ಪ್ರತಿಯೊಂದು ಸ್ಥಲವನ್ನು ಸರಳಾನುವಾದ ರೂಪದಲ್ಲಿ ಸೊಗಸಾಗಿ–ತಿಳಿಯಾಗಿ ಹೇಳಿದ್ದಾರೆ. ಇಂಥ ಕೃತಿಯು ಮಗುದೊಂದು ಇರಲಿಕ್ಕಿಲ್ಲವೆಂದು ನನ್ನ ಭಾವನೆ. ೧೯೬೩ರಲ್ಲಿ ಪ್ರಕಟವಾದ ಈ ಕೃತಿಯು ಆಧ್ಯಾತ್ಮ ಮಾರ್ಗದಲ್ಲಿ ಸಾಗುವವರಿಗೆ ತುಂಬಾ ಸಹಾಯಕವಾಗಿದೆ; ಅದು ಜನ ಮೆಚ್ಚುಗೆ ಗಳಿಸಿದೆ.

'ನೀತಿ ಮುಕ್ತಾವಲಿ' ಯಂತೂ ಎಳೆಯರಿಗೆ, ಯುವಕರಿಗೆ, ಹೆಚ್ಚಾಗಿ ಬೋಧಕರಿಗೆ (ಶಿಕ್ಷಕರಿಗೆ) ರನ್ನ ಗನ್ನಡಿಯಾಗಿದೆ; ನಾಡ ನುಡಿಯ ಮೇಲ್ಮೆಯನ್ನು, ಜೀವನದ ಘನತೆ ಗೌರವಗಳನ್ನು ಒತ್ತಿಹೇಳುವ ಮಹಾಕಾವ್ಯವಾಗಿದೆ.

ಈ 'ನೂರೊಂದು ನೆಲೆ ಮತ್ತು ನೀತಿ ಮುಕ್ತಾವಲಿ' ಕೃತಿಯ ಲೇಖಕರಾದ ಶ್ರೀ ಲ. ಅ. ಶಿರಹಟ್ಟಿ ಮಾಸ್ತರರ ಜೀವನ ಗಾಥೆಯಾಗಿದೆ ಎಂದರೆ ಅತಿಶಯ ವೇನಲ್ಲ. ಹಳೆಗನ್ನಡ ಮತ್ತು ಹೊಸಗನ್ನಡ ಶ್ರೀ ಶಿರಹಟ್ಟಿಯವರಿಗೆ ಸಕ್ಕರೆ ಗಿಂತ ಸಿಹಿ; ಅಚ್ಚುಮೆಚ್ಚು. ಅವರಿಗೆ ಕನ್ನಡವೆ ಕಸ್ತೂರಿ. ಕವಿ ಮುದ್ದಣನಂತಹ ಪಾಂಡಿತ್ಯ ಇವರದೆಂಬುದು ಸ್ಪಷ್ಟ. ನಾಡಿನ ಅಭಿಮಾನ, ದೇಶಾಭಿಮಾನಗಳು ಇವರಿಗೆ ಅಪಾರ; ಅಗಣಿತ. 'ನೀತಿ ಮುಕ್ತಾವಲಿ'ಯಲ್ಲಿ ಅಂತರಾಳದ ಅಭಿಮಾನ ವನ್ನು ಮನಂಬುಗುವಂತೆ ಹೇಳಿಕೊಂಡಿದ್ದಾರೆ:

ದೇಶಾಭಿಮಾನಿ ಮಾರಣ–
ಕೊ| ಸರಿಪನೆ ದೇಶಕಾರ್ಯದೊಳದಂ ಬರಿಕುಂ;
ದೇಶಹಿತಾರ್ಥವ ಕಲಿ ಪುಲಿ–
ಕೇಶಿ ನಿಮಿರ್ದರಿಗಳೊಡನೆ ಬೆರ್ಚದೆ ಪೋರ್ದಂ ||೧೯||

'ನೀತಿ ಮುಕ್ತಾವಲಿ' ಇಂದಿನ ಪದವಿಧರರಿಗೂ, ಬೋಧಕರಿಗೂ ಕೂಡ ಕಠಿಣವೆನಿ ಪುದೇನೋ ಎಂಬ ಅನುಮಾನ ನನಗುಂಟಾದರೂ ಸಿರಿಗನ್ನಡದ ಸತ್ವವನ್ನು– ಸ್ವಾರಸ್ಯವನ್ನು ಸವಿಯುವ ಸದವಕಾಶವನ್ನು ಕಳೆದುಕೊಳ್ಳಬಾರದೆಂದು ನನ್ನ ಕಳಕಳಿಯ ಕೋರಿಕೆಯಾಗಿದೆ. ಆತ್ಮಾನಂದಕ್ಕಾಗಿ, ಜ್ಞಾನವೃದ್ಧಿಗಾಗಿ ಇಂದಿನ ಎಳೆಯರ ಭವಿಷ್ಯ ಜೀವನ ಉಜ್ವಲಗೊಳಿಸಲೆಂದಾದರೂ ಈ ಕೃತಿಯನ್ನು ಓದ ಬೇಕು; ಅರಿತುಕೊಳ್ಳಬೇಕು; ಇತರರಿಗೆ ನೀತಿಯ ನೆಲೆ ತಿಳಸಬೇಕು.

ಮೃದುವಾದುದೇಂ ಸುಜನರ
ಹೃದಯ ನವನೀತದಿಂದ? ತನ್ನಯ ಪರಿತಾ–
ಪದಿ ದ್ರವಿಕುಂ ಬೆಣ್ಣೆ ಪೆರಂ–
ಗೊದವಿದ ತಾಪಕ್ಕೆ ದ್ರವಿಕುಮೊಳ್ಳಿದರೆಯ್ಯೆ ||೩೩||

ಪೂಜ್ಯಗುರು ಶ್ರೀ ಶಿರಹಟ್ಟಿಯವರ ಬದುಕು ಬಂಗಾರ. ಇವರ ನಡೆ ಶುದ್ಧ, ನುಡಿ ಶುದ್ಧವಾಗಿ ವಂಶವೃಕ್ಷವೇ ಉದ್ಧಾರವಾದುದನ್ನು ಕಂಡವರಿಗೆಲ್ಲ ಮುದಾ ನಂದ. ಇದೇ ೧-೬-೧೯೮೦ರಂದು ಜೀವನದ ೮೭ ಸಂವತ್ಸರಗಳನ್ನು ಶರಣರ ಮಾರ್ಗದಲ್ಲಿ ಸಾರ್ಥಕಗೊಳಿಸಿ, ಲಿಂಗದಲ್ಲಿ ಪಾದಾರ್ಪಣ ಮಾಡಿದ ಪುಣ್ಯ ಜೀವಿ ಇವರು; ಪ್ರಾತಃಸ್ಮರಣೀಯರು.

'ಅರುಣೋದಯ ಪ್ರಕಾಶನ' ಮತ್ತಾರದೂ ಅಲ್ಲ; ಅವರ ಮೊಮ್ಮಕ್ಕಳೇ ಮುಂದಾಗಿ ಅಜ್ಜನಿಗಾಗಿ ರೂಪಿಸಿಕೊಂಡ ಪ್ರಕಾಶನ. ತಮ್ಮ ನಿವೃತ್ತಿಯ ನಿರಾಡಂಬರ ಜೀವನದ ಪರಿಶುದ್ಧ ನಿಧಿಯಿಂದ ಈ ಅಮೂಲ್ಯವಾದ ಕೃತಿಯನ್ನು ಕನ್ನಡಿಗರಿಗೆ ಪುನಃ ನೀಡುತ್ತಿರುವ ನನ್ನ ಗುರುಗಳ ಕೊಡುಗೆ 'ಅಮೃತ ಕುಂಭ' ವಾಗಿದೆ ಎಂದು ನನ್ನ ಭಾವನೆ. ನಾಡಿಗರು ಈ ಅಮೃತವನ್ನು ಸವಿದು ಧನ್ಯರಾಗ ಲೆಂದು ಹಾರೈಸುತ್ತೇನೆ.

೧-೬-೧೯೯೦

**ಈಶ್ವರಚಂದ್ರ ಚಿಂತಾಮಣಿ**
ಅಧ್ಯಕ್ಷ
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ವಿಜಾಪುರ

# ಕೃತಜ್ಞತೆ

ನನ್ನ ಕರುಣಾಕರ ಸದ್ಗುರುದೇವ ಶ್ರೀ ಶಾಂತವೀರ ಮಹಾಸ್ವಾಮಿಗಳ ಸನ್ನಿಧಿಯಲ್ಲಿ 'ನೂರೊಂದು ನೆಲೆಯ ನಿಲವು' ಕಾವ್ಯವು ರಚಿತವಾಯಿತು. ಅವರು ನನ್ನನ್ನು ಅನುಗ್ರಹಿಸುವ ಸಂದರ್ಭದೊಡನೆಯೇ ಅದು ಪ್ರಕಾಶನ ಪಡೆಯಿತು. ಈಗ ೨೫ ವರ್ಷಗಳ ಹಿಂದಿನ ಅದರ ಪ್ರತಿಗಳು ಮುಗಿದು ಓಲೆ ಕಳಚುತ್ತಿರುವ ಒಂದು ಪ್ರತಿ ಮಾತ್ರ ಮನೆಯಲ್ಲಿತ್ತು. ಅದನ್ನು ನೋಡಿದ ನನ್ನ ಸನ್ಮಿತ್ರ ಶ್ರೀ ಈಶ್ವರಚಂದ್ರ ಚಿಂತಾಮಣಿ ಅವರು ಇದರ ಪುನರ್ಮುದ್ರಣ ಮಾಡಿಸಬೇಕೆಂದು ತಾವೇ ಅದರ ಉಸ್ತುವಾರಿಯನ್ನು ಕೈಕೊಂಡರು. ಇದಲ್ಲದೆ ತತ್ವಚಿಂತನಕ್ಕೆ ಮನೋಭೂಮಿಕೆಯನ್ನು ಸಿದ್ಧಗೊಳಿಸಿದ ಅರವತ್ತು ವರ್ಷಗಳ ಹಿಂದಿನ ನನ್ನ 'ನೀತಿ ಮುಕ್ತಾವಲಿ' ಎಂಬ ನೈತಿಕ ಕಾವ್ಯದ ಜೀರ್ಣಪ್ರತಿಯೊಂದು ತನ್ನನ್ನು ನೋಡಲು ಅವರ ಅಂತರಂಗಕ್ಕೆ ಕರೆಕೊಟ್ಟಿತೋ ಏನೋ, ಇವೆರಡನ್ನೂ ಸಂಯುಕ್ತವಾಗಿ ಮುದ್ರಿಸಲು ಯೋಜನೆ ಮಾಡಿಕೊಂಡಿದ್ದಾರೆ.

ಸರ್ವಮಾನ್ಯ ಸಾಹಿತಿಗಳಾದ ಶ್ರೀ ಈಶ್ವಚಂದ್ರ ಚಿಂತಾಮಣಿ ಅವರು ಅರವತ್ತು ವರ್ಷಗಳ ಹಿಂದೆ ಪ್ರಾಥಮಿಕ ಶಾಲೆಯಲ್ಲಿ ಸ್ವಲ್ಪ ಕಾಲ ನನ್ನ ವಿದ್ಯಾರ್ಥಿಯಾಗಿದ್ದರು. ಇದೊಂದು ಸಾಮಾನ್ಯವಾದ ಅತಿ ಸಣ್ಣ ಸಂಗತಿ. ಇದನ್ನೇ ದೊಡ್ಡದಾಗಿ ಭಾವಿಸಿ ದೊಡ್ಡ ಮನಸ್ಸಿನ ಚಿಂತಾಮಣಿ ಅವರು ನನ್ನನ್ನು ಪ್ರೇಮಾದರಗಳಿಂದ ಕಾಣುತ್ತಿದ್ದಾರೆ, ಗೌರವಿಸುತ್ತಿದ್ದಾರೆ. ೮೮ನೆಯ ವಯದಲ್ಲಿ ನನ್ನಿಂದ ಏನೂ ಮಾಡಲಿಕ್ಕೂ ಆಗದ ಸಮಯದಲ್ಲಿ ಮುದ್ರಣ ಪ್ರಕಾಶನಗಳ ಅಂಗೋಪಾಂಗ ಕಾರ್ಯಗಳನ್ನು ತಾವೇ ನಿರ್ವಹಿಸಿ ಹೆಣಗಾಡುತ್ತಿದ್ದಾರೆ. ತಮ್ಮ 'ನಿವೇದನೆ' ಲೇಖನ ಬರೆದು ಈ ಸಂಯುಕ್ತ

ಗ್ರಂಥಕ್ಕೆ ಹೊಸ ಮೆರಗು ಬರಮಾಡಿದ್ದಾರೆ. ಇದನ್ನು ನೋಡುತ್ತ ಕುಳಿತ ನನ್ನ ಹೃದಯು ಕೃತಜ್ಞತೆಯು ಹರ್ಷದಿಂದ ತುಂಬಿ ತುಳುಕಿದೆ.

ಅವರ ಸಾಹಿತ್ಯ ಸೇವೆಯೂ ಆದರ ಖ್ಯಾತಿಯೂ ಭವಿಷ್ಯತ್ತಿನಲ್ಲಿ ಇನ್ನೂ ಹೆಚ್ಚಿನ ಉನ್ನತಿಯನ್ನು ಪಡೆಯಲೆಂದು ಅಂತಃಕರಣಪೂರ್ವಕವಾಗಿ ಹಾರೈಸುತ್ತೇನೆ.

ಅಂದವಾಗಿ ಅಲ್ಪ ಸಮಯದಲ್ಲಿ ಮುದ್ರಿಸಿಕೊಟ್ಟ ಗದುಗಿನ ಶ್ರೀ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣದ ಸಂಚಾಲಕ ಶ್ರೀ ಅಶೋಕ ಅವರಿಗೆ ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

೧-೬-೧೯೬೦ **-ಲಕ್ಕಪ್ಪ ಅ. ಶಿರಹಟ್ಟಿ**

ವಿಜಾಪುರ

# ಷಟ್‌ಸ್ಥಲ ಸಿದ್ಧಾಂತ ರಹಸ್ಯ

**ಅಥವಾ**

# ನೂರೊಂದು ನೆಲೆಯ ನಿಲವು

## ಪೀಠಿಕೆ

**(ಕಂದ)**

ಕರುಣೇಕ್ಷಣದಿಂ ಬಗೆಯೊಳ್
ನೆರೆ ಪ್ರೇರಿಸಿ ನುಡಿಸಿ ನಲಿಸಿ ಪೊರೆಯುತ್ತಿಹ ಶ್ರೀ-
ಗುರು, ಶಾಂತವೀರ ಯೋಗೀ-
ಶ್ವರರಡಿಗಳಿಗೆರಗಿ ನೆನೆದು ನುತಿಸುವೆನೊಲವಿಂ ||

**(ವಾ. ಷ. ಗಳು)**

ಭಾವದಲಿ ಬೆಳಕಾಗಿ ಮನಕೆ ಹಂಬಲವಾಗಿ
ಆವಗಂ ದರ್ಶನೋತ್ಸವವಾಗಿ ರಾಜಿಸುವ
ಪಾವನವಿರಾಗಿ, ಸದ್ಭಕ್ತಜನರಾಗಿ, ವರಲಿಂಗಾನುರಾಗಿ, ನಿರುತ
ನೀವೆ ಪರಮಾರ್ಥಮಾದೊಡೆ ಸಾಕು ಬುಧರು ಸಂ-
ಭಾವಿಸುವ ಆಸೆಯೆನಗಿಲ್ಲ; ಕೃಪೆಯಾಗಿ ಬಿಡ-
ದೋವಿ, ನುಡಿಗಲಿಸಿ, ನಡೆನುಡಿಸಿ, ನೋಡುವಿರಾಗಿಯಿನ್ನಾನದೇಂ
ಸುಕೃತನೋ? ||೧||

ಆವ ಪುಣ್ಯದ ಫಲವೊ ನಿಮ್ಮ ಕಾಣುವ ಬಯಕೆ,
ಆವ ನೋಂಪಿಯೊ ನಿಮ್ಮ ಜ್ಞಾನದಾನಕೆ ಮನವ-
ನೀವ ಹಂಬಲವೆನಗೆ ಸಮನಿಸಿವೆ; ನಿಮ್ಮ ಮೃದುವಚನಾಮೃತದ ಧಾರೆಯು

ಜೀವಗಿಹ ತೊಡರನೆಡೆಗೆಡಿಸಿ, ಹೃದಯದಲಿ ಸ-
ದ್ಭಾವಮಂ ತೋರುತಿದೆ; ಶ್ರೀ ಶಾಂತವೀರ ಗುರು-
ದೇವ ನಿಮ್ಮಡಿಗೊಪ್ಪಿಸುವೆ ಬಾಲಪಾಠಗಳ ತಿದ್ದಿಕೊಳ್ಳಲು ತಪ್ಪನು ||೨||

ತಂದೆ ಪೇಳಿದ ನುಡಿಯ ಮರಳಿ ತೊದಲಿಂದೆಳೆಯ
ಕಂದನಾಡಿದುದು ಕುಂದಿಹುದೆಂದು ಮುಳಿಯುನಾ
ತಂದೆ; ನಲ್ನುಡಿಯೆಂದೊಲಿದು ನಲಿದು ನಗೆಮೊಗದಿ ಹಲವಾಗಿ ತಿಳಿಪನೈಸೆ?
ಕಂದನಾ ಸಮಯದೆಡಬಲರ ಪರಿಹಾಸಗಳಿ-
ಗೊಂದಿಸದೆ ಮನವನೊಲವಿಂಗೊಲಿದು ನುಡಿವಂತೆ
ಸಂದ ನಿಮ್ಮಡಿಯೊಳಾಡುವ ಹಸುಳೆಯಾಡುವೀ ಪಡಿನುಡಿಯೆ
ಕೃತಿಯೆನಿಸಿದೆ ||೩||

ನೂರೊಂದು ನೆಲೆಗಾರ, ಪರಮತತ್ವವಿಚಾರ,
ವೀರಶೈವದ ಸಾರ, ಭಕ್ತಮಾನಸ ಹಾರ,
ಪಾರಮಾರ್ಥಿಕ ಹಸಿವೆಗಾಹಾರ, ಷಟ್‌ಸ್ಥಲಜ್ಞಾನ ಕುಸುಮದ ಹಾರವು
ಓರಂತೆ ವೈವೆತ್ತ ಕಿರಿಯ ಹೊತ್ತಿಗೆಯಿದಂ
ಹಾರೈಸಿ ಸದ್ಭಕ್ತರೊಳಗಿಹ ಶಿವಾದ್ವೈತ
ಸಾರವಂ ಸವಿಯುವದು, ಮೇಲಿರುವ ಸಿಪ್ಪೆ ಚಿಪ್ಪುಗಳ ಕುಂದನು
ಗಣಿಸದೆ ||೪||

|| ಓಂ ||

# ಭಕ್ತ

ಕಂದ|| ತನುವಸುವು ವಸ್ತುವಿಸ್ತೃತ-
ಮನಿತ್ಯಮೆಂದರಿದು ಶ್ರದ್ಧೆಯಿಂ ಗುರುಪಥದೊಳ್
ಘನತರ ಲಿಂಗಕ್ರಿಯೆಗಳ-
ನನುಗೊಳಿಪಂ ಭವವಿಕಾರದೂರಂ ಭಕ್ತಂ

ಸೂಚನೆ—ದೇಹವೂ ಪ್ರಾಣವೂ ಧನಾದಿಗಳೂ ಸ್ಥಿರವಲ್ಲವೆಂದು ತಿಳಿದು, ಗುರುತೋರಿದ ಮಾರ್ಗದಲ್ಲಿ ನಂಬಿಗೆಯಿಟ್ಟು ಲಿಂಗಕ್ರಿಯೆಗಳಲ್ಲಿ ತೊಡಗಿ, ಸಂಸಾರದ ಹಿಗ್ಗು ತಗ್ಗುಗಳಿಗೆ ದೂರವಾಗಿದ್ದವನು ಭಕ್ತನು.

## ಭಕ್ತನ ಲಿಂಗಸ್ಥಲಂಗಳ್ ೧೫

**ಪಿಂಡ ಸ್ಥಲಂ:—**

ಹಲವು ಹುಟ್ಟುಗಳ ಹಿಂದೊಮ್ಮೆ ಜೀವಿಯು ತಿಳಿದೊ
ತಿಳಿಯುವೆಯೊ ಪರಪೀಡೆಯುಂ ತೊರೆದು, ನಿಜನೀತಿ
ಯಲಿ ಚಲಿಸಿ ಒಳಿತದಲಿ ಸತ್ತೊಡಾ ಬಳಿಕದೇ ಸುಳವಿಗೊಳಪಟ್ಟು
ಮುಂದೆ ||
ಪಲವು ಜನ್ಮದಿ ಸುಕೃತಗಳನೆಸಗೆ ತಾನೆ ಬಲ್
ಬಲಿದ ಪುಣ್ಯಂ ಸೂಕ್ಷ್ಮದಲಿ ನೆಲಿಸೆ ನರನಾಗಿ,
ಶಿಲೆಯಲಿಹ ಶಿಖೆಯಂತೆ ಶಿವನೊಳಗಿರಲ್ಕಾ ಪವಿತ್ರ ಜೀವಿಯೆ
ಪಿಂಡನು ||೧||

ಹಿಂದಿನ ಜನ್ಮಗಳ ಸುಕೃತದ ಫಲದಿಂದ ವಿಕಸಿತನಾದ ಮಾನವನ ಉದ್ಧಾರಕ್ಕಾಗಿ ಆತುರನಾಗಿರುವ ಶಿವನು, ಪುಷ್ಪದಲ್ಲಿಯ ಪರಿಮಳದಂತೆ ಸಕ್ಕರೆಯಲ್ಲಿಯ ಸವಿಯಂತೆ ತನ್ನಲ್ಲಿರುತ್ತಿರಲು ಆ ಮಾನವನು ಪಿಂಡನೆನಿಸುವನು.

**ಪಿಂಡಜ್ಞಾನ ಸ್ಥಲಂ:—**

ತನುಮನೇಂದ್ರಿಯ ಬುದ್ಧಿ ತಾನಲ್ಲವನ್ಯಮಿವು
ತನಗೆ; ತಾನಾತ್ಮನಾಗಿಹೆನು; ತನ್ನಾದಿಗುಂ
ತನಗುಮಾಶ್ರಯವಾಗಿ ಪ್ರೇರಕಂ ಕಾರಣಂ ಪರಮಾತ್ಮನೊಳಗಿರ್ಪನು||
ತನುವಿಗಂಟಿದ ರೋಗರುಜೆ ಕಷ್ಟಗಳ ಬಾಧೆ
ತನಗೇಕೆ? ಶಿವಶಕ್ತಿ ಹಮ್ಮಿದಾಟವಿದು ಪೆರ–
ತೆನಿತಿಲ್ಲವೆಂದಿಂತು ಭಾವಿಸಿ ವಿಚಾರಿಪೊಡೆಯುವನೆ ಪಿಂಡಜ್ಞಾನಿಯು ||೨||

ದೇಹ–ಇಂದ್ರಿಯಗಳು ನಾನಲ್ಲವು! ನಾನು ಆತ್ಮನು. ದೇಹಕ್ಕೂ ನನಗೂ ಆಶ್ರಯನಾಗಿರುವ ಪರಮಾತ್ಮನು ಒಳಗಿರುವನು. ಕಷ್ಟಗಳು ದೇಹಕ್ಕೆ ಸಂಬಂಧಿಸಿದವುಗಳು ಅವು ತನಗೇಕೆ? ಎಂದು ವಿಚಾರಿಸುವನು.

**ಸಂಸಾರ ಹೇಯ ಸ್ಥಲಂ:—**

ನಿತ್ಯಮಲ್ಲವು ದೇಹ–ದೇಹಸಂಬಂಧಿಗಳ–
ನಿತ್ಯಮಿವರಿಂ ಸುಖಮದೆಲ್ಲಿದೆ? ವಿಯೋಗದಲಿ
ಪ್ರತ್ಯಕ್ಷ ದುಃಖದಾಗರಮೆನಿತು ಕಾಲಮೀ ಬಂಧಮಿನ್ನೆಂತು ಬಿಡುವು?||
ನಿತ್ಯನಲ್ಲವೆ? ಬರಿದೆ ಸಾವ ಭಯ ತನಗೇಕ–
ದತ್ಯಧಿಕ ಗೂಢಮಾದೀ ತೊಡರು ಛೀ ಬೇಡ!
ಸತ್ಯಮಾರ್ಗವ ತೋರ್ಪರಾರೆಂದು ಸಂಸಾರಹೇಯದಲಿ ಹಂಬಲಿಸುವ ||೩||

ದೇಹವೂ ಅದಕ್ಕೆ ಸಂಬಂಧಿಸಿದವುಗಳೂ ನಿತ್ಯವಲ್ಲ; ಅವುಗಳಿಂದ ಸುಖವಿಲ್ಲ. ನಿತ್ಯನಾದ ನನಗೆ ಶರೀರವ ಮುಪ್ಪು–ಸಾವುಗಳ ಭಯವೇಕೆ? ಗೂಢವಾದ ಈ ತೊಡಕು ಎಂದು ಬಿಟ್ಟೀತು? ಯಾರಿಂದ ಬಿಟ್ಟೀತು? ಎಂದು ಯೋಚಿಸುವನು.

**ಗುರುಕಾರುಣ್ಯ ಸ್ಥಲಂ:—**

ಜ್ಞಾನನಿಧಿ ಕರುಣಿ ಲಿಂಗಕ್ರಿಯಾ ಪರಿಣತನ–
ನೂನಮತಿ ಮಹಿಮನಂ ಕಂಡುಬ್ಬಿ ಪದಕೆರಗಿ,
ಮಾಣಿಸೀ ಸಂಸಾರ ಭೀತಿಯಂ, ದೇವ ನಿಮ್ಮಡಿಯ ಮರೆವೊಕ್ಕೆನೆನಲು||
ಕಾಣುತಾತನ ಶಕ್ತಿಪಾತಮುಂ ಸಂತೃಪ್ತ–
ಮಾನಸಂ ಗುರುವೆಸಗೆ ತ್ರಿವಿಧ ದೀಕ್ಷೆಯ, ಶಿಷ್ಯ–
ನಾಣವಾದಿ ಮಲಂಗಳಳಿಯಲವನಮಲಾತ್ಮನಾದನಾ ಗುರುಕರುಣದಿ ||೪||

ಕ್ರಿಯಾಜ್ಞಾನಯುಕ್ತನಾದ ಮಹಾತ್ಮನನ್ನು ಕಂಡು ನಮಿಸಿ 'ಸಂಸಾರ ಬಂಧನವನ್ನು ಬಿಡಿಸಬೇಕು' ಎಂದು ಬೇಡುವನು. ಅವನು ಶಿವಕೃಪೆಗೆ ಆತುರನಾದುದನ್ನು ಕಂಡು ಗುರು ಸಂತೋಷದಿಂದ ಅವನಿಗೆ ತ್ರಿವಿಧ ದೀಕ್ಷೆಯ ಮಾಡುವನು. ಆದ್ದರಿಂದ ಶಿಷ್ಯನು ಮಲತ್ರಯ (ಆಣವ, ಮಾಯಾ, ಕಾರ್ಮಿಕಗಳು) ಅಳಿದು ಶುದ್ಧ ಜೀವನಾಗುವನು.

**ಲಿಂಗಧಾರಣ ಸ್ಥಲಂ:—**

ಗುರುವರನು ಕರವ ಶಿಷ್ಯೋತ್ತಮನ ಮಸ್ತಕದೊ–
ಳಿರಿಸಿ, ಹೃತ್ಕಮಲದಿಂ ಚಿತ್ಕಳೆಯ ಮನವೆರಿಸಿ
ಪೊರಗೆ ಕರದಿಷ್ಟಲಿಂಗದಿ ಬರಿಸಿ, ಪೂಜಿಸಿದು ಪ್ರಾಣನಿನಗೆಂದೀಯುತ||

ಅರುಹಿ ಕರ್ಣದೊಳು ಶಿವತತ್ವಮಂ ಮಂತ್ರಮಂ,
ಜರುಗಿಸುತ ವೇಧಾಮನುಕ್ರಿಯಾ ದೀಕ್ಷೆಗಳ,
ಪರಿಹರಿಸಿ ಭವಭಯುವ, ಪೊರೆದನಾ ಗುರು ಲಿಂಗಧಾರಣ
ಸಮಗ್ರತೆಯಲಿ ||೫||

ಗುರು, ಶಿಷ್ಯನ ಮಸ್ತಕದಲ್ಲಿ ಹಸ್ತವನ್ನಿರಿಸಿ, ಅಲ್ಲಿರುವ ಶಿವಚಿತ್ಕಳೆಯನ್ನು ಭಾವ–ಮನ–ದೃಷ್ಟಿಗಳ ಮಾರ್ಗ್ಗದಿಂದ ಕರದ ಇಷ್ಟಲಿಂಗದಲ್ಲಿ ಬರಿಸಿ, ಇದನ್ನು ಧರಿಸಿ ಪೂಜಿಸೆಂದು ಉಪದೇಶಿಸಿ ಭವಭೀತಿಯನ್ನು ಬಿಡಿಸುವನು.

**ಭಸ್ಮಧಾರಣ ಸ್ಥಲಂ:—**

ಶಿವನ ಮೈವೆಳಗೆನಿಪ ಚಿದ್ಭಸ್ಮ ನಿರುಪಾಧಿ–
ಕವಿದಂತರಂಗದ ವಿಭೂತಿ, ಗೋಮಯದಿಂದ
ಸುವಿಧಾನದಲಿ ಗೈದ ವರಭಸ್ಮ ಸೋಪಾಧಿಕದುವೆ ಬಹಿರಂಗ ಭೂತಿ||
ಭವಹರನ ರೂಪನೆನಿಪಂ ಭಸ್ಮಮಂ ಧರಿಸು-
ವವನಾವಗಂ; ಭಸ್ಮಧಾರಣಂ ಘನಮಲ್ತೆ?
ಧವಳ ತ್ರೈಪುಂಡ್ರಮೆಸೆಯಲಿ ಮೊಗದಿ, ಗುರುವಿನುಪದೇಶ
ಮೈದಾಳಿದಂತೆ ||೬||

ನಿರುಪಾಧಿಕವಾದ ಚಿದ್ಭಸ್ಮ ಅಂತರಂಗದ ಭಸ್ಮವು; ಗೋಮಯದಿಂದ ವಿಧಾನ ಪೂರ್ವಕ ಮಾಡಿದ ಭಸ್ಮವು ಸೋಪಾಧಿಕ ಭಸ್ಮವು. ಭಸ್ಮವು ಶಿವನ ಮೈವೆಳಗು; ಅದನ್ನು ಧರಿಸುವವನು ಶಿವರೂಪನಾಗುವನು.

**ರುದ್ರಾಕ್ಷಿಧಾರಣ ಸ್ಥಲಂ:—**

ಭಸಿತದಿಂ ಸ್ನಾನ ಧೂಳನ ಧಾರಣಂ ಗೈದು,
ಶಶಿಧರಾಕ್ಷಗಳನುರೆ ಧರಿಸಿ, ಲಿಂಗಾರ್ಚನೆಯು–
ನೆಸಗುವದು ನಿಚ್ಚಂ; ಶಿವಾಕ್ಷಿ ಸಕಲಾಘವಂ ಕ್ಷಯಿಸಿ ಪಾವನ
ಗೊಳಿಪುದು; ||
ಅಸಮಾಕ್ಷನಕ್ಷಿಬಿಂದುಗಳೆಂದು ಪೇಳೆ, ಮೇ-
ಹೊಸೆದು ದಯೆಗೈದ ಗುರುಕರುಣಾಕಟಾಕ್ಷದಿಂ
ನುಸುಳ್ವ ಸಾನಂದಜಲಬಿಂದುವೆನೆ ಪೇಳೆ, ರುದ್ರಾಕ್ಷಿಗಳ ಘನತೆ–
ಗೆಣೆಯೇ? ||೭||

ರುದ್ರಾಕ್ಷಿಗಳು, ಶಿವನ ಕಂಬನಿಗಳೆಂದೂ, ಗುರುನೇತ್ರದಿಂದ ಹೊರಬಂದ ಆನಂದ ಜಲಬಿಂದುಗಳೆಂದೂ ಹೇಳಲ್ಪಡುತ್ತವೆ. ಅವುಗಳನ್ನು ಧರಿಸುವದರಿಂದ ಸಕಲ ಪಾಪ ನಿವಾರಣೆಯಾಗುವದು.

**ಮಂತ್ರಜಪ ಸ್ಥಲಂ:—**

ಶಿವತತ್ವಬೋಧಕಂ ಸಕಲ ಮಂತ್ರಕೆ ಪ್ರಾಣ,
ಶಿವನಾದಿನಾಮ, ಲಿಂಗಾಂಗಸಮರಸ ಮೂಲ,
ಶಿವಯೋಗ ಸಾಧನಂ, ವೇದಾಂತ ಸಾರಮಹ ಪಂಚಾಕ್ಷರೀ ಮಂತ್ರವ||
ಸುವಿಮಲ ಶಿವೋಪಾಸಕಂ ಸದಾ ಮೂಲ ಪ್ರ-
ಣವದೊಡನೆ ಕ್ರಮದಿ ಜಪಿಸುವದು; ತನು-ಮನ-ಭಾವ-
ಮವಿರಲ ಸುಮಂತ್ರಮಯಮಾಗೆ ಪೇಳ್ ಕೀಳು ನೆನಹುಗಳೆಲ್ಲಿ-
ಯಘಮೆಲ್ಲಿದೆ? ||೮||

ಪ್ರಣವ ಸಹಿತ ಪಂಚಾಕ್ಷರಿ ಮಂತ್ರವು ಪರಶಿವನ ಹೆಸರು. ಶಿವತತ್ವವೇ ಅದರ ಅರ್ಥವು. ತನುಮನ ಭಾವಗಳು ಮಂತ್ರಮಯವಾದರೆ ಕೀಳು ವಿಚಾರ ಗಳಿಗೂ ಪಾಪಕ್ಕೂ ಆಸ್ಪದವಿಲ್ಲ. ಆ ಮಂತ್ರಜಪಿಸಿ ಶಿವಯೋಗಸಿದ್ಧಿ ಪಡೆಯುವದು.

**ಭಕ್ತಿಮಾರ್ಗ ಕ್ರಿಯಾ ಸ್ಥಲಂ:—**

ಗುರುಕರುಣೆ, ಲಿಂಗಧಾರಣೆ, ಭಸ್ಮ, ರುದ್ರಾಕ್ಷಿ,
ವರಮಂತ್ರ ಮೈಗೂಡೆ, ಭಕ್ತಿಮಾರ್ಗಕ್ರಿಯಾ-
ನಿರತನಾಗಲ್ ಸಮರ್ಥಂ ಭಕ್ತನವನಿನ್ನು ಭವಭೀತಿಗೊಳಗಾಗದೆ||
ಗುರುಸೇವೆಯಿಷ್ಟಲಿಂಗಾರ್ಚನಂಗಳನೆಸಗಿ
ಹರನಯನ ಭಸ್ಮತ್ರಿಪುಂಡ್ರ ಭೂಷಿತನಾಗಿ
ಹರಣವನ್ನಿರಿಸಿ ಲಿಂಗದಿ, ಮಂತ್ರ ಜಪಿಸುತ್ತ ಬಾಳುವಂ ಭಕ್ತಿವಿಡಿದು ||೯||

ಗುರುಕರುಣೆಯಿಂದ ಲಿಂಗಧಾರಣೆಯಾಗಿ ಭಸ್ಮ-ರುದ್ರಾಕ್ಷಿ-ಮಂತ್ರಗಳು ಮೈಮನಂಗಳ ಕೂಡಿದರೆ ಭಕ್ತಿಮಾರ್ಗದ ಆಚರಣೆಗೆ ಸಮರ್ಥನಾಗುವನು, ಲಿಂಗಾಚಾರ ನಿಷ್ಠನಾಗಿ ಭಕ್ತಿಪಥದಲ್ಲಿ ಬಾಳುವನು.

**ಉಭಯ ಸ್ಥಲಂ:—**

ಮಲದ ಮುಸುಕಂ ತವಿಸಿ, ತಿಳಿಗಣ್ಣ ತೆರಿಸಿ, ಭಯ—
ಗಳೆದು, ನಿನ್ನರಿವೆಂದು ಕರಕೆ ಲಿಂಗವನಿತ್ತು,
ತಿಳಿಸಿಯನುಭವಿಸಲಣ್ಣಿಸಿದ ಗುರುವರಿವಿನಿಂ ಬೇರಲ್ಲ; ಗುರುಕರುಣೆಯ॥
ವಿಲಸಿತಾಕಾರತೆಯೆ ಲಿಂಗಧಾರಣವಂಗ—
ದಲಿ ಲಿಂಗವಂ ಕೀಲಿಸಿದ ಗುರುವಿನಲಿ ಲಿಂಗ—
ದಲಿ ಭೇದವಿಲ್ಲೆಂದು ನಂಬಿಯುಭಯಸ್ಥಲದಿ
ಭಕ್ತ್ಯುಪಾಸನೆಗೈವುದು ॥೧೦॥

ಅರಿವಿನ ಕಣ್ಣು ತೆರೆಯಿಸಿ, ಭೀತಿಯನ್ನು ಪರಿಹರಿಸಿ, 'ನಿನ್ನ ಅರಿವೇ ಇದು' ಎಂದು ಲಿಂಗವನ್ನು ಕೊಟ್ಟ ಗುರುವು ಅರಿವಿನಿಂದ ಬೇರಲ್ಲ. ಗುರುಕರುಣೆ ಸಾಕಾರವಾದುದೇ ಇಷ್ಟಲಿಂಗಧಾರಣೆ! ಗುರುಲಿಂಗಗಳಲ್ಲಿ ಭೇದವಿಲ್ಲ.

**ತ್ರಿವಿಧ ಸಂಪತ್ತಿ ಸ್ಥಲಂ:—**

ಪರಶಿವನೆ ಲಿಂಗಾಂಗವಾಗಿ ಸ್ವಯಲೀಲೆಯಿಂ,
ಗುರುವಾಗಿಯಂಗನಂ ಸಂಸ್ಕರಿಸಿ ಬೋಧಿಸುತ,
ಪರಲಿಂಗವಾಗಿ ಸರ್ವಾಂಗದೊಳ್ ನೆಲಿಸಿ ಪೂಜಿಸಿಕೊಳ್ಳುತಾ ಭಕ್ತನ॥
ಪರುಕಿಸಲ್ ತಾನೆ ಜಂಗಮವಾಗಿ ಮೆರೆವನೀ
ಗುರುಲಿಂಗಜಂಗಮವನೇಕಭಾವದಿಯಜಿಸು—
ತರಿವನುಭವಾನಂದಗಳ ತ್ರಿವಿಧ ಸಂಪತ್ತಿಯಿಂ ರಾಜಿಪಂ ಭಕ್ತನು ॥೧೧॥

ಪರಶಿವನೆ ಲೀಲೆಗಾಗಿ ಲಿಂಗ ಅಂಗ ಆದನು; ಗುರುವಾಗಿ ಅಂಗನನ್ನು ಸಂಸ್ಕರಿಸಿದನು; ಲಿಂಗವಾಗಿ ಪೂಜೆಗೊಳ್ಳುವನು, ಜಂಗಮವಾಗಿ ಪರೀಕ್ಷಿಸುವನು. ಗುರುಲಿಂಗಜಂಗಮ ಹಾಗೂ ಅವರ ಅಂತರಂಗಸ್ವರೂಪಗಳಾದ ಅರಿವು ಅನುಭವ ಆನಂದಗಳು ಈ ತ್ರಿವಿಧ ಸಂಪತ್ತಿನಿಂದ ಕೂಡಿರಬೇಕು.

**ಪ್ರಸಾದ ಸ್ವೀಕಾರ (ಚತುರ್ವಿಧಸಾರಾಯ) ಸ್ಥಲಂ:—**

ತನುವಿನಿಂ ಗುರುಚರಣಕಮಲಸೇವೆಯನೆಸಗಿ,
ಮನವ ಲಿಂಗೋಪಾಸನೆಯಲಿ ನಿಲ್ಲಿಸಿ, ಶಿವನ
ಧನವ ಜಂಗಮಕಿತ್ತು ತನ್ನದೆನ್ನದೆ, ತತ್ಪ್ರಸಾದಗಳ ಪಡೆದಂತಿರೆ॥

ವಿನುತವಹ ಗುರುಲಿಂಗಜಂಗಮ* ಪ್ರಸಾದಗಳ
ಘನತರ ಚತುರ್ವಿಧದ ಸಾರಾಯುದನುಭವದೊ-
ಳನುದಿನದಿ ಸಂತೃಪ್ತಿವೈಭವದೊಳಿರ್ಪಂಗೆ ದುಃಖಮುಂಟೇ
ಜಗದೊಳು? ||೧೨||

ಗುರುಲಿಂಗಜಂಗಮರಿಗೆ (ಕ್ರಮವಾಗಿ) ತನುಮನಧನಗಳನ್ನು ಅರ್ಪಿಸಿ ಅವರ ಪ್ರಸಾದ ಪಡೆದು, ಗುರು-ಲಿಂಗ-ಜಂಗಮ-ಪ್ರಸಾದ ಎಂಬ ನಾಲ್ಕು ತರದ ಮುಕ್ತಿಸಂಪತ್ತಿನ ಅನುಭವದಿಂದ ತೃಪ್ತರಾದವರಿಗೆ ದುಃಖವೇ ಇಲ್ಲ.

**ಸೋಪಾಧಿದಾನ (ಉಪಾಧಿಮಾಟ) ಸ್ಥಲಂ:—**

ಸದಪೇಕ್ಷೆ ಸುವಿಚಾರ ಸತ್ಕ್ರಿಯೆಗಳಿಂ ಮನಂ
ಮೃದುವಾಗಿ, ಗೃಹಸೌಖ್ಯ ಪುಣ್ಯಫಲಗಳ ಬಯಸಿ,
ಮುದವೆತ್ತು, ದಾನಂಗಳಂ ಪಲವು ಸಲ್ಲಿಸಿ ಸಮಾಜದೊಳ್ ಕೀರ್ತಿ ಪಡೆದು||
ಸದುಹೃದಯರೊಳಿಯಲಿ ನಿಂದು ಗುಣಯುತನೆನಿಸಿ,
ಹದುಳದಿಂ ಶಿವನ ಕೊಂಡಾಡಿ, ಪೆರ್ಚುತ ನಲಿವು-
ದಿದುಪಾಧಿ ಮಾಟಸ್ಥಲಂ; ದಾನಹಂತದೊಳ್ ಪ್ರಥಮಗತಿಯಿದು
ಭಕ್ತಗೆ ||೧೩||

ಒಳ್ಳೆಯ ಮನುಷ್ಯನಾಗಿ ಸೌಖ್ಯ-ಪುಣ್ಯ ಮುಂತಾದ ಫಲಗಳನ್ನು ಬಯಸಿ, ಪರೋಪಕಾರ ಬುದ್ಧಿಯಿಂದ ಹಲವು ದಾನಗಳನ್ನು ಮಾಡಿ, ದಾನಿಯೆಂದು ಸಮಾಜದಲ್ಲಿ ಹೆಸರು ಗಳಿಸಿ, ಶಿವನ ಕೊಂಡಾಡುತ್ತ ಸಂತೋಷದಿಂದ ಇರುವನು.

**ನಿರುಪಾಧಿದಾನ (ನಿರುಪಾಧಿಮಾಟ) ಸ್ಥಲಂ:—**

ಪೊಡವಿ ನೀರ್ ಬೆಂಕಿ ವಾಯ್ವಾಕಾಶ ಭೂತಗಳ್
ಜಡ-ಜೀವಿ-ಘನ-ಸೂಕ್ಷ್ಮವಿಂತಖಿಲ ವಸ್ತುಗಳ್
ಮೃಡನೊಡವೆಯಾಗಿರಲ್ ಕೊಡುವೆ ನಾನೆಂಬುದಿನ್ನೆಲ್ಲಿ? ಬೇಕಾದನಿತನು||
ಪಡೆಯಿರಿದೆ ಕೊಳ್ಳಿರೆಂದುಬ್ಬಿ ನೀಡುವ ಹರುಷ-
ವೆಡೆಬಿಡದಿರಲ್ಕೆ ನಿರುಪಾಧಿಮಾಟಸ್ಥಲಂ;
ಪಡೆಯ ಬಯಸಂ ಫಲವ: ದಾನಹಂತದೊಳುಚ್ಚತರಮಾದುದಿದು
ಭಕ್ತಗೆ ||೧೪||

ಪ್ರಪಂಚದ ಜಡಾಜಡ ವಸ್ತುಗಳೆಲ್ಲ ಶಿವನ ಒಡವೆಗಳಾದ್ದರಿಂದ 'ನಾನು ಕೊಡುವೆನು' ಎಂಬುದು ಸರಿಯಲ್ಲ; 'ಹಿಡಿಯಿರಿ, ಬೇಕಾದಷ್ಟು ತಕ್ಕೊಳ್ಳಿರಿ' ಎಂದು ಉಬ್ಬುಬ್ಬಿ ದಾನ ಮಾಡುತ್ತ ಆ ನಿರಭಿಮಾನ ಸಂತೋಷದಲ್ಲಿರುವನು.

**ಸಹಜದಾನ (ಸಹಜಮಾಟ) ಸ್ಥಲಂ:—**

ಕುಡುವೊಡವೆ ಬಂದುದು ಸದಾಚಾರದಿಂದೊಸೆದು
ಕುಡುವವಂ ಶಿವಭಕ್ತ ಲೀಲೆಯಿಂ ಶಿವಯೋಗಿ
ಪಡೆಯುವವನೀ ಮೂರ್ವರೊಂದೆ ಶಿವರೂಪಮಿರೆ
ನೀನಾನದೆಂಬುದಿರದೆ ||
ಕುಡುವ ಕೊಳ್ಳುವರೆಂಬ ತೆರಮಿರದೆ, ಮೂವರಲಿ
ನಡೆವುದುಪಯುಕ್ತ ಕಾರ್ಯಂ; ಸಹಜಮಾಟಮಿದೆ
ಕುಡುವೆಡೆಯೊಳೀಕ್ರಮಂ ದಾನಹಂತದೊಳುಚ್ಚತಮಮಹುದು
ಸದ್ಭಕ್ತಗೆ ||೧೫||

ಸದಾಚಾರದಿಂದ ಸಂಪಾದಿಸಿದ ಧನವೂ, ಕೊಡುವ ಶಿವಭಕ್ತನೂ ಪಡೆಯುವ ಶಿವಯೋಗಿಯೂ ಒಂದೇ ಶಿವಸ್ವರೂಪರೆಂದು ಬಗೆದರೆ ಯಾಚಕ-ದಾನಿ-ದಾನಗಳೆಂಬ ಪ್ರಕಾರವಿಲ್ಲದೆ ಒಟ್ಟಿನಲ್ಲಿ ಒಂದು ಉಪಯುಕ್ತಕಾರ್ಯ ಮಾತ್ರವಾಗಿರುವದು.

## ಭಕ್ತನ-ಆಚಾರ-ಲಿಂಗಸ್ಥಲಂಗಳ್: ೯

**ದೀಕ್ಷಾಗುರು ಸ್ಥಲಂ:—**

ಹರತಾನೆ ಪೂಜ್ಯ ಪೂಜಕನಾಗಿ, ತತ್ಕ್ರಮವ
ಬೆರಸಲ್ಕೆ ಗುರುವಾಗಿ ತೋರುವಂ; ದೀಕ್ಷೆಯಿಂ
ಕರಗಿಸಿ ಮಲತ್ರಯವ, ಶಿಷ್ಯನಂ ಪರಿಶುದ್ಧ ಜೀವನೆಂದಂಗನೆಂದು ||
ಪರಿಣಮಿಸುತಂಥತ್ವದಿಂದವನನೆತ್ತಿ, ಒಳ-
ಗಿರುವ ಶಿವಚಿತ್ಕಳೆಯ ಯೋಗಬಲದಿಂ ತೋರಿ
ಪರಮವಿದು ನಿನಗನ್ಯವಲ್ಲೆಂದು ತಿಳುಪಿ ದೀಕ್ಷಾಗುರುವು
ತಾನೆನಿಪನು ||೧೬||

ಶಿವನೆ ಪೂಜ್ಯಪೂಜಕನಾಗಿ ಅವರ ಯೋಜನೆ ಮಾಡಲು ತಾನೆ ಗುರುವಾಗಿ ಶಿಷ್ಯನ ಮಲತ್ರಯವ ಕರಗಿಸಿ, ಶುದ್ಧಜೀವನಾಗಿಸಿ, ಒಳಗಿನ ಶಿವಚಿತ್ಕಳೆಯ ಇಷ್ಟದಲ್ಲಿರಿಸಿ, 'ಇದು ನಿನಗನ್ಯವಲ್ಲೆ'ಂದು ಹೇಳಿ ದೀಕ್ಷಾಗುರುವು ಎನಿಸಿದನು.

**ಶಿಕ್ಷಾಗುರು ಸ್ಥಲಂ:—**

ಹೊಳೆದ ಬೆಳಕಿಗೆ ಪುಳುಂಕಿತನಾಗಿ ಗುರುಚರಣ-
ಜಲಜದಲಿ ಮಣಿದ ಶಿಷ್ಯೋತ್ತಮನ ಶಿರವ ಕರ-
ತಲದಿಂದಲೆತ್ತಿ 'ಭವಭಯು ಹರಿಪ ಕರದಿಷ್ಟಲಿಂಗವಿದೆ
ನೋಡಿ ಯಜಿಸು; ||
ಚಲಿಸದಿಹ ಮನದೊಳಾ ಲಿಂಗವೇ ಪ್ರಾಣವೆಂ-
ದೊಲಿದು ಧ್ಯಾನಿಸು; ಧ್ಯಾನದಿಂ ಕದಲದಿಹ ಮನವ
ಸಲೆ ಲಿಂಗದಲಿ ಲೀನಿಸೆಂದು ಬೋಧಿಸುತ ಶಿಕ್ಷಾಗುರುವು
ತಾನೆನಿಪನು ||೧೭||

ಆತ್ಮದ ಬೆಳಕನ್ನು ಕರದಲ್ಲಿ ಕಂಡು ಪುಳುಕಿತನಾದ ಶಿಷ್ಯನ ಮೈದಡವಿ 'ಕರದ ಲಿಂಗವನ್ನು ಪೂಜಿಸಿ ದೃಷ್ಟಿಸು, ಲಿಂಗವೇ ಪ್ರಾಣವೆಂದು ಮನದಲ್ಲಿ ಧ್ಯಾನಿಸು. ಆ ಧ್ಯಾನದಲ್ಲಿ ಮನವನ್ನು ಕೂಡಿಸು' ಎಂದು ಬೋಧಿಸಿ ಶಿಕ್ಷಾಗುರುವೆನಿಸಿದನು.

**ಜ್ಞಾನಗುರು ಸ್ಥಲಂ:—**

ಸದುಪದೇಶವನಿತ್ತು ನಿಜಶಿಷ್ಯನಂತರಂ-
ಗದ ಸಂದೆಗವ ಕಳೆದು, ಸಮುಚಿತೋಪಾಸನೆಯೊ-
ಳುದಿತ ಭಕ್ತಿಯೊಳು, ಜ್ಞಾನಕ್ರಿಯಾ ಮಾರ್ಗದೊಳು, ಮನಭಾವ
ಕರಣಂಗಳ ||
ಅದಿರದಂತಿರಿಸಿ, ಶಿವತತ್ವ ಮೈಗೂಡಲಿಹ
ಪದಪಿನುಬ್ಬರಮಾಗುತಿರಲನುಭವಾನಂದ
ಸುಧೆಯ ಶರಧಿಯೊಳಾಳಿಸಿದ ಶ್ರೀಗುರುವೆ ಜ್ಞಾನಗುರು
ತಾನೆನಿಪನು ||೧೮||

ಉಪದೇಶದಿಂದ ಶಿಷ್ಯನ ಸಂಶಯಗಳನ್ನು ಕಳೆದು, ಉಪಾಸನೆಯ ಕ್ರಿಯಾ

ಜ್ಞಾನ ಮಾರ್ಗದಲ್ಲಿ ನಿಲ್ಲಿಸಿ, ಅದರಿಂದ ಶಿವತತ್ವ ಪ್ರಕಟವಾಗಲು ಅದರ ಅನುಭವದ ಆನಂದ ಸಾಗರದಲ್ಲಿ ಮುಳುಗಿಸಿ ಜ್ಞಾನಗುರುವೆನಿಸಿದನು.

**ಕ್ರಿಯಾಲಿಂಗ ಸ್ಥಲಂ:—**

ತ್ರಿವಿಧ ಗುರುವಿಜ್ಞಾನಯೋಗದಿಂದ್ಯೈದಿ, ಪರ-
ಶಿವನ ಸಲೆ ಸಕಲ ಸದ್ರೂಪವಮಾದಿಷ್ಟಲಿಂ-
ಗವೆ ಕರದಿ ಕಾಣಿಸಿದೆಯದರರ್ಚನೆಯೆ ಸರ್ವ* ಕ್ರಿಯೆಗಳಿಗೆ
ಕೇಂದ್ರಮಾಗಿ ||
ಶಿವಭಕ್ತನಖಿಲ* ಕ್ರಿಯೆಗಳನಿಂಬುಗೊಂಡು ಲಿಂ-
ಗವು ಕ್ರಿಯಾಲಿಂಗಮಾಗಿಹುದು; ತದುಪಾಸನೆಯು
ಶಿವಮುಹಾಯೋಗಮಿರಲನ್ಯ ಯಾಗಾದಿ ಕರ್ಮಗಳೇಕೆ
ಬಿಸುಟು ಪೋಗು ||೧೯||

ಮೇಲಿನ ಮೂಬಗೆಯ ಗುರುಕ್ರಿಯೆಯಿಂದ ಬಂದ ಶಿವನ ಸಕಲ ಸದ್ರೂಪವಾದ ಇಷ್ಟಲಿಂಗವೆ ಭಕ್ತನ ಎಲ್ಲ ಕ್ರಿಯೆಗಳಿಗೆ ಕೇಂದ್ರವಾಗುವದು; ಎಲ್ಲ ಕ್ರಿಯೆಗಳೂ ಆ ಲಿಂಗಕ್ಕಾಗಿರುವವು. ಅದರಿಂದ ಅದು ಕ್ರಿಯಾಲಿಂಗವಾಗುವದು.

**ಭಾವಲಿಂಗ ಸ್ಥಲಂ:—**

ಲಿಂಗಮದು ಕ್ರಿಯೆಗೊಂಡು ಸಕಲನಿಷ್ಕಲ* ಪ್ರಾಣ
ಲಿಂಗಮಾಗಲು ಪ್ರಾಣದೆಣಿಕೆಯಲಿ ಸಂದು, ಬಳಿ-
ಕಂಗನುರುಭಾವದೊಳು ಬಲಿದು ಬೆರೆದಿಂಬುಗೊಂಡಿರೆ ಭಾವಲಿಂಗಮಾಗಿ ||
ಲಿಂಗಭಾವವೆ ಭಾವಮಾಗಿ ಭಕ್ತನ ಸುಚರಿ-
ತಾಂಗನೆಂದೆನಿಸಿ, ಪರಮಾನಂದಯುಕ್ತ ಲಿಂ-
ಗಾಂಗಸಮರಸ ಸುಖದ ಪೊರೆಗೈದಿಸಿದ ವಿಭವನೇನೆಂದು
ಬಣ್ಣಿಸುವೆನು? ||೨೦||

ಲಿಂಗವು ಸರ್ವಕ್ರಿಯೆಗಳ ಅಂತರ್ಯಾಮಿಯಾಗಲು ಪ್ರಾಣವೇ ಆಗುವದು. ಅದು ಹಾಗೆ ಸಕಲ-ನಿಷ್ಕಲ-ಪ್ರಾಣಲಿಂಗವಾಗಿ ಬಳಿಕ ಅಂಗನ ಭಾವದಲ್ಲಿ ಲಿಂಗಭಾವವೇ ಭಾವವಾಗಿ ಇರುವ ಪರಮಾನಂದ ಸ್ವರೂಪದ ಭಾವಲಿಂಗವೆನಿಸುವದು.

**ಜ್ಞಾನಲಿಂಗ ಸ್ಥಲಂ:—**

ಭಾವಲಿಂಗವ ಪ್ರಕಟಗೊಳಿಪ ಸುಜ್ಞಾನ ತಾ-
ನಾವ ತತ್ವದಲಿ ತಲ್ಲೀನವಾದಪುದದುವೆ
ಕೋವಿದರ್ ಪೇಳ್ವ, ಶಿವಯೋಗಿಗಳ್ ಮಾನಿಸುವ
ಜ್ಞಾನಲಿಂಗಮದೆನಿಪುದು ||
ಭಾವಿಪೊಡೆ ಕಲ್ಪಿತಂ ಸ್ಥೂಲಸೂಕ್ಷ್ಮಂ ಕಾರ-
ಣಾವಸ್ಥೆಗಳ್ ಪರಮನೊಳ್; ಸಚ್ಚಿದಾನಂದ-
ನೊರ್ವನೆ ಪರಾತ್ಪರ ಬ್ರಹ್ಮನೆಂದಚ್ಚಮರಿದೊಡೆ
ಜ್ಞಾನಲಿಂಗಿಯೆನಿಪ ||೨೧||

ಭಾವಲಿಂಗವನ್ನು ವ್ಯಕ್ತಗೊಳಿಸುವ ಅರಿವು ಯಾವ ಪರತತ್ವದಲ್ಲಿ ಕೂಡಿರುವದೋ ಅದು ಜ್ಞಾನ ಲಿಂಗವು. 'ಸ್ಥೂಲ-ಸೂಕ್ಷ್ಮ-ಕಾರಣಗಳು ಪರಶಿವನಲ್ಲಿ ಕಲ್ಪಿತವಾಗಿವೆ. ಸಚ್ಚಿದಾನಂದನು ಒಬ್ಬನೇ' ಎಂದು ನಿಶ್ಚಯವಾಗಿ ತಿಳಿದವನೆ ಜ್ಞಾನಲಿಂಗಿಯು.

**ಸ್ವಯ-ಜಂಗಮ-ಸ್ಥಲಂ:—**

ನಯಭಕ್ತಿಗಳ ನಡೆಯಲಿರ್ಪ ಸದ್ಭಕ್ತಂಗೆ
ಜಯವನೀಯಲ್ ತ್ರಿವಿಧಲಿಂಗವೊಂದಾನಂದ-
ಮಯ ಜಂಗಮದ ರೂಪ ತಾಳ್ದುದಾ ಜಂಗಮಂ
ತ್ರಿವಿಧರೂಪಾಯ್ತುದರೊಳು ||
ಸ್ವಯ ಜಂಗಮಂ ಮಠದೊಳಿರ್ದು ಶಿವತತ್ವದ-
ಲ್ಲಿಯ ತಿರುಳ ಪ್ರಕಟಿಸಿ, ಸಮಾಜದಲಿ ಚೈತನ್ಯ-
ಮಯನೆನಿಸಿ, ಭಕ್ತಿಯಿಂ ತಾನೆ ಬಂದುದ ಕೊಂಡು ಕೊಡುವಂ
ಪ್ರಸಾದಂಗಳ ||೨೨||

ಸದ್ಭಕ್ತನ ಉದ್ಧಾರಕ್ಕಾಗಿ ತ್ರಿವಿಧಲಿಂಗವು ಆನಂದಮಯ ಜಂಗಮರೂಪ ತಾಳಿತು. ಜಂಗಮ ಮೂದೆರ! ಅವರಲ್ಲಿ ಸ್ವಯ ಜಂಗಮನು ಮಠದಲ್ಲಿ ಇದ್ದು ಸಮಾಜದಲ್ಲಿ ಶಿವತತ್ವ ಬೀರಿ ಚೇತನಗೊಳಿಸಿ, ತಾನೇ ಬಂದುದಷ್ಟನೇ ತನಗಾಗಿ ಸ್ವೀಕರಿಸಿ ತೃಪ್ತನಾಗಿರುವನು.

**ಚರ-ಜಂಗಮ-ಸ್ಥಲಂ:—**

ದೇಹೇಂದ್ರಿಯಾದಿಗಳೆ ನಾನು ನನ್ನವು ಎಂಬ
ಮೋಹಮಂ ಬಿಟ್ಟು ಸುಜ್ಞಾನದುಜ್ವಲತೆಯು ಶಿ-
ವೋಹಮೆಂದದನೆ ಬೋಧಿಸುತ ಭಕ್ತರಲಿ ದಿನಕೊಂದೆಡೆಯೊ-
ಳೊಂದು ಸಲವೇ ||
ದೇಹಿ ಭಿಕ್ಷೆಯುನೆಂದು ಬಂದುದಕೆ ತೃಪ್ತಿಗೊಂ-
ಡಾ ಹಿಗ್ಗು ತಗ್ಗುಗಳನಳಿದು ಶಿವಯುತಿ ಚರಿಪ-
ನಾ ಹದನನೇನೆಂಬೆನದುವೆ ಚರಜಂಗಮಸ್ಥಲವೆಂದು
ಬೆಳಗೀವುದು ||೨೩||

ದೇಹೇಂದ್ರಿಯಗಳ ಅಭಿಮಾನ ಬಿಟ್ಟು ತಾನು ಶಿವನು ಎಂಬದನ್ನೇ ತಿಳಿದು ಅದನ್ನೇ ಬೋಧಿಸುತ್ತ ದಿನಕೊಂದು ಸ್ಥಲವಲ್ಲಿ ಒಂದು ಸಲವೇ ಭಿಕ್ಷೆ ಬೇಡಿ ಬಂದುದರಲ್ಲಿಯೇ ತೃಪ್ತಿಗೊಂಡು ಚರಜಂಗಮನು ಚರಿಸುವನು.

**ಪರ-ಜಂಗಮ-ಸ್ಥಲಂ: —**

ಪರಿಣತ ಜ್ಞಾನಿ ಚರ ಮುಂದೆ ನಿಂದಾಶ್ರಮದಿ,
ಹರನಿತ್ತುದಂ ಪಡೆದು, ಬೇಡದನ್ಯರ, ವೀರ-
ವಿರತಿಯಂ ತಾಳ್ದು, ವರಲೀಲಾವಿನೋದದಿಂ ಭಕ್ತಾಳಿಗರಿವನಿತ್ತು ||
ತರಿದು ತ್ರಿಗುಣಂಗಳಂ, ಸುಖದುಃಖ ಜಾಲಮಂ
ಜರೆದುರುಹಿ, ಪರತರಬ್ರಹ್ಮ ತಾನೆಂದರಿದು
ಪರಿಭಾವಿಪಂ ನಿರಂಜನಮೂರ್ತಿ ಪರಜಂಗಮಂ ಜಗವನುದ್ಧರಿಪನು ||೨೪||

ಪೂರ್ಣಜ್ಞಾನಿಯಾದ ಆ ಜಂಗಮನು ಒಂದು ಆಶ್ರಮದಲ್ಲಿ ನಿಂತು ಸುಖ ದುಃಖಗಳ ಬಲೆಯನ್ನು ತೊಡೆದು ಹಾಕಿ ನಿರಂಜನ ಮೂರ್ತಿಯಾಗಿ ಯಾರನ್ನೂ ಬೇಡದೆ, ಲೀಲೆಯಿಂದ ಭಕ್ತರಿಗೆ ಅರಿವುಗೊಡುವವನು ಪರಜಂಗಮನು.

|| ಓಂ ||

## ಮಹೇಶ

ಕಂದ|| ಲಿಂಗೈಕನಿಷ್ಠೆ ಶರಣರ
ಸಂಗ ಸದಾಚಾರ ಭಕ್ತಿ ಧರ್ಮಾಚರಣಂ
ಪಿಂಗದ ವ್ರತದುತ್ಸಾಹಂ
ಸಂಗಡಿಸಿದ ವೃತ್ತಿಯಾಗಲವನೆ ಮಹೇಶಂ ||

ಸೂಚನೆ— ಲಿಂಗದಲ್ಲಿ ನಿಷ್ಠೆಯುಳ್ಳವನಾಗಿ, ಶರಣರ ಸಹವಾಸಿಯಾಗಿ, ಸದ್ಭಕ್ತಿ ಸದಾಚಾರಗಳಿಂದ ಧರ್ಮವಂತನಾಗಿ, ಹಿಡಿದ ವ್ರತ ಬಿಡದವನಾಗಿ ಇದ್ದವನು ಮಹೇಶನು.

## ಮಹೇಶನ ಅಂಗಸ್ಥಲಂಗಳ್: ೯

**ಮಹೇಶ ಪ್ರಶಂಶಾ ಸ್ಥಲಂ:—**

ಶಿವನೆ ಸರ್ವೋತ್ತಮಂ ಸಕಲ ವಿಶ್ವಾಧಿಪಂ,
ಭವಪಡೆದಜಾದಿ ದೇವತೆಗಳ ನಿಯಂತ್ರಕಂ,
ಭುವನಾದಿ ಭೂತಗಳಧಿಷ್ಠಾನನೆಂದು ಭಾವಿಸಿ, ನಂಬಿ ನೆರೆಯೇರುತ ||
ಅವಗೆಡಿಸಿ ಪರಧನ ಪರಾಂಗನೆಯರಾಸೆಯುಂ,
ಜವನ ಬಾಧೆಯ ತೊರೆದು ಷಡ್ರಿಪುಗಳುರುವಣೆಯ
ತವಿಸಿ, ಶಿವಕಾರ್ಯರತನಾಗಿರಲ್ಕದುವೆ ಮಾಹೇಶಸ್ಥಲದ ನಿಲವಲಾ ||೨೫||

ಶಿವನೇ ಸರ್ವಶ್ರೇಷ್ಠನು, ಸಕಲ ವಿಶ್ವಕ್ಕೆ ಆಶ್ರಯನು ಮತ್ತು ಒಡೆಯನು, ಬ್ರಹ್ಮಾದಿ ದೇವತೆಗಳ ನಿಯಾಮಕನು ಎಂದು ಗಟ್ಟಿಯಾಗಿ ನಂಬಿ, ಪರಧನ ಪರಸತಿಯರ ಬಯಸದೆ, ಮರಣ ಭಯವಿಲ್ಲದೆ ಶಿವಕಾರ್ಯದಲ್ಲಿಯೇ ಇರುವದು.

**ಲಿಂಗ ನಿಷ್ಠಾ ಸ್ಥಲಂ:—**

ಪರತತ್ವ ಲಿಂಗ ಕೈಸಾರಲಾ ಲಿಂಗದಲಿ
ತೆರಹಿಲ್ಲದಿಹ ದೃಷ್ಟಿಮನ ಭಾವ ಬೆರೆವ ಭರ-
ದುರುತರದ ತವಕದಲಿ ತನು ಪುಳುಂಕಿತಮಾಗೆ, ಗದುಗದುಕೆ ಕಂಠದಲ್ಲಿ ||
ನೆರೆನೆರೆದು, ಹರುಷ ಹೊರವರಿದುದೆನೆ ಕಂಬನಿಗ-
ಳುರುಳುತಿರೆ, ಸುಖಶರಧಿಗಿಳಿದು, ತನ್ನನೆ ತಾನು
ಮರೆವುದೆ ಮಹೇಶ್ವರನ ಲಿಂಗನಿಷ್ಠೆಯ ನೆಲೆಯುದಂ
ಬಣ್ಣಿಸುವನಾವನು? ||೨೬||

ಹಸ್ತದಲ್ಲಿಯ ಇಷ್ಟಲಿಂಗದಲ್ಲಿ ದೃಷ್ಟಿ, ಮನ, ಭಾವಗಳು ಕ್ರಮವಾಗಿ ಬೆರೆಯುವ ಆತುರದಲ್ಲಿ ರೋಮಾಂಚಿತನಾಗಿ, ಕಂಠ ಬಿಗಿದು ಗದ್ಗದವಾಗಿ, ಕಂಬನಿಯುದುರಿ, ಹರ್ಷಸಾಗರದಲ್ಲಿ ಮುಳುಗಿ ತನ್ನತಾನೆ ಮರೆಯುವದು ಲಿಂಗನಿಷ್ಠೆ.

**ಪೂರ್ವಾಶ್ರಯ ನಿರಸನ ಸ್ಥಲಂ:—**

ಲಿಂಗದಲಿ ನಿಷ್ಠೆಯಿಂ ಲೋಲುಪ್ತನಾದ ಬಳಿ–
ಕಂಗನಿಗೆ ಪೂರ್ವಾಶ್ರಯದ ಜಾತಿ ಬಂಧುಗಳ
ಸಂಗವಿರಲಹುದೆ? ಶಿವಧರ್ಮಸಂಸ್ಕಾರಗೌರವಯುತ ಮಹೇಶ ತಾನು ||
ಭಂಗಿಸುವ ಪ್ರಾಕೃತರ ಧಾರ್ಮಿಕಾಚಾರಗಳ
ಹಂಗಿನೊಳಗಿರ್ಪನೆ? ಶಿವಾಚಾರದೆಡರ ನಿ–
ಸ್ಸಂಗದಿಂ ತೊಡೆವ ಮಾಹೇಶ, ಪೂರ್ವಾಶ್ರಯ ನಿರಾಸಕಂ
ನಿಜವೆನಿಪನು ||೨೭||

ಲಿಂಗಲೋಲನಾದ ಅಂಗನಿಗೆ ಹುಟ್ಟಿನ ಸಂಬಂಧದ ಬಂಧುಗಳ ಸಹವಾಸ ವಿರಲಾರದು. ಅವನು ಶಿವಧರ್ಮಸಂಸ್ಕಾರ ಹೊಂದಿ ಪ್ರಾಕೃತರ ಧರ್ಮಾಚಾರಗಳನ್ನು ತೊರೆದವನು. ಶಿವಾಚಾರದ ಅಡೆತಡೆಗಳನ್ನು ಲೆಕ್ಕಿಸದೆ ಮುಂದುವರಿಯುವನು.

**ಸರ್ವಾದ್ವೈತ ನಿರಸನ ಸ್ಥಲಂ:—**

ಬರಿದೆ ವಾಗದ್ವೈತಮಂ ನುಡಿದೊಡೇಂ ಫಲಂ?
ತುರಗ ಪಿಡಿದೇರಲರಿಯದೆ ಹಲ್ಲಣವ ಹೊತ್ತು
ಚರಿಪನಂತಹುದಲ್ತೆ? ಲಿಂಗದಲಿ ಭಕ್ತನಲಿ ಪೂಜ್ಯ ಪೂಜಕ ಭೇದವು ||
ಇರದಿರಲುಪಾಸನೆಯು ಸಿರಿಯೆಲ್ಲಿ? ದ್ವೈತಮಂ
ಧರಿಸಿಯದ್ವೈತಮಂ ಸಾಧಿಪುದೆ ಸೂಕ್ತಗುರಿ,
ನೆರೆಸಾರಿ ನಿಜಗುಣರು 'ಬಳಸದಿರು ಬಾಹ್ಯದೊಳಗದ್ವೈತ'
ಎಂದೊರೆದರು ||೨೮||

ಅದ್ವೈತ (ಅಭೇದ)ವನ್ನು ಸುಮ್ಮನೆ ಮಾತಾಡಿ ಫಲವೇನು? ಅದು ಕುದುರೆ ಹತ್ತಲಾರದವನು ಥಡಿ ಹೊತ್ತುಕೊಂಡು ಓಡಾಡಿದಂತಾಗುವದು ಲಿಂಗ ಭಕ್ತರಲ್ಲಿ ಪೂಜ್ಯ–ಪೂಜಕ ಭೇದ ಸ್ವಾಭಾವಿಕ. ಪೂಜಾವೈಭವವು ವಿಕಾಸದ ಬಾಗಿಲು ತೆರೆಯುವದು ಭೇದ (ದ್ವೈತ)ದಿಂದ, ಅಭೇದ (ಅದ್ವೈತ) ಸಾಧಿಸುವದು ಒಳ್ಳೆಯದು.

**ಆಹ್ವಾನ-ವಿಸರ್ಜನ-ನಿರಸನ ಸ್ಥಲಂ:—**

ಮುಂತೆ ಶಿವಚಿತ್ಕಳೆಯನಿಷ್ಟದೊಳಗಿರಿಸಿ ಬಾ-
ಹ್ಯಾಂತರಂಗದ ತನುತ್ರಯದಿ ಗುರುರಾಜನೋ-
ರಂತೆ ಲಿಂಗತ್ರಯಸ್ಥಾಪನಂಗೈದಿರಲ್ಕಾ ಲಿಂಗವೇ ಪೂಜೆಗೆ ||
ಸಂತತಂ ತನ್ನೊಳಿರೆ, ಕರೆವುದೇಂ? ಪೋಗೆಂಬು-
ದೆಂತಿದಜ್ಞರ ಕ್ರಮಂ; ಲಿಂಗಮಂ ಸುಮ್ಮನೆ ನಿ-
ರಂತರಂ ಪೂಜಿಪುದು; ಬಿಡಲುಬೇಕಾಹ್ವಾನಮಂ,
ವಿಸರ್ಜನಮಂ ಕಣಾ ||೨೯||

ಗುರುವು ಶಿವಚಿತ್ಕಳೆಯನ್ನು ಇಷ್ಟಲಿಂಗದೊಳಗಿರಿಸಿ, ಒಳಹೊರಗೆ ಮೂರು ದೇಹಗಳಲ್ಲಿಯೂ ಲಿಂಗಸ್ಥಾಪನೆ ಮಾಡಿರುವನು. ಆ ಲಿಂಗವು ಯಾವಾಗಲೂ ಇರುತ್ತಿರುವದು. ಆ ಲಿಂಗವನ್ನು 'ಪೂಜೆಗೆ ಬಾ, ಬಳಿಕ ಹೋಗು' ಎಂಬುದು ಆಕ್ರಮವು. ಅದು ಅಜ್ಞಾನದ ಕ್ರಮವು.

**ಅಷ್ಟಮೂರ್ತಿ ನಿರಸನ ಸ್ಥಲಂ:—**

ತಿರೆ ನೀರು ಬೆಂಕಿ ಪವನಾಕಾಶ ತರಣಿ ಚಂ-
ದಿರ ಜೀವರೆಂಬೆಂಟು ತನುರೂಪದಲಿ ಪರನು-
ನಿರುವನೆಂಬುದಸತ್ಯವಷ್ಟಾಂಗಗಳಿಗಧಿಷ್ಠಾನ ಭಾವದಿನಿರ್ಪನು ||
ಪರಶಿವನಖಂಡೈಕ-ಸರ್ವಜ್ಞ-ಚೈತನ್ಯ-
ಪರ-ಪರಂಜ್ಯೋತಿ-ನಿರುಪಮ-ನಿರಾಕಾರನೆಂ-
ಬರಿವನೆರಕಂಗೊಳಿಸಿ, ತದ್ಭಾವದಲಿಯಷ್ಟಮೂರ್ತಿ ನಿರಸನಗೈವುದು ||೩೦||

ಭೂ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಜೀವರು ಈ ಎಂಟು ರೂಪಗಳಲ್ಲಿ ಶಿವನಿರುವನೆಂಬುದು ತಪ್ಪು. ಇವುಗಳಿಗೆ ಅವನು ಕಾರಣನು ಆಧಾರವು ಆಗಿದ್ದಾನೆ. ಆತನು ಅಖಂಡ ನಿರಾಕಾರ ಪರಂಜ್ಯೋತಿ ಎಂಬ ನಿಶ್ಚಲ ಜ್ಞಾನ ಬೇಕು.

**ಸರ್ವಗತತ್ವ ನಿರಸನ ಸ್ಥಲಂ:—**

ಶಿವಸರ್ವಗತನಿಹುದು ಸಾಮಾನ್ಯವಾರೂಪು
ಹವಣದೊಳಗಾಗದರ್ಚನೆಗೆ ನಿಜಭಕ್ತಿ ಸಂ-
ಭವಿಸದಾದುದರಿಂ ವಿಶೇಷ ರೂಪದಲಿ ಗುರು-ಲಿಂಗ-ಚರ-ಭಕ್ತರಲ್ಲಿ ||

ಶಿವ, ಸನ್ನಿಹಿತನೆಂದು ಮನದಂದು, ನೆರೆನಂಬಿ,
ಶಿವಸರ್ವಗತನೆಂಬುದನ್ನೆ ಬದಿಗಿಟ್ಟು ಲಿಂ-
ಗವನೆ ತಾಂ ತಾಳ್ದೇಕ ನಿಷ್ಠೆಯಿಂದರ್ಚಿಸಲ್ ರಾಜಿಪಂ ಮಾಹೇಶನು ||೩೧||

ಎಲ್ಲೆಡೆಯಲ್ಲಿ ಶಿವನಿರುವನೆಂಬುದು ಸಾಮಾನ್ಯವಾದುದು, ಆ ಸ್ವರೂಪದಲ್ಲಿ ಅವನನ್ನು ನಿಜಭಕ್ತಿಯಿಂದ ಉಪಾಸಿಸುವದು ಸಾಧ್ಯವಾಗದು. ಗುರು ಲಿಂಗ-ಜಂಗಮ-ಭಕ್ತರಲ್ಲಿ ವಿಶೇಷ ರೂಪದಿಂದ ಪರಶಿವನಿರುವದನ್ನು ನಂಬಿ ನಿಷ್ಠೆಯಿಂದ ಲಿಂಗದ ಉಪಾಸನೆಯನ್ನೇ ಮಾಡಬೇಕು.

**ಶಿವಜಗನ್ಮಯ ಸ್ಥಲಂ:—**

ಪೂಜೆಗೊಳ್ಳಲ್ ಶಿವಂ ಲಿಂಗಮಾತ್ರದೊಳಿರ್ದೊ-
ಡೇಂ ಜಗದ್ಭರಿತನಿರ್ಪಂ ವೃಕ್ಷರೂಪದಿಂ
ಬೀಜಮಿಹವೊಲ್;ಮಡಿಕೆಮೃಣ್ಮಯಂತಂತುಪಟತಂತುಮಯಮೆಂತುಟಂತು||
ಓಜೆಯಿಂ ತಾನಾದ ಜಗದಿ ಶಿವ ತಾನಿಹುದು
ಸಾಜಮಿದು; ಶಿವನ ರೂಪಾದಖಿಲ ವಿಶ್ವಮಿದು
ರಾಜಿಪುದು; ಶಿವಜಗನ್ಮಯನೆಂಬ ನೆಲೆವೀಡಿನೊಳಗಿಹುದು
ಮಾಹೇಶನು ||೩೨||

ಪೂಜೆಗೊಳ್ಳುವದಕ್ಕಾಗಿ ಮಾತ್ರ ಗುರುಲಿಂಗಜಂಗಮರಲ್ಲಿ ವಿಶಿಷ್ಟನಾಗಿ ಶಿವನಿದ್ದರೂ, ವೃಕ್ಷರೂಪದಿಂದ ಬೀಜವಿರುವಂತೆ ಜಗದ್ರೂಪದಿಂದ ತಾನಿರುವದು ನಿಜವಾಗಿದೆ. ಮಣ್ಣಿನಿಂದಾದ ಕೊಡವು ಮೃಣ್ಮಯವಾಗಿರುವಂತೆ ಶಿವನಿಂದಾದ ಜಗತ್ತು ಶಿವಮಯವಾಗಿರುವದು.

**ಭಕ್ತದೇಹಿಕ ಲಿಂಗ ಸ್ಥಲಂ:—**

ದೇವದೇವಂ ಜಗನ್ಮಯನಿರ್ದು ಭಕ್ತರೆದೆ-
ದಾವರೆಯ ಪೀಠದೊಳ್ ವೆಗ್ಗಳಿಸಿ ಸಲೆ ಪೊಳೆವ-
ನಾವಗಂ; ಭಕುತರಂಗೇಂದ್ರಿಯಂಗಳನೆ ತಾಂ ಹೊದ್ದು ಕಜ್ಜಂಗೈವನು||
ಪಾವನ ಶಿವಾತ್ಮಕ ಮಹೇಶನನವರತ ಹೃದ-
ಯಾವಾರದಾಳದೊಳು ತೊಳಗಿ ಬೆಳಗಿರ್ದು, ತ-
ನ್ನೀ ವಿಲೋಚನಕೈದಿದಿಷ್ಟವನೆ ಭಕ್ತದೇಹಿಕ ಲಿಂಗಮೆಂದರಿವುದು ||೩೩||

ಶಿವನು ಜಗನ್ಮಯನಾಗಿದ್ದರೂ ಭಕ್ತರ ಹೃದಯ ಪೀಠದಲ್ಲಿ ಅಗ್ಗಳವಾಗಿ ಹೊಳೆಯುವನು. ಭಕ್ತರ-ದೇಹ-ಇಂದ್ರಿಯಗಳನ್ನೇ ತಾನು ತಾಳಿ ಕಾರ್ಯ ಮಾಡುವನು. ಹೃದಯ ಕಮಲದಿಂದ ಕರಕಮಲಕೆ ಬಂದ ಇಷ್ಟಲಿಂಗವೇ ಭಕ್ತ ದೇಹಿಕ ಲಿಂಗವು.

**ಮಹೇಶನ-ಗುರುಲಿಂಗ-ಸ್ಥಲಂಗಳ್: ೯**

**ಕ್ರಿಯಾಗಮ ಸ್ಥಲಂ:—**

ಗುರುಬೋಧೆಯಂತರ್ಚನಾಕ್ರಿಯಾರತನಾಗೆ
ಗುರುಲಿಂಗವೇ ಸತ್ಕ್ರಿಯಾ ಸ್ವರೂಪವ ತಾಳ್ದು,
ಪರತರಾಗಮದ ಬೆಳಗೀಯಲ್ ಮಹೇಶನ ಕ್ರಿಯಾಗಮಸ್ಥಲಮೆನಿಪುದು||
ಒರೆದರ್ 'ಕ್ರಿಯಾರಹಿತ* ಜ್ಞಾನವಜ್ಞಾನ' ವೆಂ-
ದುರುತರ ಜ್ಞಾನಿ ಶ್ರೀ ಚೆನ್ನಬಸವೇಶ್ವರರ್;
ನಿರತನಾಗಿಹುದಖಿಲ ಸಲಕರಣೆಯೊಡನೆ ಲಿಂಗಾರ್ಚನೆಯೊಳರ್ತಿ
ಯಿಂದ ||೩೪||

ಗುರುಬೋಧೆಯಂತೆ ಲಿಂಗಪೂಜಾ ಕ್ರಿಯೆಯಲ್ಲಿ ಮಗ್ನನಾಗಲು, ಗುರು ಲಿಂಗವು ಕ್ರಿಯೆಯಲ್ಲಿಯೇ ಜ್ಞಾನದ ಬೆಳಕನ್ನು ಕೊಡುವದು. ಕ್ರಿಯೆಯಿಲ್ಲದೆ ಜ್ಞಾನವೇ ಇಲ್ಲ; ಬರಿಯ ಜ್ಞಾನವು ಅಜ್ಞಾನವೇ ಸರಿಯೆಂದು ಚೆನ್ನಬಸವಣ್ಣ ನವರು ಹೇಳಿದ್ದಾರೆ.

**ಭಾವಾಗಮ ಸ್ಥಲಂ:—**

ಭಾವಗೋಚರಮಪ್ಪ ಪರವಸ್ತು ತಾಂತ್ರಿಕದ
ಕೇವಲ* ಕ್ರಿಯಾಜ್ಞಾನಗಳಿಗಗೋಚರಮುಹುದು;
ಭಾವವೊಳಗಿಂಬುಗೊಳ್ಳದ ಕ್ರಿಯೆಯು ರಸವಿಲ್ಲದಾ ಹಣ್ಣಿನೊಲು ವ್ಯರ್ಥವು||
ಆವುದು ಕ್ರಿಯಾಜ್ಞಾನ ನಿರ್ದೇಶಿತಂ, ಅದುವೆ
ಭಾವಿಸಲ್, ತಾದಾತ್ಮ್ಯವೊಂದುವದು; ಪರಿಶುದ್ಧ
ಭಾವದಿಂ ಪರಶಿವನ ಧ್ಯಾನಿಪ್ಪುದೆ ಭಾವಾಗಮದ ನೆಲೆ ಮಹೇಶ್ವರಂಗೆ ||೩೫||

ಭಾವದಿಂದ ಮಾತ್ರ ಗೋಚರವಾಗುವ ಪರಶಿವನ ಲಿಂಗವು ಕ್ರಿಯಾ-ಜ್ಞಾನ ಮಾತ್ರದಿಂದ ಸಾಧ್ಯವಾಗದು. ಭಾವವಿಲ್ಲದ ಕ್ರಿಯೆ ರಸವಿಲ್ಲದ ಹಣ್ಣಿ

ನಂತೆ! ಕ್ರಿಯಾ ಜ್ಞಾನಗಳಿಂದ ವ್ಯಕ್ತವಾಗುವ ಲಿಂಗವು ಭಾವಿಸುವದರಿಂದ ತಾದಾತ್ಮ್ಯ ಹೊಂದುವದು.

**ಜ್ಞಾನಾಗಮ ಸ್ಥಲಂ: —**

ಕುರುಡಂಗೆ ಕೈಯೊಡವೆಗಳ್ ಕಾಣದಿಹ ತೆರದೊ—
ಳರಿವಿಲ್ಲದಾತಂಗೆ ತನ್ನೊಳಿಹ ಪರಶಿವನ
ಪರಿಯು ಕಾಣದು, ಶಿವಜ್ಞಾನವಿಲ್ಲದ ಕ್ರಿಯೆಯು ಪ್ರಾಣವಿಲ್ಲದ ದೇಹವು||
ಪರಶಿವನ ಜ್ಞಾನವೇ ಪಾರಮಾರ್ಥಿಕ ಭಾವ!
ಪರಿಪಕ್ವ ಭಾವಮುಂ ಜ್ಞಾನಮುಂ ಬೇರಲ್ಲ;
ಪೆರತೇನು ಜ್ಞಾನಾಕ್ಷಿಯಾಂತವನೆ ಜ್ಞಾನಾಗಮದ ನೆಲೆಯು ನೆರೆ—
ಸೇರುವ ||೩೬||

ಕುರುಡನಿಗೆ ಕೈಯೊಳಗಿನ ವಸ್ತುಗಳೂ ಕಾಣದಿರುವಂತೆ, ಅರಿವು ಇಲ್ಲದವನಿಗೆ ತನ್ನಲ್ಲಿಯೇ ಇರುವ ಶಿವನ ರೀತಿ ತಿಳಿಯದು. ಅರಿವಿಲ್ಲದ ಪೂಜೆ (ಕ್ರಿಯೆ)ಯು ಪ್ರಾಣವಿಲ್ಲದ ದೇಹದಂತೆ! ಪರಿಶುದ್ಧಭಾವವೂ ಪೂರ್ಣಜ್ಞಾನವೂ ಒಂದೇ! ಜ್ಞಾನ ದೃಷ್ಟಿಯಿಂದಲೇ ಪೂರ್ಣಜ್ಞಾನ ಸಾಧ್ಯವು!

**ಸಕಾಯ ಸ್ಥಲಂ: —**

ತನುವೆ ಕರ್ಮಜ್ಞಾನ ಭಾವಗಳ ಕೃಷಿಭೂಮಿ;
ತನುವಿನಿಂದಲೆ ಭೋಗ—ಮೋಕ್ಷಗಳ್ ಸಿದ್ಧಿಪವು;
ತನುವಿಡಿದು ಶಿವಯೋಗಿ ಪರಹಿತವನೆಸಪನವ ತನುಯೋಗದಿಂ ಪೂಜ್ಯನು||
ತನುವಿರದೆ ಶಿವನನರಿಯಲ್ ಬಹುದೆ? ಕಾಯಕವು
ತನುವಿನಿಂದಲೆ ಸಾಧ್ಯ! ದುಷ್ಕರ್ಮದಿಂ ತ್ರಿವಿಧ
ತನುವ ಕೆಡಿಸದೆ ಪ್ರಯೋಗಿಸಲದೆ ಸಕಾಯಸ್ಥಲಂ ಶಿವನ
ಭದ್ರಾಚಲಂ ||೩೭||

ದೇಹವೆ ಕ್ರಿಯಾ ಜ್ಞಾನ ಭಾವಗಳ ರಂಗಸ್ಥಲಂ! ಅದರಿಂದಲೇ ಭೋಗವೂ ಮೋಕ್ಷವೂ ಸಾಧ್ಯ! ದೇಹ ಧರಿಸಿಯೇ ಶಿವಯೋಗಿ ಲೋಕ ಹಿತ ಮಾಡುವನು, ಪೂಜ್ಯನಾಗಿರುವನು. ದೇಹವಿಲ್ಲದೆ ಶಿವನ ತಿಳಿವುದೆಂತು? ದುಷ್ಕರ್ಮಗಳಿಂದ ತನುವ ಕೆಡಿಸದೆ ಶಿವಕಾರ್ಯಕ್ಕುಪಯೋಗಿಸಬೇಕು.

**ಅಕಾಯ ಸ್ಥಲಂ:—**

ಕಾಯವರಿದನ ಮೋಕ್ಷಕನುಕೂಲವರಿಯುದಗೆ
ಮಾಯೆಯ ಪ್ರಬಂಧನಕೆ ಮೂಲವೆಡೆಬಿಡದೆ ಬ–
ರ್ಪಾ ಯಮನ ಭೀತಿಯ ಬಿಡಾರವಿಂದ್ರಿಯಜನ್ಯ ದುಃಖದಾಗರಮಪ್ಪುದು;
ಕಾಯವುದಿಸಿದ ಕುಲದ ಬಂಧುಗಳ ಮೋಹ, ಸಾ–
ರಾಯ ಸುಖಸುಧೆಯ ಕೆಡಿಸುವದು; ಶಿವಯೋಗಿಯೊಲು
ಕಾಯಾಭಿಮಾನಮಂ ತೊರೆದವರಕಾಯಸ್ಥರೆಂದೆನಿಸಿ ಸುಖ
ಬಡುವದು ||೩೮||

ತಿಳಿದವನಿಗೆ ಶರೀರವು ಮೋಕ್ಷಸಾಧನ! ತಿಳಿಯದವನಿಗೆ ಮಾಯಾಬಂಧನಕ್ಕೆ ಮೂಲ! ಯಮನ ಭೀತಿಯ ಮನೆ! ದುಃಖಿಗಳ ನೆಲೆ!! ದೇಹಸಂಬಂಧದ ಬಂಧುಗಳ ಮೋಹವು ಮೋಕ್ಷಸುಖವ ಕೆಡಿಸುವದು. ಶಿವಯೋಗಿಯಂತೆ ದೇಹಾಭಿಮಾನ ಬಿಟ್ಟಿರಬೇಕು.

**ಪರಕಾಯ ಸ್ಥಲಂ:—**

ತನುವ ಮಾಯೆಗೆ ಬಿಡದೆ, ತಾನದಾರೆಂಬರಿವಿ–
ಗನುಗೊಳಿಪನರಿದವಂ; ಕಟ್ಟಿಗೆಯೊಳಾದಗ್ನಿ
ತನಗಾಸರಾದುದನೆ ಸುಡುವಂತೆ, ಶಿವಯೋಗಿ ತನುವಿಡಿದು ತನುರಹಿತನು||
ಘನಶಿವಾಕಾರ ಸಾಧಕಗೆ ಮಾಹೇಶಂಗೆ,
ತನುವಿರ್ದೊಡೇಂ? ಪ್ರಾಕೃತಾಂಗಮಾಗಿಲ್ಲ; ಪರ–
ತನುಯುಕ್ತರಾದವರ ಹೃದಯದಲಿ ಮೋಕ್ಷರವಿಕಿರಣಂಗ–
ಳೊಡಮೂಡವೇ? ||೩೯||

ಶರೀರವನ್ನು ಮಾಯಾವೃತ್ತಿಗೆ ಉಪಯೋಗಿಸದೆ, ತಾನಾರೆಂಬ ಅರಿವು ಪಡೆಯಲು ಸಾಧನ ಮಾಡಿಕೊಳ್ಳಬೇಕು. ಆ ಅರಿವು ತನುಮೋಹ ನಾಶಗೊಳಿಸುವದು, ಕಟ್ಟಿಗೆಯಲ್ಲಿ ಹುಟ್ಟಿದ ಅಗ್ನಿ ಕಟ್ಟಿಗೆಯನ್ನು ಸುಡುವದಿಲ್ಲವೇ? ಮಹೇಶನ ಕಾಯ ಪ್ರಾಕೃತಾಂಗವಲ್ಲ, ಅದು ಪರಕಾಯ! ಅದರಿಂದ ಮೋಕ್ಷ ಸಾಧ್ಯವು.

**ಧರ್ಮಾಚಾರ ಸ್ಥಲಂ:**

ಪರಕಾಯನಿರ್ದೇಶಂ ಸಾಧಕಾಂಗನು ತನ್ನ
ಪರಮಾರ್ಚನೆಗೆ ಲೋಕಹಿತಕೆ ಸದ್ಧರ್ಮದಾ-
ಚರಣೆಯೊಳಗಿಹುದಹಿಂಸಾ ಸತ್ಯಮಸ್ತೇಯ ಬ್ರಹ್ಮಚರ್ಯಮದಲ್ಲದೆ||
ಕರುಣಾ ಕ್ಷಮಾ ದಾನ ಪೂಜಾ ಜಪಧ್ಯಾನ-
ಮುರುಧರ್ಮಪದಮಿವಂ ಪಿಡಿದು, ಹಮ್ಮಮಗಳಂ
ತೊರೆದು, ಭ್ರಾಂತಿಯ ಸುಟ್ಟು, ಸಜ್ಜನರ್ ಮೆಚ್ಚುವಂತಿಹನೆ
ಧರ್ಮಾಚಾರಿಯು ||೪೦||

ಅಂಗನು ಪರಕಾಯನಾಗಿ ಸ್ವಸ್ವರೂಪೋಪಾಸನೆಯನ್ನು ಹಾಗೆಯೇ ಧರ್ಮಾಚರಣೆಯನ್ನು ಆ ಕಾಯದಿಂದ ಮಾಡುತ್ತಿರಬೇಕು. ಅಹಿಂಸಾದಿ ಹತ್ತು ತರದ ಧರ್ಮಾಚಾರ ಹಿಡಿದು ನಾನು-ನನ್ನದು ಎಂಬುದನ್ನು ಬಿಟ್ಟು ಸಜ್ಜನರು ಮೆಚ್ಚುವಂತೆ ಇರಬೇಕು.

**ಭಾವಾಚಾರ ಸ್ಥಲಂ:—**

ಶೈವ ಸಂಪದವೀವ ಧರ್ಮ ಬಾಹ್ಯದೊಳಿರದೆ
ಭಾವದೊಳಗಾಳ್ದು ಪರಿಣಾಮಿಪ್ಪುದು; ನಿತ್ಯ ಸ-
ದ್ಭಾವದಲಿ ಮಾಳ್ಪ ಕ್ರಿಯೆಗಳ್ ದೋಷಬಾಧೆಗಳನುಳಿದು ಫಲಗೊಡು
ತಿರ್ಪವು||
ಭಾವದಿಂದಲೆ ತನ್ನ ಹೃದಯದಲ್ಲಿಯ ಜ್ಞಾನ-
ದೇವನನುಪಾಸಿಸುವನಲ್ತೆ ಶಿವಯೋಗಿ? ತಾಂ-
ಭಾವಪೂರ್ಣಾತ್ಮಪೂಜಾಸದಾಚಾರಸಂಯುತನೆ ಭಾವಾಚಾರಿಯು ||೪೧||

ಅಂಗನಿಗೆ ಶಿವತ್ವವನ್ನು ಹೊಂದಿಸುವ ಧರ್ಮ ಹೊರಗುಳಿದರಾಗದು; ಅದು ಭಾವದಲ್ಲಿ ಜಿರೆತರೆ ಪರಿಣಮಿಸುವದು. ಸದ್ಭಾವದಿಂದ ಮಾಡುವ ಕ್ರಿಯೆಗಳಿಂದ ಬಾಧೆಯಿಲ್ಲ. ಶಿವಯೋಗಿ ಹೃದಯದ ಜ್ಞಾನದೇವನನ್ನು ಭಾವದಿಂದಲೇ ಉಪಾಸಿಸುವನು.

**ಜ್ಞಾನಾಚಾರ ಸ್ಥಲಂ:—**

ಸಂಚಿತಾಗಾಮಿ* ಪ್ರಾರಬ್ಧ ಕರ್ಮಗಳುಬ್ಬಿ
ಹೊಂಚಿ ಮುಗುಳೊಡೆಯುದಂತವುಗಳಂ ಸುಜ್ಞಾನ-
ಪಂಚಾಗ್ನಿಯಿಂದುರುಪಿ ಕರ್ಮಬಂಧದ ಭಯುವ ನೀಗಿ ಮುದದಿಂದಿರ್ಪುದು||
ಮುಂಚಿ ಪೆಸರ್ವೆತ್ತ ಯತಿಗಳ್ ಶಿವಾದ್ವೈತವೆ ಪ್ರ-
ಪಂಚಕ್ಕೆ ಪರತರಜ್ಞಾನವೆಂದವನಿಯೊಳ್
ಸಂಚರಿಸಿ ಪೇಳ್ದರಾ ಪರಮನರಿವಿಂಗೊಲಿದಡವನೆ ಜ್ಞಾನಾಚಾರಿಯು ||೪೨||

ಕರ್ಮತ್ರಯಗಳು ಉನ್ಮಾದಿಸಿ ಸಂಚು ಮಾಡಿ ಭವವ ಬೆಳೆಸುವ ಮೊದಲು ಅವುಗಳನ್ನು ಜ್ಞಾನಾಗ್ನಿಯಿಂದ ಸುಟ್ಟು ಅವುಗಳಿಂದ ಬಿಡುಗಡೆ ಹೊಂದಬೇಕು. ಶಿವಾದ್ವೈತ ಜ್ಞಾನವೇ ಪರಮವೆಂದು ಯತಿಗಳು ಸಾರಿದ್ದಾರೆ. ಪರಮನ ಅರಿವಿಗೆ ಆತುರನಾಗಿರಬೇಕು.

||ಓಂ||

# ಪ್ರಸಾದಿ

ಕಂ|| ಎಸೆದಿಹ ವಸ್ತುಗಣಂ ಶಿವ-
ನೊಸಗೆಯಿಂದೆಂದವಗೆ ಭಕ್ತಿಯಿಂದರ್ಪಿಸುತಂ
ಒಸೆದು ಹಸಾದವ ಸೇವಿಸಿ
ಪ್ರಸನ್ನನಿರ್ಪಡೆ ಪ್ರಸಾದಿ ನಿಶ್ಚಲಚಿತ್ತಂ||

ಸೂಚನೆ:-ಧರೆಯ ವಸ್ತುಗಳೆಲ್ಲ ಶಿವನಿಂದ ಬಂದವುಗಳಾಗಿವೆ. ಅವುಗಳನ್ನು ಭಕ್ತಿಯಿಂದ ಅವನಿಗೆ ಅರ್ಪಿಸಿ, ಪ್ರಸಾದವಾಗಿ ಪಡೆದು, ಭೋಗಿಸಿ ನಿಶ್ಚಲಚಿತ್ತದಿಂದ ಸಂತುಷ್ಟನಾಗಿರುವನು ಪ್ರಸಾದಿಯು.

## ಪ್ರಸಾದಿಯ ಅಂಗಸ್ಥಲಂಗಳ್: ೭

**ಪ್ರಸಾದಿ ಸ್ಥಲಂ:—**

ಅನ್ನವ ಶಿವಂಗರ್ಪಿಸಲ್ ಪದಾರ್ಥತ್ವಮಳಿ-
ದುನ್ನತ* ಪ್ರಸಾದಮಹುದದ ಕೊಳ್ಳೆ, ಮನದೊಳ್ ಪ್ರ-
ಸನ್ನತೆ ವಿರಾಜಿಪುದು; ಚಿತ್ತದಲಿ ನಿಶ್ಚಲತೆ ನಿಲೆ ಸತ್ವಗುಣ ಸುಳಿವುದು||

ಅನ್ನದಿಂ ದೈಹಿಕದ ಲಾಲಸೆ; ಹಸಾದದಿಂ
ಸನ್ನುತ ಶಿವಾದ್ವೈತದುಜ್ವಲನಮಪ್ಪುದು; ಮ–
ಹೋನ್ನತ ಪರಾತ್ಪರತೆ ಹೊಳೆವುದು; ಪ್ರಸಾದಿಸ್ಥಲದ ಮಹಿತನೇಂ
ಧನ್ಯನೋ? ||೪೩||

ಆಹಾರವನ್ನು ಶಿವನಿಗೆ (ಜಂಗಮನಿಗೆ) ಅರ್ಪಿಸುವದರಿಂದ ಪ್ರಸಾದವಾಗುವದು. ಪ್ರಸಾದ ಸೇವನೆಯಿಂದ ಮನಸ್ಸಿನಲ್ಲಿ ಪ್ರಸನ್ನತೆ, ಚಿತ್ತದಲ್ಲಿ ಸ್ಥಿರತೆ ನೆಲಿಸಿ ಸತ್ವಗುಣವುಂಟಾಗುವದು. ಅನ್ನದಿಂದ ಭೋಗಪ್ರೀತಿ, ಪ್ರಸಾದದಿಂದ ಯೋಗಾಸಕ್ತಿ!!

**ಗುರುಮಹಾತ್ಮ್ಯ ಸ್ಥಲಂ:—**

ಪರಿಹರಿಸಿ ಮೂರು ಮಲಗಳ ಮುಸುಕ, ಕಣ್ದೆರಿಸಿ
ಪರಶಿವನ ಗುರುತಿಟ್ಟು ತೋರಿಕೊಟ್ಟರ್ಚನೆಯ
ಪರಿಯರುಪಿ, ಅರ್ಪಣಾದಾನಗಳ ಬಗೆಯ ನೆರೆ ಕರುಣಿಸಿ, ಹಸಾದ ಸಿರಿಯ||
ಕರುಣೆಯಿಂದಿತ್ತು ಗುರು ಹರಸುವಂ; ಗುರುಮಹಿಮೆ
ಹಿರಿದು–ಹಿರಿದಾದುದೆಂದುಪನಿಷದ್ವಚನವಿದೆ;
ಗುರುವಚನದೊಳು ಸೊಗಸಿ, ಗುರುವಿನ ಪ್ರಸನ್ನತೆಗೆ ಹೊರಗಾಗದಿರ
ಬೇಹುದು ||೪೪||

ಮಲದ ಮುಸುಕ ಪರಿಹರಿಸಿ, ಪರಶಿವನ ಗುರುತಿಸಿಕೊಟ್ಟು, ಅರ್ಚನೆ, ಅರ್ಪಣ, ಪ್ರಸಾದ ಗ್ರಹಣಗಳ ಪರಿಯ ತಿಳಿಸಿ, ಪ್ರಸಾದ ವೈಭವದಲ್ಲಿ ಮುಳುಗಿಸಿದ ಗುರುಮಹಿಮೆ ಬಹಳ ದೊಡ್ಡದು. ಗುರುವಚನ ಪಾಲಿಸಿ ಗುರುವಿನ ಪ್ರಸನ್ನತೆ ಹೊಂದಿರಬೇಕು.

**ಲಿಂಗಮಹಾತ್ಮ್ಯ ಸ್ಥಲಂ:—**

ಅಂಗದಲಿ ಲಿಂಗ ಸಂಬಂಧಿಸಿದ ಗುರುವಿನಾ
ಹಂಗ ಮರೆದಿರಬಹುದೆ? ಬ್ರಹ್ಮಾಂಡವವಿತಿಹುದು
ಲಿಂಗದಲಿ ವೃಕ್ಷವಿಸ್ತೃತವೆಲ್ಲ ಬೀಜದೊಳಗವಿತಂತೆ; ಘನವಾಗಿಹ||

ಲಿಂಗ ಶಿವಶಕ್ತಿಸಹಿತಂ ಸರ್ವಕಾರಣಂ;
ಲಿಂಗಂ ಮಹಾ ಸಕಲ ತತ್ವಾರ್ಥ ಪೂರಣಂ;
ಲಿಂಗಂ ಜಗನ್ಮಯಂ, ಶುಭಕರಂ: ಲಿಂಗಮಾಹಾತ್ಮ್ಯಯಂ
ಪೇಳ್ವುದರಿದು ||೪೫||

ವಿಶಾಲವಾದ ಮರವು ಒಂದು ಬೀಜದಲ್ಲಿ ಅಡಗಿಕೊಂಡಿರುವಂತೆ ಬ್ರಹ್ಮಾಂಡಗಳು ಲಿಂಗದಲ್ಲಿ ಅಡಗಿರುವವು. ಲಿಂಗವು ಶಕ್ತಿಸಹಿತವು, ಸರ್ವಕಾರಣವು, ಸಕಲ ತತ್ವಗಳಿಗೂ ಅರ್ಥವಾದುದು, ಜಗನ್ಮಯವಾದುದು. ಲಿಂಗಮಹಾತ್ಮ್ಯೆಯನ್ನು ಪೇಳಲಾಗದು.

**ಜಂಗಮ ಮಹಾತ್ಮ್ಯ ಸ್ಥಲಂ:—**

ಹದನದಲಿ ಗುರುಹಸ್ತ–ಶಿಷ್ಯಮಸ್ತಕಯೋಗ–
ಮೊದಗಲುದಿಸಿದ ಲಿಂಗ ಚೈತನ್ಯವೆಂದೆನಿಸಿ,
ಪದುಳದಿಂ ಹೊಮ್ಮಿದಾ ಜಂಗಮ ಮಹಾತ್ಮ್ಯೆಯಂ ಜಡಮತಿಯ
ಜನರರಿವರೆ?||

ಹೊದೆಯದೆ ಜಗಜ್ಜಾಲಮಂ ಜೀವ ಜಂಜಡವ
ಬದಿಗೊತ್ತಿ ಸಂಚರಿಪ ಶಿವಯೋಗಿ ಜಂಗಮಂ
ಮದನಹರರೂಪವಾತನ ಪದಪ್ರಾಂತದೊಳ್ ನಲಿದಿರ್ಪರೇಂ
ಧನ್ಯರೋ? ||೪೬||

ಲಿಂಗದ ಚೈತನ್ಯವು ಜಂಗಮವಾಗಿ ಪ್ರಕಟವಾಗಿರುವದು, ಜಂಗಮ ಮಹಾತ್ಮ್ಯೆಯನ್ನು ಸಾಮಾನ್ಯ ಜನರು ಅರಿಯರು. ಜೀವ ಜಂಜಡವಿಲ್ಲದೆ, ಜಗತ್ತಿನ ಜಾಲದಲ್ಲಿ ಸಿಗದೆ ಶಿವಯೋಗಿ ಜಂಗಮನು ವಿರಾಜಿಸುತ್ತಿರುವನು.

**ಭಕ್ತ ಮಹಾತ್ಮ್ಯ ಸ್ಥಲಂ:—**

ಗುರುಲಿಂಗಜಂಗಮ ಮಹಾತ್ಮ್ಯೆಯಂ ಪ್ರಕಟಿಸುವ,
ಪರಿಪಾಲಿಸುವ, ಮೆರೆವ, ತಾಳ್ವ, ತನ್ಮಯಗೊಳ್ವ
ಪರಮಭಕ್ತನ ಮಹಾತ್ಮ್ಯಂ ತಾನೆ ಸಿದ್ಧಿಪ್ರದು; ಭಕ್ತ, ಸಕಲಾಧಾರನು;||

ಗುರು–ಹರ–ಚರ ಸ್ವರೂಪದ ಜ್ಞಾನಸದ್ಭಾವ–
ಭರಿತಾತ್ಮ ಸದ್ಭಕ್ತನಿಲ್ಲದಿರಲವರೆಲ್ಲಿ?
ಚರಣೋದಕ ಪ್ರಸಾದಗಳೆಲ್ಲಿ? ಶಿವನಿಗಿಂ ಶಿವಭಕ್ತರಧಿಕರಲ್ತೆ? ||೪೭||

ಭಕ್ತನೇ ಗುರುಲಿಂಗಜಂಗಮರ ಮಹಾತ್ಮ್ಯೆಯನ್ನು ಪ್ರಕಾಶಕ್ಕೆ ತಂದು ಮೆರಿಸುವನು. ಇಂತಹ ಭಕ್ತನ ಮಹಾತ್ಮ್ಯೆಯೂ ದೊಡ್ಡದು. ಭಕ್ತನಿಲ್ಲದಿದ್ದರೆ ಗುರು–ಲಿಂಗ ಜಂಗಮರಿಲ್ಲ. ಪಾದೋದಕ ಪ್ರಸಾದಗಳಿಲ್ಲ. ಶಿವನಿಗಿಂತ ಶಿವಭಕ್ತರಧಿಕರು. ಭಕ್ತನೇ ನೂರೊಂದು ನೆಲೆಯ ಕೇಂದ್ರವು!

**ಶರಣ ಮಹಾತ್ಮ್ಯ ಸ್ಥಲಂ:—**

ಬಂಧುಬಳಗವನುಳಿದು ತನ್ನ ಪತಿ ಸರ್ವಸ್ವ–
ಮೆಂದು ಸತಿಯುವನ ಸುಖದೊಳೆ ತಾನು ಸುಖಿಸುವಂ–
ತಿಂದುಧರನಂ ಸರಣ್ವೊಕ್ಕು, ಸುಜ್ಞಾನ ಲಿಂಗವನಂಗವಿಸಿಕೊಂಡು
ಸಮರಸದಲಿ||
ಸಂದು ಸುಖಭೋಗಿಪಂ ಶಿವನ ಶರಣಂ; ಲೀಲೆ
ಯಿಂದೆ ಲೋಕದಲಿ ವ್ಯವಹರಿಪನವನಂ ತಿಳಿದು
ಸಂಧಿಸಿ ನಮಸ್ಕರಿಸಿ ಗೌರವಿಸಿ ನಯದಿಂ ಪ್ರಸಾದಿಯನುಭವ
ಪಡೆವುದು ||೪೮||

ತವರಿನ ಬಳಗ ಬಿಟ್ಟು ಪತಿಯೇ ಗತಿಯೆಂದು ನಂಬಿದ ಸತಿಯಂತೆ ಶರಣನು ಲಿಂಗವನ್ನೇ ಮೊರೆವೊಕ್ಕು ಲಿಂಗಯೋಗದಾನಂದದಲ್ಲಿರುವನು ಶರಣನು ಲೀಲೆಗಾಗಿ ವ್ಯವಹರಿಸುವನು. ಅವನ ಸಂಗದಿಂದ ಅನುಭವ ಪಡೆವುದು ಪ್ರಸಾದಿಯ ಕರ್ತವ್ಯವು.

**ಪ್ರಸಾದ ಮಹಾತ್ಮ್ಯ ಸ್ಥಲಂ:—**

ಗುರುಲಿಂಗಚರಭಕ್ತಶರಣರ ಮಹಾತ್ಮ್ಯೆಯದು
ಬೆರೆವುದನುಭವದಿ ಶಂಭುಪ್ರಸಾದಿಗೆ ಸಾಧ್ಯ!
ಪೆರತಂಗಸಾಧ್ಯಂ! ಪಸಾದ ಮೂಬಗೆ, ಶುದ್ಧ–ಸಿದ್ಧ–ಪ್ರಸಿದ್ಧಮೆಂದು,||

ಪರಿಶುದ್ಧಗೊಳಿಪ್ಪದು ಪ್ರಸಾದ ಪಿಂಡಾಂಡಗಳ;
ಪರಿತೃಪ್ತಿಗೊಳಿಸುವದು ತನುಕರಣ ಭಾವಗಳ
ಸರುವನರ್ಪಿಸಿ ಸಾವಧಾನದಿ ಪ್ರಸಾದಸೊಗವಂ ಪಡೆಯುವಂ
ಪ್ರಸಾದಿ ||೪೯||

ಗುರು–ಲಿಂಗ ಜಂಗಮ–ಭಕ್ತ–ಶರಣರ ಮಹಾತ್ಮ್ಯೆಯು ಪ್ರಸಾದಿಯ ಅನುಭವದಲ್ಲಿ ಮಾತ್ರ ಕಂಡುಬರುವದು. ಉಳಿದವರಿಗೆ ತಿಳಿಯದು. ಪ್ರಸಾದ ಮೂರು ತರವಾಗಿದೆ. ತನು–ಕರಣ–ಭಾವಗಳನ್ನೂ ಅರ್ಪಿಸಿ ಪರಿಶುದ್ಧಗೊಳಿಸಿ ಪ್ರಸಾದ ಸುಖವನ್ನು ಅನುಭವಿಸಬೇಕು.

### ಪ್ರಸಾದಿಯ-ಶಿವ-ಲಿಂಗಸ್ಥಲಂಗಳ್: ೯

**ಕಾಯಾನುಗ್ರಹ ಸ್ಥಲಂ:—**

ಆಯತ ಜ್ಞಾನಕ್ರಿಯಾಚಾರ ಸಾಧನೆಗೆ
ಕಾಯವಾಶ್ರಯದೆಡೆಯು; ಸ್ವಾನುಭವಿ ಶಿವಯೋಗಿ
ಕಾಯವನುಪೇಕ್ಷಿಸಂ, ಸೈಪಿನ ಶರೀರಮಿದು ಶಿವಸದನಮೆಂದಿರ್ಪನು ||
ಮಾಯೆಯಂ ಪೊರಗಟ್ಟಿ, ಭಕ್ತಿವರ್ತನೆಗಳಿಗೆ
ಕಾಯಮಂ ಬೀಡಾಗಿಸಲ್, ಸಲೆ ಪ್ರಸಾದಿಗದು
ಮಾಯಾವಿರಹಿತ ಕಾಯಾನುಗ್ರಹಸ್ಥಲವು,
ಲಿಂಗವೈಭವದ ನಿಲವು ||೫೦||

ಜ್ಞಾನ ಕ್ರಿಯೆಗಳ ಸಾಧನೆಗೆ ಕಾಯವು ಆಶ್ರಯವಾಗಿದೆ. ಶಿವಯೋಗಿಯು ಅದನ್ನು ಅಲಕ್ಷಿಸುವದಿಲ್ಲ. ಅದು ಶಿವನ ಮನೆ. ದೈಹಿಕ ಮೋಹವನ್ನು ದೂಡಿ, ಕಾಯವನ್ನು ಭಕ್ತ್ಯಾಚರಣೆಗೆ ಉಪಯೋಗಿಸಬೇಕು.

**ಇಂದ್ರಿಯಾನುಗ್ರಹಸ್ಥಲಂ:—**

ವಿಷಯಂಗಳೊಳ್ ಸೇರಿ, ಸಕಲೇಂದ್ರಿಯಂಗಳುರೆ
ಮಸಗಿರಲ್ ಕಾಮಕೋಪಗಳಕ್ಕುಮಿಂದ್ರಿಯಗ–
ಳಸಮಾಕ್ಷನುಪಕರಣವಾಗಿ, ಲಿಂಗಾರ್ಪಣ*ಪ್ರಸಾದಗಳ ದ್ವಾರಮಾಗಿ ||
ಸಸಿನೆಯಿರೆ ಶಂಭು ಪ್ರಸಾದಮವು; ಸಾಧಕಂ
ವಿಷಯವೃತ್ತಿಯ ತಡೆವುದಿಂದ್ರಿಯಾನುಗ್ರಹಂ;
ಜಸವನೀವಸಮಸ್ಥಲಂ ಪ್ರಸಾದಿಂಗದುವೆ; ಚಲಿಸದಂತಿರ್ಪುದಲ್ಲಿ ||೫೧||

ಇಂದ್ರಿಯಗಳು ವಿಷಯಗಳಿಗೆ ಹರಿದರೆ ಕಾಮಕೋಪಗಳು ಉಂಟಾಗುವವು, ಇಂದ್ರಿಯಗಳು ಶಿವನ ಉಪಕರಣಗಳಾಗಿ ಅರ್ಪಣೆ-ಪ್ರಸಾದ ಸೇವನೆಗಳಿಗೆ ದ್ವಾರವಾದರೆ ಅವು ಕೂಡ ಪ್ರಸಾದವಾಗುವವು. ವಿಷಯ ವೃತ್ತಿಯನ್ನು ತಡೆಯುವದೇ ಇಂದ್ರಿಯಾನುಗ್ರಹವು; ಅದು ಶ್ರೇಯಸ್ಕರವು.

**ಪ್ರಾಣಾನುಗ್ರಹ ಸ್ಥಲಂ:—**

ಜಸವ ಪಡೆದಿಂದ್ರಿಯ ನಿಧಾನದಿ, ಹಸಾದಿ ತ-
ನ್ನ ಸುವಾಯುವಂ ಕ್ರಮದಿ ಮೆಲ್ಲಮೆಲ್ಲನೆ ನಿರೋ-
ಧಿಸಿಯಲ್ಲಿ ಪರಮಾತ್ಮನಂ ನಿರೀಕ್ಷಿಪುದು ಪ್ರಾಣಾನುಗ್ರಹದ ಫಲವದು ||
ಅಸುವ ಕುಂಭಕಗೊಳಿಸಿ, ಶಿವನಲ್ಲಿ ವಿಲಯಮಾ-
ಗಿಸಿ ಸ್ವಾಂತದೊಳ್ ಶಾಂತಿಯನುಭವಿಪುದನುದಿನದೊ-
ಳೊಸೆದು ಗುರುತೋರಿದಂತಭ್ಯಸಿಸುವದರಿಂದೆ ಸಾಧ್ಯಂ
ಹಸಾದಿಯರಿದು ||೫೨||

ದೇಹೇಂದ್ರಿಯಗಳ ನಿಯಂತ್ರಣದಲ್ಲಿ ಯಶಸ್ವಿಯಾಗಿ, ಸದುಪಯೋಗಗೊಳಿಸಿ, ಗುರೂಕ್ತಿಯಂತೆ ಅಭ್ಯಾಸದಿಂದ ಪ್ರಾಣ ವಾಯುವನ್ನು ಕ್ರಮವಾಗಿ ತಡೆದು ಕುಂಭಕಗೊಳಿಸಿ ಶಿವನಲ್ಲಿ ವಿಲೀನಗೊಳಿಸಿದರೆ ಸುಖ ಶಾಂತಿಗಳ ಅನುಭವವಾಗುವದು.

**ಕಾಯಾರ್ಪಣ ಸ್ಥಲಂ:—**

ಶಿವನನುಗ್ರಹ ಪಡೆದ ಕಾಯವ, ಹಸಾದಿಮಿಗೆ
ಶಿವಭಕ್ತಜನತಾಸಮಾಜೋಪಕಾರದೊಳ್,
ಶಿವನರಿವಿನಲಿ ಮೆರೆದ ತನ್ನ ದೇಶದ ಹಿತದೊಳಾವಗಂ
ಸತ್ಕ್ರಿಯೆಯೊಳು ||
ಶಿವಶರಣ ಸೇವೆಯೊಳ್, ಜ್ಞಾನಸಂಗ್ರಹಣದೊಳ್,
ಶಿವನರ್ಚನೆಯುಯೋಗದೊಳ್ ಮೋದದಿಂದುರ್ವಿ
ಸವೆಸುವದು ಶಂಭುವಿಗೆ ಭಕ್ತಿಯುತ ಕಾಯಾರ್ಪಣಂ
ಕಣಾ ಸಮನಿಸುವದು ||೫೩||

ಶಿವಾನುಗ್ರಹ ಹೊಂದಿದ ಶರೀರವನ್ನು ಶಿವಭಕ್ತರ ಸಮಾಜದ ಹಾಗೂ

ರಾಷ್ಟ್ರದ ಹಿತಕ್ಕೆ ಉಪಯೋಗಿಸಬೇಕು. ಶರಣರ ಸೇವೆಯಲ್ಲಿ ಜ್ಞಾನ ಸಂಗ್ರಹ ದಲ್ಲಿ ಅದನ್ನು ಉತ್ಸಾಹದಿಂದ ಸವೆಸಬೇಕು. ಅಂತಾದರೆ ಅದು ಕಾಯಾರ್ಪಣ ವೆನಿಸುವದು.

**ಕರಣಾರ್ಪಣ ಸ್ಥಲಂ:—**

ಕರಣಂಗಳೆಲ್ಲವಮಂ ಶಿವನೊಳ್ ಸಮರ್ಪಿಪುದು,
ಕರಣದಿಂ ಭೋಗಿಸುವ ವೈಷಯಿಕ ಸೌಖ್ಯಮಂ
ಹರಚರಣಕರ್ಪಿಪುದು; ಹಮ್ಮುಬಿಮ್ಮನೆ ಸವಿದು ಸೊಕ್ಕಿದಂ-
ತಃಕರಣಮೆಂಬ ||
ಕರಿಯುನುರೆ ಶಿವಪದಸ್ತಂಭಕ್ಕೆ ಬಿಗಿಯಲದು
ಕರಣಾರ್ಪಿತಂ ತಾನೆನಿಕ್ಕುಂ; ಹಸಾದಿ ನೆರೆ-
ಕರಣಜಯದಿಂ ಕರ್ಮಪಾಶಬಂಧವ ಹರಿದು, ತಾಳುವಂ
ಚಿರಶಾಂತಿಯ ||೫೪||

ಮನ-ಬುದ್ಧಿ-ಚಿತ್ತ-ಅಹಂಕಾರಗಳೆಲ್ಲ ಶಿವಾರ್ಪಿತವಾಗಿರಬೇಕು. ವಿಷಯ ಸುಖವನ್ನು ಶಿವಾರ್ಪಣೆ ಗೈಯಬೇಕು. ಪ್ರಸಾದಿಯು ಹೀಗೆ ಕರಣಗಳನ್ನು ಜಯಿಸಿದರೆ ಕರ್ಮ ಪಾಶಬಂಧನವು ಹರಿಯುವದು; ಚಿರಶಾಂತಿಯುಂಟಾಗು ವದು.

**ಭಾವಾರ್ಪಣ ಸ್ಥಲಂ:—**

ಭಾವದಲಿ ವೈಷಯಿಕ ಜಾಲಕಲುಷಂಗಳೆನಿ-
ತಾವರಿಸದಂತೆ ಶಿವರೂಪಮಂ ಭಾವಿಸಲ್
ಭಾವಾರ್ಪಿತಂ ಸಮನಿಕುಂ: ಭಾವ ಮಾನಸ ವಿಶೇಷಂ ಮನದ ಕಾರಣ ||
ಭಾವದಲಿ ಬೆರೆದ ಮನ, ತಂದ ಸಂಸ್ಕಾರವುಂ
ಭಾವದೊಳಗುಳಿಯದಿರ್ದೊಡೆ ಮಾತ್ರ ಪರಿಶುದ್ಧ
ಭಾವಮೆನಿಸುವದಲ್ಲಿ ಧ್ಯಾನದಿಂ ಪರಶಿವನ ಕಾಣಲಹುದಲ್ಲದಹುದೇ? ||೫೫||

ಮನಸ್ಸುಕಲುಷಿತವಾಗಿದ್ದರೆ ಭಾವವು ಶುದ್ಧವಾಗಿರುವದಿಲ್ಲ, ಮಾನಸ ವಿಶೇಷವೇ ಭಾವವು! ಭಾವದಲ್ಲಿ ಬೆರೆದ ಮನ, ತನ್ನೊಡನೆ ತಂದ ವಿಷಯ ಸಂಸ್ಕಾರಗಳು ಕೂಡ ಭಾವದಲ್ಲಿ ಉಳಿಯದಿದ್ದರೆ ಅದು ಪರಿಶುದ್ಧಭಾವವೆನಿಸು ವದು. ಪರಿಶುದ್ಧ ಭಾವದ ಶಿವ ಧ್ಯಾನವೇ ಭಾವಾರ್ಪಣ.

**ಶಿಷ್ಯ ಸ್ಥಲಂ:—**

ಅವನಿಯೊಳ್ ಶ್ರೀಗುರುವೆ ಧರ್ಮದನುಶಾಸಕಂ;
ಅವನ ದಯೆಯೊಳ್ ಮೋಕ್ಷಮುಂಬೇಳ್ಪವಂ ಶಿಷ್ಯ;
ಶಿವನೆ ಗುರು, ಗುರುವೆ ಶಿವನೆಂದಭಿನ್ನತೆಯುನಚ್ಚೊತ್ತಿ
ಮನದೊಳ್ ಭಾವಿಸಿ ||
ಭವರೋಗವೈದ್ಯ ಗುರುದೇವನಿಂ ನಿಜವರಿದು,
ಶಿವರೂಪ ತಾನೆಂದು ಸಂತಸಂಬಟ್ಟು, ಸುಖಿ–
ಪವನೆ ಶಿಷ್ಯೋತ್ತಮಂ; ತಚ್ಛಿಷ್ಯ, ಗುರುವಿನ ಪ್ರಸಾದನೊಳ್
ಬೆರೆದಿರ್ಪುದು ||೫೬||

'ಗುರು ಧರ್ಮಾಧಿಕಾರಿ, ಅವನ ದಯೆಯಿಂದ ಶಿಷ್ಯನಿಗೆ ಮುಕ್ತಿ, 'ಗುರು ಶಿವಸ್ವರೂಪನು, ಭವರೋಗ ವೈದ್ಯನು' ಎಂದು ನಂಬಿ ಅವನಿಂದ ನಿಜವನ್ನು ತಿಳಿದು ಸ್ವಸ್ವರೂಪದ ಅನುಸಂಧಾನಿಯಾಗಿರುವವನೇ ಶಿಷ್ಯೋತ್ತಮನು, ಅವನು ಗುರುಪ್ರಸಾದ ಯೋಗ್ಯನು.

**ಶುಶ್ರೂಷಾ ಸ್ಥಲಂ:—**

ಗುರುವೆ, ಸತ್ಯಾಸತ್ಯಮೆಂತೆಂತು? ತಾನದಾರ್?
ಪರಮನಾರ್? ಜೀವನಾರ್? ಪೇಳ್ವುದೆನೆ, ಸರ್ವಕು–
ತ್ತರಿಸಿ ಮಿಗೆ ಕರುಣೆಯಿಂ, ಗುರುಸೂರ್ಯ, ಶಿಷ್ಯಮಾನಸ–
ಕಮಲವನ್ನರಳಿಸಿ ||
ಹರರೂಪನಾಗಿ ನೀನಲ್ಲಿರ್ಪೆ, ಭಾವಿಸೆಂ–
ದರುಪಿದುಪದೇಶಮಂ ತಾಳ್ದು, ತದ್ಧ್ಯಾನದೊಳ್,
ಗುರುಪರತ್ವವನರಿದು, ಶಿಷ್ಯಂ ಶಿವಾತ್ಮಗುರುಶುಶ್ರೂಷೆ–
ಗಣೆಯಪ್ಪನು ||೫೭||

ನಾನಾರು? ಶಿವನಾರು? ಜೀವನಾರು? ಎಂದು ಕೇಳಿದುದಕ್ಕೆ ಸಮರ್ಪಕವಾದ ಉತ್ತರವನಿತ್ತು ಗುರುವೆಂಬ ಸೂರ್ಯನು ಶಿಷ್ಯನ ಹೃದಯವೆಂಬ ಕಮಲವನ್ನು ಅರಳಿಸುವನು. ಆ ಕಮಲದಲ್ಲಿ ಶಿವರೂಪನಾಗಿ ನೀನೇ ಇರುವೆಯೆಂದು ಹೇಳಿ ಅನುಭವಕ್ಕೆ ತರುವನು. ಶಿಷ್ಯನು ಗುರುಶ್ರೇಷ್ಠತೆಯನ್ನು ಅರಿದು ಆತನ ಸೇವೆಯಲ್ಲಿ ಮೈಮರೆಯುವನು.

**ಸೇವ್ಯ ಸ್ಥಲಂ:—**

ಪಲವಂದದಿಂ ಪಡೆದ ಗುರುವಚನಸುಧೆನೆರೆದು
ನೆಲೆನಿಲ್ಲೆ ಶಿಷ್ಯನೊಳು, ಹೊಳೆದ ಶುಶ್ರೂಷಾಂಶು
ಥಳಥಳಿಸೆ ಸೇವೆಯುತ್ಸವಮಾಗೆ, ಗುರುಸೇವೆಯನ್ನೆಸ–
ಗೆಸಗಿ ದಣಿಯದೆ ||

ಇಳೆಯು ದುಃಖಿಗಳ ಕಂಡಳುಕಿ, ಶಿವಭಾವ
ತಳೆದವರ ಸೇವೆಗೆಯ್ವಂ; ಲೋಕ ಸೇವೆಯು–
ನ್ನಲಿದೊಲಿದು ಗೆಯ್ವಂ; ಹಸಾದಿಗಿದೆ ಸೇವ್ಯಸ್ಥಲಂ
ಶಿವಕೃಪಾಸ್ಥಲಮದು ||೩೮||

ಗುರುವಚನಾಮೃತ ಬಲದಿಂದ ಸೇವಾಭಾವ ಬಲಿದು, ಗುರುಸೇವೆ ಮಾಡಿ, ಸಾಕಾಗದೆ ದುಃಖಿಗಳ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುವನು. ಇದರಿಂದ ಶಿವನ ಕೃಪೆ ಸುಲಭವಾಗುವದು.

|| ಓಂ ||

## ಪ್ರಾಣಲಿಂಗಿ

ಕಂದ|| 'ಪ್ರಾಣಮೆ ಲಿಂಗಂ, ಲಿಂಗಮೆ
ಪ್ರಾಣ' ಮಿದೆರಕಂಗೊಳಲ್ಕೆ ಜೀವಭ್ರಮೆಯುಂ
ಮಾಣಿಸಿದನುಭವ ಭಕ್ತಿ–
ತ್ರಾಣದೊಳಿರೆ ಪ್ರಾಣಲಿಂಗಿ ನಿರ್ಮಲ ಚಿತ್ತಂ ||

ಸೂಚನೆ:–'ಪ್ರಾಣವೇ ಲಿಂಗವು; ಲಿಂಗವೇ ಪ್ರಾಣವು ಎಂಬುದನ್ನು ಎರಕದಂತೆ ಗಟ್ಟಿಯಾಗಿ ನಂಬಿ, ಜೀವಭ್ರಮೆಯನ್ನು ಬಿಟ್ಟು, ಅನುಭವ ಭಕ್ತಿಯ ಬಲದಿಂದ ನಿರ್ಮಲ ಚಿತ್ತನಾದವನು ಪ್ರಾಣಲಿಂಗಿಯು.

### ಪ್ರಾಣಲಿಂಗಿಯ ಅಂಗಸ್ಥಲಂಗಳ್: ೫

**ಪ್ರಾಣಲಿಂಗಿ ಸ್ಥಲಂ:—**

ಅಸುವದೀ ಡಾಪಿಂಗಳದ್ವಾರದಿಂ ನಿರುತ–
ದುಸಿರೊಡನೆ ಪರಿದಾಡುತಿಹುದದಂ ತಡೆಯುಲಾ
ಅಸುವೆಲ್ಲಿ ತಂಗುತಿಹುದಾ ತತ್ವವೇ ಪ್ರಾಣಲಿಂಗ, ವಾ ಲಿಂಗಧಾರಿ ||

ಪೆಸರಾನುವಂ 'ಪ್ರಾಣಲಿಂಗಿ'ಯೆಂದವನಮಲ
ಶಶಿಧಾರಿಯೋಗಿ ಹೃದಯಾಂತರಾಳದೊಳಗಿ-
ರ್ದಸಮ ಪ್ರಕಾಶದ ಪರಂಜ್ಯೋತಿಯೊಳ್ ಮುಳುಂಗಿಸಿ
ಮನವ ಮೈಮರೆವನು ||೫೯||

ಈಡಾಪಿಂಗಳ ದ್ವಾರಗಳಿಂದ ನಡೆದ ಉಸಿರಾಟವನ್ನು ತಡೆದರೆ ಅದು ತಂಗುವ ಸ್ಥಳವೇ ಪ್ರಾಣಲಿಂಗವು. ಆ ಲಿಂಗಸಾಧಕನು ಪ್ರಾಣಲಿಂಗಿ, ತನ್ನ ಹೃದಯಾಂತರಾಳದಲ್ಲಿ ಕಾಣುವ ಪ್ರಕಾಶದಲ್ಲಿ ಆತನು ಮನವನ್ನು ಮುಳುಗಿಸಿ ಮೈಮರೆವನು.

**ಪ್ರಾಣಲಿಂಗಾರ್ಚನಾ ಸ್ಥಲಂ:—**

ಹೃದಯದೊಳ್ ಜ್ಞಾನದೀಪವಹಚ್ಚಿ, ತದನಾಹ
ತದ ಪೀಠದೊಳ್ ಪ್ರಾಣಲಿಂಗವ ಪ್ರತಿಷ್ಠಿಸುತ-
ಲುದಿತ ಶಮೆ ದಮೆ ಸತ್ಯ ಸುಜ್ಞಾನವಿರತಿನಿರಹಂಕಾರ ಪುಷ್ಪಂಗಳ ||
ಪುದಿದ ಮಾಲೆಯ ಸೂಡಿ, ಆತ್ಮನೈವೇದ್ಯವಂ
ಪದುಳದಿಂ ಮಾಡಿಯಾನಂದಾರತಿಯನೆತ್ತಿ
ಒದಗಿರ್ದ ಹೊರಗಿಷ್ಟವೊಳಗಸುವನೊಂದೆಯೆಂಬರಿವಿರ್ಪಡಸು
ಪೂಜೆಯು ||೬೦||

ಹೃದಯದಲ್ಲಿ ಜ್ಞಾನದೀಪ ಹಚ್ಚಿ ಅನಾಹತ ಪೀಠದಲ್ಲಿ ಪ್ರಾಣಲಿಂಗವ ಸ್ಥಾಪಿಸಿ, ಶಮೆ, ದಮೆ, ಸತ್ಯ, ಸುಜ್ಞಾನ, ನಿರಹಂಕಾರ, ವಿರತಿಗಳೆಂಬ ಹೂಗಳ ಮಾಲೆ ಹಾಕಿ, ಆತ್ಮ ನೈವೇದ್ಯವ ಮಾಡಿ, ಆನಂದದ ಆರತಿ ಎತ್ತಿ, ಹೊರ ಒಳಗಿನ, ಇಷ್ಟಪ್ರಾಣಲಿಂಗಗಳು ಬೇರಲ್ಲವೆಂಬ ಸಹಜವಾದ ಅರಿವು ಉಂಟಾಗುವದು ಪ್ರಾಣಲಿಂಗ ಪೂಜೆ.

**ಶಿವಯೋಗಸಮಾಧಿ ಸ್ಥಲಂ:—**

ಅಂತಃಕ್ರಿಯಾರತನ ಧ್ಯಾನಸಂಪತ್ತಿಯೇ
ಕಂತುಹರಯೋಗ ಸುಸಮಾಧಿ, ಭೂಮ್ಯಾದಿ ಪುರು-
ಷಾಂತಮಿಪ್ಪತ್ತೈದು ತತ್ವಗಳ ಮೀರಿದೆ ಪರಾತ್ಪರಂ; ಪವನದಲೆಯು ||

ಅಂತವಿಸಿ ಮಸ್ತಕದೊಳಿರಿಸೆ ಪೊಮ್ಮುವದಲ್ಲಿ
ಶಾಂತ ಚಿತ್ಪ್ರಭೆಯುದರ ಬೆಳ್‌ಬೆರೆವುದನುಭವಿಪು-
ದಿಂತಪ್ಪ ಶಿವಯೋಗ ಸುಸಮಾಧಿ ಸುಖಲೋಲನೇಂ
ಸುಕೃತನೇಂ ಪರಮನೋ ? ||೬೧||

ಒಳಮುಖವಾದ ವೃತ್ತಿಯಿಂದ ಧ್ಯಾನ ಮಗ್ನನಾಗಿರುವದು ಶಿವಯೋಗ ಸಮಾಧಿ. ಪ್ರಾಣವಾಯುವನ್ನು ತಡೆದು ಮಸ್ತಕದಲ್ಲಿ ನಿಲ್ಲಿಸಿದಾಗ, ಇಪ್ಪತ್ತೈದು ತತ್ವಗಳ ಮೀರಿದ ಪರಾತ್ಪರ ಪ್ರಭೆಯು ತೋರುವದು; ಅದರಲ್ಲಿ ಬೆರೆವ ಆನಂದ ಶಿವಯೋಗ ಸಮಾಧಿ ಸುಖವು.

**ಲಿಂಗನಿಜ ಸ್ಥಲಂ: —**

ದೇವದಾನವ ಮಾನವರ್, ವೇದವಿದ್ಯೆಗಳ್
ಜೀವಿಗಳ್ ಭೂತಗಳ್ ಸುಳಿದುಳಿದು ಅಳಿವುದಕೆ
ಆವುದಾಧಾರ ಕಾರಣಮದುವೆ ಸಾಕ್ಷಾತ್ ಶಿವಸ್ವರೂಪಂ ಲಿಂಗವು ||
ಭಾವಿಸಲ್ ತನ್ನೊಳಿರ್ಪೀ ಲಿಂಗ ತೋರುವನು-
ಭಾವದೊಳ್ ಬೆರೆದು ಕರಿಗೊಳ್ಳಲದು ಲಿಂಗದ ನಿ-
ಜಾವಸ್ಥೆಯುದರೊಳಿಹ ಪ್ರಾಣಲಿಂಗಿಗೆ ಬೇರೆ ಸೊಗಸು
ಮೋದಗಳಿರ್ಪುವೇ ||೬೨||

ಅಖಿಲ ವಿಶ್ವದ ಹುಟ್ಟು-ಇರುವು-ಅಳಿವುಗಳಿಗೆ ಆಧಾರ ಕಾರಣವಾದುದೇ ಲಿಂಗವು. ಆ ಲಿಂಗವು ತನ್ನಲ್ಲಿಯೇ ತೋರುವ ಅನುಭವದಲ್ಲಿ (ಸ್ವಾನುಭವದಲ್ಲಿ) ಬೆರೆದು ಬೇರಾಗದಂತಿರುವದೇ ಲಿಂಗದ ನಿಜಾವಸ್ಥೆ !

**ಅಂಗಲಿಂಗ ಸ್ಥಲಂ: —**

ತುಂಗಮಹ ಜ್ಞೇಯದೊಳ್ ಜ್ಞಾನಗೂಡಲ್, ಜ್ಞಾನ-
ಲಿಂಗಮಹುದಾರೂಪು; ಲಿಂಗದೊಳಗಂಗಮುಂ
ಅಂಗದೊಳ್ ಲಿಂಗಮುಂ ಸಂಗೊಳಿಸಿ ಸಮರಸದೊಳಿಹ ಮಹಾಜ್ಞಾನಲಿಂಗಿ ||
ಅಂಗಲಿಂಗದ ನೆಲೆಯು ನಿಲವಿಗಂ; ಸ್ವಾಂತದೊಳ್
ಮಂಗಲಕರ ಜ್ಯೋತಿಮಯ ಪರಬ್ರಹ್ಮಮುಂ
ಲಿಂಗಮುಂ ಭಾವಸಾಮಗ್ರಿಯಿಂ ಸಲೆ ಪೂಜಿಪಂ
ಸಂತತಾಂಗಲಿಂಗಿ ||೬೩||

ಅರಿವು ಅರಿಯಬೇಕಾದುದನ್ನು ಕೂಡಿದರೆ ಅಂಗವು ಲಿಂಗದಲ್ಲಿ ಸಮರಸ ಹೊಂದಿದಂತಾಗುವದು. ತನ್ನೊಳಗೆ ಜ್ಯೋತಿರ್ಮಯವಾಗಿ ಇರುವ ಪರಾತ್ಪರ ಬ್ರಹ್ಮವಾದ ಲಿಂಗವನ್ನು ಭಾವಸಾಮಗ್ರಿಯಗಳಿಂದ ಪೂಜಿಸುವವನು ಅಂಗ ಲಿಂಗಿಯು.

## ಪ್ರಾಣಿಲಿಂಗಿಯು-ಜಂಗಮು-ಲಿಂಗಸ್ಥಲಂಗಳ್: ೬

**ಆತ್ಮ ಸ್ಥಲಂ:—**

ಜೀವಿಗಳಿಗಾ ಆ ಶರೀರ ಸಂಬಂಧದಿಂ-
ದಾವ ಪೆಸರಾದುದದು ತಾನೆಂದೊಡತ್ಯಲ್ಪ-
ಭಾವಂ; ಶರೀರದೊಳ್ ಹೊದ್ದಿಹೊದ್ದದ ತೆರದೊಳಾತ್ಮನಿರ್ಪಂ;
ಕರ್ಮವ ||
ಜೀವಭಾವದೊಳೆಸಗೆ ಬಂಧನಂ ತಾನಾತ್ಮ-
ಭಾವದಿಂ, ತನು-ಕರಣ-ಹರಣ ತಾನಲ್ಲವಂ
ದಾ ವಿವೇಕದಿನಿಷ್ಟ ಕರ್ಮಗಳ ಗೈವುದಿಂತಾತ್ಮಸ್ಥಲದ ನಿಲವಲಾ ||೬೪||

ಜೀವನಿಗೆ ನಾಮರೂಪಗಳುಳ್ಳ ಶರೀರವಿದೆ. ಆ ಶರೀರವೇ ತಾನೆಂಬುದು ಜೀವಭಾವವು. ಶರೀರದೊಳಗೆ ಆಲಿಪ್ತನಾಗಿ ಆತ್ಮನಿದ್ದಾನೆ ಜೀವಭಾವದಿಂದ ಮಾಡಿದ ಕರ್ಮ ಬಂಧಕ! ಆತ್ಮಾನುಭಾವದಿಂದ ಕ್ರಿಯೆ ನಡೆಯುತ್ತಿರಬೇಕು.

**ಅಂತರಾತ್ಮ ಸ್ಥಲಂ:—**

ಜಯಿಸಿ ಕಾಮಾದಿ ಷಡ್ವೈರಿಗಳನಲ್ಲದಿಂ-
ದ್ರಿಯಗಳೋಟವ ನಿಲಿಸಿ, ಜೀವಾತ್ಮ ಭಾವಮಂ
ಲಯಿಸಿ ಪರಮಾತ್ಮನತ್ತಲ್ ಧಾವಿಪುದೆಯಂತರಾತ್ಮಸ್ಥಲಂ ತನ್ನೊಳು ||
ಪಯಣಿಸುತ್ತಿರೆ ಸತ್ತು ಚಿತ್ತದತ್ತಣಕೆ, ಸಾ-
ವಯವ ನಿರವಯವಕ್ಕೆ, ಸಕಲ ನಿಷ್ಕಲಕಿಂತು
ದ್ವಯಧರ್ಮದಂತರಾತ್ಮಂ ಜೀವನಂ ಪರಮಕೈದಿಸುವ ಸೇತು ತಾನೆ ||೬೫||

ಆತ್ಮಾನುಭಾವದಿಂದ ವರ್ತಿಸುವವನು ಷಡ್ರಿಪುಗಳನ್ನು ಜಯಿಸಿ ಇಂದ್ರಿಯ ಗಳನ್ನು ತನ್ನ ವಶದಲ್ಲಿರಿಸಿ, ಜೀವಾತ್ಮಭಾವದಿಂದ ಪರಮಾತ್ಮಭಾವದ ಕಡೆಗೆ ಹೋಗುತ್ತಿರುವ ಸ್ಥಿತಿಯೇ ಅಂತರಾತ್ಮಸ್ಥಲವು. ಈ ಅವಸ್ಥೆಯು ಜೀವ-ಪರಮರ ನಡುವಿನ ಸೇತುವೆಯಾಗಿರುವದು.

**ಪರಮಾತ್ಮ ಸ್ಥಲಂ:—**

ಗುರುವಿತ್ತ ಪರಶಿವಜ್ಞಾನದಿಂ, ಮಲೆತ ಸಂ-
ಸರಣಕಾರಣ ಮಲತ್ರಯವಳಿದುಳಿದ ಪರಾ-
ತ್ಪರದರಿವು ತೋರಲದರೊಳ್ ಬೆರೆದು ಸುಖಿಪಂತರಾತ್ಮನೇ ಪರಮಾತ್ಮನು ||
ಗುರುಳಿ ನೊರೆ ತೆರೆ ನೀರೊಳುಂಟಾಗಿ ನೀರೊಳಗೆ
ಕರಗಿ ನೀರಿರ್ಪಂತೆ ಸಕಲಮಿವು ಪರಮನೊಳ್
ಮೆರೆದು ಮರೆಗೊಳ್ವವಾ ಪರಮಾತ್ಮನಖಿಲವಂ ಬೆಳಗುವ
ಸ್ವಯಂ ಜ್ಯೋತಿಯು ||೬೬||

ಸಂಸಾರ ಕಾರಣವಾದ ಮಲತ್ರಯದ ಮುಸುಕು ಪರಶಿವಜ್ಞಾನದಿಂದ ಹರಿದಮೇಲೆ ಉಳಿದ ಪರಾತ್ಪರದ ಅರಿವಿನಲ್ಲಿ ಅಂತರಾತ್ಮನು ಬೆರೆದು ಸುಖಿಸುವಂತಾಗುವದೇ ಪರಮಾತ್ಮ ಸ್ಥಲವು. ನೀರೇ ನೊರೆತೆರೆಗಳಾಗಿ ಕಂಡು ಅಡಗುವಂತೆ ವಿಶ್ವವು ಪರಮನಲ್ಲಿ ಮೆರೆದು ಮರೆಯಾಗುವದೆಂದು ಪ್ರಾಣಲಿಂಗಿಗೆ ಆಗ ದೃಢವಾಗುವದು.

**ನಿರ್ದೇಹಾಗಮ ಸ್ಥಲಂ:—**

ಪರಮಾತ್ಮಭಾವ ಪರಿಪೂರ್ಣ ಶಿವಯೋಗಿ ತನ-
ಗಿರುವ ತನುವಿನ ಮುಚುಗಂದುಗಳ ಮೇಣ್ಸೊಕ್ಕು
ಸೊರಗುಗಳ ಗಣಿಪನಲ್ಲಂ; ಹಮ್ಮುಬಿಮ್ಮುಗಳ
ಸನಿಹನಲ್ಲೆಂದೆಂದಿಗು ||
ಸರುವ ದೇಹೋಪಾಧಿಯಿಂದೊರ್ವ ಶಿವ ಹಲವು
ತೆರನಾದೊಡಂ, ಶಿವನವಿಚ್ಛಿನ್ನನೀ ದೇಹ
ಪರಿಭಿನ್ನಮೀ ಪ್ರಕೃತಿಮೋಹರಹಿತಸ್ವಭಾವಮಿರೆ ನಿರ್ದೇಹಾಗಮ ||೬೭||

ಹೀಗೆ ಪರಮಾತ್ಮಭಾವ ಹೊಂದಿದ ಶಿವಯೋಗಿ ದೇಹಕ್ಕಾಗಿ ಪರಿತಪಿಸುವದಿಲ್ಲ ದೇಹೋಪಾಧಿಯಿಂದ ಶಿವನು ಹಲವು ತೆರನಾಗಿರುವನು. ವಾಸ್ತವಿಕವಾಗಿ ಶಿವನು ಅವಿಚ್ಛಿನ್ನನು; ಏಕನು. ದೇಹವು ಹಲವಾದುದು. ಪ್ರಕೃತಿಮೋಹ ಬಿಟ್ಟಿರುವದು ಪ್ರಾಣಲಿಂಗಿಗೆ ನಿರ್ದೇಹಾಗಮಸ್ಥಲ.

**ನಿರ್ಭಾವಾಗಮ ಸ್ಥಲಂ:—**

ಆವವನು ನಿರ್ದೇಹಿಯಯವಗೆ ತನಗಿಂತ ಬೇ–
ರಾವ ವಸ್ತುಗಳಿಲ್ಲವೆಂಬ ಕತದಿಂದನ್ಯ
ಭಾವವಿಲ್ಲವ ನಿರ್ವಿಕಾರಿ; ಚಿದ್ಗಗನದೊಳ್ ತಾದಾತ್ಮ್ಯ ಹೊಂದಿದಾಗ ||
ತಾಂ ವಲಂ ಬ್ರಹ್ಮನೆನೆ ತಾನದಿಂತೆರಡೆನಿಪ
ಭಾವ ಸಲ್ಲದವಂಗೆ; ಬಾಹ್ಯಾಂತರೊಂದಾಗಿ
ಭಾವಿಸಲ್ ಬಾರದಂತಿಹುದೆ ನಿರ್ಭಾವಾಗಮದನೆಲೆಯು
ನಿಜದ ನಿಲವು ||೯೮||

ನಿರ್ದೇಹಿಗೆ ತನ್ನ ಹೊರತು ಬೇರೆ ವಸ್ತುವಿಲ್ಲವಾದ್ದರಿಂದ ಅವನಿಗೆ ಅನ್ಯ ಭಾವವಿಲ್ಲ, ಅವನು ನಿರ್ವಿಕಾರಿ; ಅವನಿಗೆ 'ತಾನು, ಅದು' ಎಂದು ಎರಡಾಗಿ ತೋರುವ 'ತಾನೆ ಬ್ರಹ್ಮ' ಎಂಬ ಭಾವಕೂಡ ಇರದು. ಹಾಗೆ ಭಾವಿಸಲು ಕೂಡ ಬಾರಿದಿರುವದೇ ನಿರ್ಭಾವಾಗಮು!

**ನಷ್ಟಾಗಮ ಸ್ಥಲಂ:—**

ಪರಯೋಗಿ ಹೃದಯದಲಿ ಸ್ವಸ್ವರೂಪದೊಳು ಬೆರೆ–
ದಿರಲು, ಬಳಿಕರಿಯುವವನೆಲ್ಲಿ? ತನುಕರಣಗಳ
ಧರಿಸಿದವನಲ್ಲ, ಮೇಣ್‌ರಂಜನಮದಿಲ್ಲ, ಬಳಿಕರಿಯುವಿಕೆಯೆಲ್ಲಿ? ಮತ್ತೆ ||
ಎರಡೆಂಬ ನುಡಿಯಿಲ್ಲ, ಬಳಿಕರಿವುದೇನನ್ನು?
ಅರಿಯುವವನರಿಯುವಿಕೆಯರಿವು ಮೂಬಗೆ ನೀಗಿ–
ದಿರವೆ ನಷ್ಟಾಗಮದ ನೆಲೆಯೆನಿಪ್ಪುದಲ್ಲಿರುವ ಪ್ರಾಣಲಿಂಗಿಯೆ
ಪರಮನು ||೯೯||

ಸ್ವಸ್ವರೂಪದಲ್ಲಿ ಬೆರೆತಾಗ ಅರಿಯುವವರೆಲ್ಲಿ? ತನುಕರಣಗಳ ರಂಜನ ವಿಲ್ಲದಾಗ ಅರಿಯುವಿಕೆ ಹೇಗೆ? ಎರಡೆಂಬ ನುಡಿಯಿಲ್ಲದಾದಾಗ ಅರಿಯುವ ದೇನನ್ನು? ಈ (ಜ್ಞಾತೃ, ಜ್ಞಾನ, ಜ್ಞೇಯ) ಮೂಬಗೆಯ ನೀಗಿದ ಸ್ಥಿತಿಯು ನಷ್ಟಾಗಮಸ್ಥಲ! ಇಂತಹ ಪ್ರಾಣಲಿಂಗಿ ಪರಮನು.

**ಆದಿಪ್ರಸಾದಿ ಸ್ಥಲಂ:—**

ಹಲವು ಜನ್ಮದಿ ಸಾಧಿಸಿದ ವಿಶುದ್ಧತೆ, ಗುರುವಿ-
ನೊಲವು, ನಿರಹಂಕಾರಭಾವ, ಸತ್ಕರ್ಮ, ನಿ-
ಶ್ಚಲ ಶಾಂತಿ ನೆರೆಯೆ ಮಾದೇವ ಮೋಕ್ಷಂಗೊಡಲ್
ಹೃದಯಾಂತರಾಳದಿಂದ ||
ಒಲಿದೇಳ್ದು ಬರುವನಿದೆ 'ಆದಿಪ್ರಸಾದ' ವೀ
ಲಲಿತ ಶಿವಭಾವಯುಕ್ತಂಗೆ ತೋರದು ಜಗದ
ಬಲೆಯು; ಸಂಸಾರ ಬಂಧನವಳಿವುದೀಶ ಪ್ರಸಾದದಿಂ-
ದಲ್ಲದಹುದೇ ? ||೭೦||

ಪೂರ್ವಪುಣ್ಯ, ಗುರುಕರುಣೆ, ನಿರಹಂಕಾರ, ಸತ್ಕ್ರಿಯೆ, ಜ್ಞಾನಸಾಧನೆಗಳು ಕೂಡಿ ಪರಿಣಮಿಸಲು ಒಳಗಿರುವ ಶಿವನು ಮೋಕ್ಷಕೊಡಲು ಮೈದೊರುವನು. (ಶಿವಭಾವವು ಅಭಿವ್ಯಕ್ತವಾಗಿ ವ್ಯಾಪಿಸಿಕೊಳ್ಳುವದು,) ಆಗ ಸಂಸಾರದ ಬಲೆ ತಾನೆ ಕಳಚಿರುವದು.

**ಅಂತ್ಯಪ್ರಸಾದಿ ಸ್ಥಲಂ:—**

ಲಯಮಖಿಲಕಂತ್ಯಂ; 'ಪ್ರಪಂಚ ತಾನಾವನೊಳ್
ಲಯಮಪ್ಪುದಾ ಪರಮನಂತ್ಯ'ನೆಂದೊರೆದರಾ-
ರಯಿಪರಾ ಪರತತ್ವದನುಭಾವಪೂರ್ಣನಂತ್ಯ ಪ್ರಸಾದಿಸ್ಥಲದಲಿ ||
ಸ್ವಯಮಿಹಂ; ಭೇದ ಮಾಯಾಮಾಟವಾಮಾಯೆ
ಲಯಿಸೆ ಪರತತ್ವದೊಳ್, ನಗರ-ವನ, ಪಶು-ಪಕ್ಷಿ,
ಜಯ-ಪರಿಭವಾದಿ ಭೇದಗಳಂತ್ಯಮೊದಗೆ, ಶಿವನಲ್ಲದೇ-
ನುಂ ಕಾಣದು ||೭೧||

ವಿಶಾಲ ವಿಶ್ವಕ್ಕೆ ಲಯವಾಗುವದೇ ಅಂತ್ಯ! ಲಯವು ಪರಮಾತ್ಮನಲ್ಲಿ ಪರಿಣಮಿಸುವದರಿಂದ ಪರಮಾತ್ಮನಿಗೆ ಅಂತ್ಯನೆನ್ನುವರು. ಮಾಯೆ ಪರಮಾತ್ಮ ನಲ್ಲಿ ಲಯಿಸಲು ಮಾಯಾಮಾಟವಾದ ವಿಶ್ವವೂ ಸ್ವರೂಪಭೇದಗಳೂ ಅಂತ್ಯ ಗೊಳ್ಳುವವು. ಅಂದರೆ ಶಿವಸ್ವರೂಪವೇ ಆಗುವವು.

**ಸೇವ್ಯಪ್ರಸಾದಿ ಸ್ಥಲಂ:—**

ಗುರುವರಂ ಸೇವ್ಯನವನಿಂದೈದಿದನುಭವಂ
ಪರಮಪ್ರಸಾದಮಾ ಗುರು–ಸುಪ್ರಸಾದಂಗ–
ಳೆರಡನೊಂದೈಸಿ, ತಾನದರೊಳೊಂದಾದವಂ ಸೇವ್ಯಪ್ರಸಾದಿ–ಯಹನು ||
ಗುರುಸೇವೆಗೆಯ್ವಂಗೆ ಪರಮಪ್ರಸಾದ ಫಲ;
ವರಷಟ್‌ಸ್ಥಲಾಚಾರಸಾರಮುಂ ಪರಶಿವನ
ಸಿರಿಯುಮಾಗಿರ್ಪ ಸೇವ್ಯಪ್ರಸಾದಿಸ್ಥಲದೊಳಿಂಬಾದವನೆ ಸುಕೃತನು ||೭೨||

ಸೇವ್ಯನಾದ ಗುರು, ಗುರುಪ್ರಸಾದದ ಅನುಭವ, ಹಾಗೂ ತಾನು ಒಂದಾಗಿರುವ ಭಾವವೇ ಸೇವ್ಯ ಪ್ರಸಾದಿಸ್ಥಲ! ಆಗ ಪ್ರಾಣಲಿಂಗಿಯ ಗುರುಸೇವೆ ಮತ್ತು ಗುರುಪ್ರಸಾದಗಳ ಫಲವೆನಿಸುವ ಷಟ್‌ಸ್ಥಲಾಚಾರಸಾರವಾದ ಶಿವಾನುಭವದಲ್ಲಿ ಬೆರೆದಿರುವನು.

||ಓಂ||

# ಶರಣ

ಕಂದ|| ಜ್ಞಾನಪ್ರಕಾಶವಿಕಸಿತ
ತಾನುಂ ದೇಹೇಂದ್ರಿಯಾದಿಯುಂ ಶಿವರೂಪಂ
ಆನಂದ ಭಕ್ತಿಯುಕ್ತಂ
ಕಾಣುವನೆಲ್ಲೆಡೆಗು ಲಿಂಗ ನಿಲವಂ ಶರಣಂ ||

ಸೂಚನೆ:—ಜ್ಞಾನದಿಂದ ವಿಕಾಸಗೊಂಡ ತಾನೂ (ಆತ್ಮನೂ), ತನ್ನ ದೇಹೇಂದ್ರಿಯಗಳೂ ಶಿವರೂಪವಾದವನು, ಆನಂದ ಭಕ್ತಿಯಿಂದ ಎಲ್ಲವನ್ನೂ ಲಿಂಗಸ್ವರೂಪವಾಗಿಯೇ ಕಾಣುವವನು ಶರಣ.

**ಶರಣನ ಅಂಗಸ್ಥಲಂಗಳ್: ೪**

**ಶರಣ ಸ್ಥಲಂ:—**

ಮರೆದು ತವರಿನದೆಲ್ಲ, ಪತಿಯೆ ಸರ್ವಸ್ವಮೆಂ–
ದರಿದ ಸತಿಯಂತೆ, ಲಿಂಗಾತ್ಮನಂ ಮರೆವೊಕ್ಕು,
ಶರಣಂ 'ಶಿವಾದಿತ್ಯನಳಿಯುವಂ ಭವತಮವಸುಳಿದ–ಮರರಾರೆಂ'ದು ||
ಅರಿದು ನೆರೆನಂಬಿ ಯೋಗಾಂಗದೊಳ್ ಸುಜ್ಞಾನ
ಕರದಿಂ ಪರಾಶಕ್ತಿಯುಕ್ತಪ್ರಸಾದಾಖ್ಯ
ವರ ಲಿಂಗಪೂಜೆಯಂ ಗೈವನಾನಂದ ಭಕ್ತಿಯುಲಿ ಪೆರತಂಬಗೆಯುವೆ ||೭೩||

ತವರ ಬಳಗವನ್ನು ಬಿಟ್ಟು ಪತಿಯೇ ಗತಿಯೆಂದು ನಂಬಿದ ಸತಿಯಂತೆ, ಭವನಾಶದಿಂದ ಸುಖಪಡೆಯುವದಕ್ಕೆ ಶರಣನು ಲಿಂಗಪತಿಯನ್ನೇ ಮರೆಹೊಗುವನು. ಯೋಗಾಂಗಿಯಾಗಿ ಸುಜ್ಞಾನ ಕರದಿಂದ ಪ್ರಸಾದಲಿಂಗವನ್ನು ಆನಂದ ಭಕ್ತಿಯಲ್ಲಿ ಉಪಾಸಿಸುವನು.

**ತಾಮಸನಿರಸನ ಸ್ಥಲಂ:—**

ಆ ಮಹಾ ಗುರುಕೃಪಾಬಲದಿಂದೆ, ಛಲದಿಂದೆ
ಸೋಮಭಕ್ತಿಜ್ಞಾನ ಬಲದಿಂದೆ, ಶರಣ ಸಲೆ
ತಾಮಸದ ನಿರಸನವನೆಸಪಂ; ತಮೋಗುಣಂಗಳ ತುಳಿದು, ನಾಶಗೊಳಿಸಿ ||
ಕಾಮ-ಖತ್ಯಾದಿಗಳನಳಿದು, ಸಾತ್ವಿಕಗುಣ-
ಸ್ತೋಮಮಂ ಪೋಷಿಪಂ; ಜ್ಞಾನನಿಶಿತಾಸ್ತ್ರದಿಂ
ತಾಮಸಾರಿಯನಿರಿದು ಸಾತ್ವಿಕದ ಸಖನ ಪೊರೆವುದೆ ಸಹಜ
ಕಲಿಶರಣಗೆ ||೭೪||

ಗುರುಕೃಪೆ, ವ್ರತ, ಶಿವಜ್ಞಾನಗಳ ಬಲದಿಂದ ಶರಣನು ತಾಮಸವನ್ನು ಜಯಿಸುವನು; ತಮೋಗುಣಗಳನ್ನು ಕಾಮಕ್ರೋಧಗಳನ್ನು ನಾಶಗೊಳಿಸಿ ಸಾತ್ವಿಕ ಗುಣಗಳನ್ನು ಬೆಳೆಸುವನು. ಕಲಿಶರಣನು ಜ್ಞಾನಾಸ್ತ್ರದಿಂದ ಶತ್ರು ತಾಮಸವನ್ನು ಇರಿದು ಸಾತ್ವಿಕದ ಮಿತ್ರನನ್ನು ಪೊರೆವನು.

**ನಿರ್ದೇಶ ಸ್ಥಲಂ:—**

ಪೋಷಿಪ್ಪುದು ತಾಮಸವ, ಸಂಸೃತಿಯಬಲೆ; ಅದಂ
ನಾಶಿಸಿ ಶಿವಜ್ಞಾನಮಂ ಗುರುವರೇಣ್ಯ ನಿ-
ರ್ದೇಶಿಸುತ್ತಿಹುದೆ ನಿರ್ದೇಶಸ್ಥಲದ ನಿಲವು; ಶರಣಂಗೆ ನಿರುತ ನಿರುತ ||
ದೇಶಿಕೋತ್ತಮ ಶಿವಾದ್ವೈತಸುಜ್ಞಾನ ವಾ-
ರಾಶಿ ಪೂರ್ಣೇಂದು ಜೀವನ್ಮುಕ್ತ ಗುರು, ಚಿತ್ಪ್ರ-
ಕಾಶದಲಿ ಲಿಂಗದಾ ನೆಲೆಕಲೆಯ ತೋರಲದ ಬೆರೆಯುತವ
ವೈಮರೆವನು ||೭೫||

ಸಾಗಿಬರುವ ಸಂಸಾರದ ಬಲೆ ತಾಮಸವನ್ನು ರಕ್ಷಿಸಿ ಬೆಳೆಸುವದು, ಅದಕ್ಕಾಗಿ ಗುರುವಿನಿಂದ ಆಗಾಗ ಉನ್ನತ ಶಿವಜ್ಞಾನ ಪಡೆಯುತ್ತಿರುವದು ನಿರ್ದೇಶಸ್ಥಲ! ಶಿವಜ್ಞಾನಾಭಿವೃದ್ಧಿಯನ್ನುಂಟು ಮಾಡುವ ಜೀವನ್ಮುಕ್ತ

ಶ್ರೀಗುರು ಚಿತ್ಕಲೆಯ ಪ್ರಕಾಶದಲ್ಲಿ ಲಿಂಗದ ನೆಲೆಕಲೆ ತೋರಿದರೆ ಶರಣ ಬೆರೆದು ನಿಬ್ಬೆರಗಾಗುವನು.

**ಶೀಲಸಂಪಾದನ ಸ್ಥಲಂ:—**

ಶೀಲಮದು ಪತಿಯೊಳತ್ಯನುರಾಗಮಿರೆ ಸತಿಗೆ;
ಶೀಲಮದು ಶರಣಂಗೆ ಶಿವಸಾಮರಸ್ಯದೊಳ್
ಲೋಲುಪತೆ; ತಚ್ಛೀಲ ಸಂಪಾದನಂ ಸಮನಿಸಲ್‌ವೇಳ್ಕುಂ
ಗಡಮವಂಗೆ ||
ಮೇಲೆ ಸೈರಣೆ, ಶಾಂತಿ, ಸಮತೆಗಳ್ ಭಾವಮಂ
ಓಲೈಸಿ ಬೆಳೆಸುತಿಹುದುಂ ಶೀಲ ಶರಣಂಗೆ;
ಶೀಲಸಂಪಾದನಮವಶ್ಯಕಂ ಗುರುಕೃಪೆಗು ಪರಶಿವನ ಪರವಶತೆಗು ||೭೬||

ಪತಿಭಕ್ತಿಯು ಸತಿಗೆ ಶೀಲವಾದಂತೆ, ಶಿವಸಾಮರಸ್ಯದಲ್ಲಿ ಹಂಬಲವು ಶರಣನಿಗೆ ಶೀಲವು. ಭೂಷಣಾಸ್ಪದವಾದ ಆ ಶೀಲದಿಂದ ಸೈರಣೆ, ಸಮತೆ, ಶಾಂತಿಗಳು ಭಾವಗೌರವವನ್ನು ಬೆಳೆಸುವವು. ಗುರುಕೃಪೆಗೂ ಶಿವಾನಂದಕ್ಕೂ ಶೀಲವು ಅವಶ್ಯಕವು.

**ಶರಣನ–ಪ್ರಸಾದ–ಲಿಂಗಸ್ಥಲಂಗಳ್: ೧೨**

**ದೀಕ್ಷಾಪಾದೋದಕ ಸ್ಥಲಂ:—**

ಹೃದಯ ಸಮ್ಮುದದ ಗುರುದೇವ, ಪರಿಶುದ್ಧ ಹೃದಯದ
ಶಿಷ್ಯರಿವರ ದೀಕ್ಷಾಸಮಯ ಸಂಗತದ
ಸದುಭಾವ, ಗುರು–ಶಿಷ್ಯ ಸಂಬಂಧ ವಿಜ್ಞಾನದೊಳ್ ಬೆರೆಯೆ
ಮೇಣ್ ಶಿಷ್ಯನಾ ||
ಪದುಳದಾ ಸೇವೆ, ಗುರುವಿನ ಕರುಣೆಯೊಂದಾಗ
ಉದಿಸಿದಾನಂದರಸ, ದೀಕ್ಷಾಪದೋದಕಂ;
ತದನುಭವದಾನಂದಯುಕ್ತ ಶರಣಂ ಗುರುವಿನಡಿಗೊಳದ
ಹಂಸನಹನು ||೭೭||

ಗುರುವಿನ ಆನಂದ ಹೃದಯ ಶಿಷ್ಯನ ಪರಿಶುದ್ಧ ಹೃದಯ ಒಂದಾದಾಗ ವ್ಯಕ್ತವಾಗುವ ಸದ್ಭಾವವು, ಗುರುಶಿಷ್ಯ ಸಂಬಂಧಕ್ಕೆ ಬೆಳಕಾಗುವದು. ಆಗ

ಶಿಷ್ಯನ ಸೇವೆ, ಗುರುವಿನ ಕರುಣೆ ಬೆರೆದು ಮೈದೋರುವ ಆನಂದಭರವು ದೀಕ್ಷಾ ಪಾದೋದಕವೆನಿಸುವದು.

**ಶಿಕ್ಷಾಪಾದೋದಕ ಸ್ಥಲಂ:—**

ಗುರುಶಿಷ್ಯ ಸಂಯೋಗದಾನಂದವರಿವಕ್ಕು;
ಗುರುವದಂ ಬೋಧಿಸಿರೆ, ಶಿಷ್ಯಮನನಂಗೈಯೆ,
ಪರಮ ಶಿಕ್ಷಾಪದೋದಕದ ನೆಲೆಯೆನೆ ಪೆಸರ್; ಶ್ರುತಿಶಾಸ್ತ್ರಗಳ
ಕಡಲನು ||
ಗುರುಯುಕ್ತಿಗೋಲಿನಿಂ ಮಥಿಸಿಯುಣ್ಮಿದ ಸುಧೆಯ
ನೆರೆಯುಣ್ಣಲಂತರಾಕಾಶದೊಳ್ ತತ್ಸುಧಾ-
ಕರನುದಿಸಿ ಪಸರಿಸಿದ ಬೆಳದಿಂಗಳೊಳ್ ಶರಣವಿಹರಿಪಂ
ಸೊಗಸಿನಿಂದ ||೭೮||

ಗುರುಶಿಷ್ಯ ಸಂಯೋಗಾನಂದವು ಜ್ಞಾನ ಕಾರಣವು. ಗುರುಬೋಧೆಯನ್ನು ಶಿಷ್ಯ ಅರಗಿಸಿಕೊಳ್ಳುವದೇ ಶಿಕ್ಷಾಪಾದೋದಕವು. ಶಾಸ್ತ್ರ ಸಮುದ್ರವನ್ನು ಗುರುವೆಂಬ ಕಡಗೋಲಿನಿಂದ ಕಡೆದು ಹುಟ್ಟುವ ಅಮೃತವನ್ನು ಶಿಷ್ಯನುಂಡಾಗ ಅಂತರಾಕಾಶದಲ್ಲಿ ಅಮೃತಕಿರಣ (ಚಂದ್ರ) ಉದಯಿಸಿದಂತಾಗುವದು.

**ಜ್ಞಾನಪಾದೋದಕ ಸ್ಥಲಂ:—**

ಅರಿವುದಿಂಗಳ ಬೆಳಗಿನೊಳ್ ಶರಣ ವಿಹರಿಸು-
ತ್ತಿರೆ, ಪದೆದು ಮುದವೇರಲಾ ಕಾಂತಿಯೊಳ್ ತಾನೆ
ಬೆರೆದು, ಮೈಮರೆಯಲಿದೆ ಜ್ಞಾನಪಾದೋದಕಾಪ್ಯಾಯನಂ
ಪೇಳ್ವುದೇನು? ||
ಪರಿದಿರಲ್ ಮುಗಿಲೋಳಿ ಹುಣ್ಣಿಮೆಯ ಬೆಳಪ ಚಂ-
ದಿರನಂತೆ ತಾಂ ತೊಳಗುವಂ ಪ್ರಪಂಚೋಪಾಧಿ
ವಿರಹಿತ ಪರಾನಂದ ಪರವಶತೆಯಿಂವೇನದಗ್ಗಳವೊ ಶರಣ ಚರಿತೆ? ||೭೯||

ಜ್ಞಾನದ ಬೆಳದಿಂಗಳಲ್ಲಿ ಶರಣವಿಹರಿಸುವಾಗ ಮುದವೇರಿ ಮೈಮರೆಯುವದು ಜ್ಞಾನ ಪಾದೋದಕದ ತೃಪ್ತಿಯು, ಮೋಡವಿಲ್ಲದ ಆಕಾಶದಲ್ಲಿಯ ಹುಣ್ಣಿವೆಯ ಚಂದ್ರನಂತೆ ಪ್ರಪಂಚೋಪಾಧಿ ಕಳಚಿದ ಶರಣನು ಆನಂದಪರವಶನಾಗಿ ತೊಳಗಿ ಬೆಳಗುವನು.

**ಕ್ರಿಯಾನಿಷ್ಪತ್ತಿ ಸ್ಥಲಂ:—**

ಹುರಿದ ಬೀಜಂ ಮೊಳೆಯದಂತೆವೊಲಹಂಕಾರ
ವಿರಹಿತರಿದನ ಕರ್ಮ, ಭವಕೆ ಕಾರಣಮಲ್ತು;
ಬರಿಸದದು ಫಲಪದಂಗಳ; ಮಿಂಚು ಫಕ್ಕನೆ ಪಳಂಚಲೇವುದು ಗಗನಕೆ? ||
ಪರಕಾಯಯುತ ಶರಣನೊಳ್ ಕ್ರಿಯೆಯು ತೋರ್ಕೆವಡೆ-
ದಿರಲೇನು? ತತ್‌ಕರ್ಮ ಫಲಲೇಪ ತಾನಿಲ್ಲ;
ಶರಣ ಶಿವಯೋಗೀಂದ್ರಗಿದು ಕ್ರಿಯಾನಿಷ್ಪತ್ತಿಯೆಡೆ
ಭವಂಗಳ ಬಿಡುಗಡೆ ||೬೦||

ಹುರಿದ ಬೀಜ ಭೋಗಯೋಗ್ಯವಾದರೂ ಅದು ಮೊಳೆಯದು. ಹಾಗೆ ಜ್ಞಾನಿಯ ಕರ್ಮ ಭವಕ್ಕೆ ಕಾರಣವಲ್ಲ: ಫಲಪದಗಳ ಕೊಡುವದಲ್ಲ. ಹೊಳೆ ಹೊಳೆವ ಮಿಂಚು ಆಕಾಶಕ್ಕೆ ಲೇಪಾಗದು, ಶರಣನಲ್ಲಿ ಕ್ರಿಯೆ ಕಂಡರೂ ಅದು ಫಲಕಾರಿಯಲ್ಲ.

**ಭಾವನಿಷ್ಪತ್ತಿ ಸ್ಥಲಂ:—**

ಪರಶಿವನ ಶರಣರೊಳಗಾ ಆ ಕ್ರಿಯಾಭಾವ-
ನರಸುವರ್, ಸಿಂಪಿನೊಳ್ ಬೆಳ್ಳಿಯಂ ವಿಭ್ರಮಿತ-
ರರಸುವಂತಿರೆ; ಬಪ್ಪ ಫಲವೇನು? ಕಟ್ಟಿಗೆಯು ಕಿಚ್ಚು ಕಟ್ಟಿಗೆಯು ಸುಟ್ಟು ||
ಉರಿದು ತಾನುಂ ಕಡೆಗೆ ತೊಳಗದುರೆ ನಂದುವಂ-
ತಿರೆ, ಪರಶಿವಜ್ಞಾನಿಯಾದೊಡಾ ಭಾವಮಂ
ಪರಮನೊಳ್ ನಾಡೆ ಲಯಗೊಳಿಪನಿದು ಭಾವನಿಷ್ಪತ್ತಿ
ಸ್ಥಲದ ನಿಲವು ||೬೧||

ಭ್ರಮಿತರು, ಸಿಂಪಿನಲ್ಲಿ ಬೆಳ್ಳಿಯನ್ನು ಕಾಣುವಂತೆ, ಶರಣರಲ್ಲಿ ಕ್ರಿಯಾ ಭಾವವನ್ನು ಆರೋಪಿಸುವರು. ಕಟ್ಟಿಗೆಯು ಕಿಚ್ಚಾಗಿ ಬೆಳಗಿನಂದುವಂತೆ ಶಿವ ಜ್ಞಾನಿಯು ಆ ಜ್ಞಾನ ಕ್ರಿಯಾಭಾವವನ್ನು ಪರಮನಲ್ಲಿಯೇ ಲಯಗೊಳಿಸುವನು.

**ಜ್ಞಾನನಿಷ್ಪತ್ತಿ ಸ್ಥಲಂ:—**

ಜ್ಞಾನಿಂಗೆ ಜ್ಞೇಯಮಿಲ್ಲದರೊಳೊಂದಾಗಿಹಂ;
ಬಾನಿನಲಿ ಹೊಡೆಗುಡುಗು ಪರಿಣಮಿಸದಂತೆ ಸಲೆ
ಜ್ಞಾನಸದಾನಾದಾನ ನಡೆಮೊಡೇನದರಿಂದೆ ಜ್ಞಾನಿಯಾಂತರ್ಯದಲ್ಲಿ ||

ಸ್ವಾನುಭವಮಲುಗದಿಪ್ಪುದು; ಮತ್ತೆ ಆ ತ್ರಿಪುಟಿ
ಕಾಣದು; ಸ್ವಯಂ ಪ್ರಕಾಶದಿ ಬೇರೆ ರೂಹಿಪುದೆ?
ಜ್ಞಾನನಿಷ್ಪತ್ತಿಸ್ಥಲದ ನಿಲವಿದೆಂಬರಿದೆ ಮೋಕ್ಷದ ಮಹಾದ್ವಾರವು ||೮೨||

ಜ್ಞಾನಿಯು ಜ್ಞೇಯದಲ್ಲಿ ಕೂಡಿರುವನು. ಮೋಡದ ಗುಡುಗು ಆಕಾಶದ ಮೇಲೆ ಪರಿಣಾಮ ಮಾಡದಿರುವಂತೆ, ಶ್ರವಣ-ಬೋಧೆಗಳು ನಡೆಯುತ್ತಿದ್ದರೂ ಜ್ಞಾನಿಯ ಸ್ವಾನುಭವ ಅಚಲವಾಗಿರುವದು. ತ್ರಿಪುಟಿ ಇಲ್ಲದುದೇ ಜ್ಞಾನ ನಿಷ್ಪತ್ತಿ!

**ಪಿಂಡಾಕಾಶ ಸ್ಥಲಂ:—**

ಖಂಡಘಟಗಳುಪಾದಿಯೊಡನಿರ್ದೊಡಂ ಸಭವ-
ಖಂಡಿತಂ ಹೊರಗೊಳಗವೊಂದೇವಿಯತ್ತು; ಬ್ರ-
ಹ್ಮಾಂಡದೊಡನಿರ್ಪುದುಮದೇ ಗಗನಮಂತೆ ಪರಿಪೂರ್ಣ-
ನಾಗಿಹನಾತ್ಮನು ||
ದಿಂಡಿನೊಡನಿರ್ದುಂ ಪರಾಕಾಶದೇಕತ್ವ-
ಗೊಂಡಿಹಂ ಪರಶಿವಂ, ವಿಮಲ ಜಲ ಜಲಗಳೊಳ್
ಕಂಡು ಬಹ ರವಿಯಂತೆ; ಭಾವವಿಂತದ್ವೈತಮಾಗೆ ಪಿಂಡಾಕಾಶನು ||೮೩||

ಖಂಡವಾದ ಘಟಗಳಲ್ಲಿದ್ದರೂ ಆಕಾಶವು ತಾನು ಅಖಂಡವೇ ಆಗಿರುವದು. ಘಟದ ಒಳಗೆಹೊರಗೆ ಬ್ರಹ್ಮಾಂಡದೊಡನೆ ಇರುವ ಗಗನವೆಲ್ಲ ಒಂದೇ! ಶರೀರ ದೊಡನಿದ್ದರೂ ಪರಿಪೂರ್ಣ ಪರಾತ್ಪರನಾದ ಆತ್ಮನು ಒಬ್ಬನೇ! ಜಲಜಲಗಳಲ್ಲಿ ಕಾಣುವ ರವಿಬಿಂಬದಂತೆ ಜೀವಜೀವರಲ್ಲಿರುವ ಆತ್ಮನು ಪಿಂಡಾಕಾಶನೆನಿಸುವನು.

**ಬಿಂದ್ವಾಕಾಶ ಸ್ಥಲಂ:—**

ಈ ವಾಯುವೊಂದಿರ್ದು ಪ್ರಾಣರೂಪದಿ ಸರ್ವ
ಜೀವಿಗಳ ತನುವೊಳಿರ್ಪಂತೆ, ಪರಮಾತ್ಮನೇ
ಜೀವಾತ್ಮ ತಾನಾಗಿ ಸರ್ವ ಜೀವಿಗಳ ಸೇರ್ದಂ; ತೇಜವೊಂದಾಗಿಹ ||
ಪಾವಕಂ, ಕಿಡಿ-ಸೊಡರ್-ಬೆಂಕಿ-ದಳ್ಳುರಿ-ಮಿಂಚು-
ದಾವಾಗ್ನಿಯೆಂದೆಂದು ತೋರ್ಪಂತೆ ಶಿವನು ಸ-
ರ್ವಾವರಿಪ ಸರ್ವ ಚೈತನ್ಯಸ್ವರೂಪನಿಹನಿದುವೆ ಬಿಂದ್ವಾಕಾಶವು ||೮೪||

ಒಂದೇ ವಾಯು ಸರ್ವ ಜೀವಿಗಳಲ್ಲಿ ಪ್ರಾಣವಾಗಿರುವಂತೆ, ಪರಮಾತ್ಮನು ಸರ್ವ ಜೀವಿಗಳಲ್ಲಿ ಜೀವಾತ್ಮನಾಗಿರುವನು. ಕಿಡಿ, ಬೆಂಕಿ, ದೀಪ ಮುಂತಾದೆಡೆಗಳಲ್ಲಿರುವ ತೇಜವು ಒಂದೇ! ಶಿವನು ಹೀಗೆ ಎಲ್ಲೆಡೆಗೂ ಸರ್ವಚೈತನ್ಯ ಸ್ವರೂಪನಾಗಿರುವದೇ ಬಿಂದ್ವಾಕಾಶವು!

**ಮಹಾಕಾಶ ಸ್ಥಲಂ:—**

ಅರಿವೊಡಂ ಬ್ರಹ್ಮಾಂಡ ಪಿಂಡಾಂಡವೆರಡರೊಳ್
ಭರಿತಮಾಗಿಹ ಗಗನಮೊಂದಿರ್ಪ ತೆರನಾತ್ಮ
ಪರಮಾತ್ಮರೊಳಗೆನಿತು ಭೇದಮಿಲ್ಲೇಕಸ್ವರೂಪಮಿದು ನಿಚ್ಚಮೆಂದು ||
ಅರಿವು ಕರಿಗೊಳೆ ಮಹಾಕಾಶಸ್ಥಲದ ನಿಲವು
ಒರೆವುದೇನನುಪಮಾದ್ವಯ, ಸಚ್ಚಿದಾನಂದ,
ಪರಶಿವ, ಪರಬ್ರಹ್ಮ, ಲಿಂಗಮಿಂತೆಂಬ ಪರಮಾನು
ಭಾವಿಯು ಶರಣನು ||೫||

ಪಿಂಡಾಂಡ–ಬ್ರಹ್ಮಾಂಡವೆರಡರಲ್ಲಿರುವ ಆಕಾಶದಲ್ಲಿ ಭೇದವಿರದಂತೆ, ಆತ್ಮ ಪರಮಾತ್ಮರಲ್ಲಿಯೂ ಭೇದವಿಲ್ಲ. ಈ ಜ್ಞಾನವು ಸ್ಥಿರವಾದರೆ ಅದು ಮಹಾಕಾಶದ ನಿಲವು; ಪರಶಿವ, ಪರಬ್ರಹ್ಮಲಿಂಗವು ಇಂತೆಂಬುದು ಶರಣನ ಪರಮಾನುಭಾವವು.

**ಕ್ರಿಯಾಪ್ರಕಾಶ ಸ್ಥಲಂ:—**

ಜ್ಞಾನಮಾನಂದಸ್ವರೂಪಮಾಕಾಶೋಪ–
ಮಾನ ಪರಶಿವನೆ ತಾನೆಂದೆಂದು, ಸ್ವಸ್ವರೂ–
ಪಾನು ಸಂಧಾನಮೆಸಪೊಡೆ, ತಾಂ ಕ್ರಿಯಾಪ್ರಕಾಶಸ್ಥಲದ ನಿಜದ ನಿಲವು ||
ಧ್ಯಾನಮದು ಪರಮಪ್ರಕಾಶನಹ ಬ್ರಹ್ಮನೊಳ್
ತಾನೊಂದುಗೂಡಿರ್ದ ಬೆಳಗು, ಸಂಹರಿಸುವದು
ಕ್ಷೀಣಿಸಿದ ಸಂಸೃತಿಯನಾ ಬೆಳಗೆ ನಿಚ್ಚಂ ಪ್ರಕಾಶಂ ಶರಣಗೆ ||೬||

ಜ್ಞಾನಾನಂದಗಳ ಸ್ವರೂಪನೂ ಆಕಾಶದಂತಿರುವವನೂ ಆದ ಪರಶಿವನೆ ತಾನೆಂದು ಸ್ವಸ್ವರೂಪಾನುಸಂಧಾನ ನಡೆಯುತ್ತ ಇರಲು ಆ ಧ್ಯಾನವು ಪರಮನಲ್ಲಿ ಒಂದಾದ ಬೆಳಗು ಸಂಸಾರವನ್ನು ತೊಲಗಿಸುವದು. ಆ ಬೆಳಕು ಕ್ರಿಯಾ ಪ್ರಕಾಶವು.

**ಭಾವಪ್ರಕಾಶ ಸ್ಥಲಂ:—**

ಭಾವದಲಿ ಭಿನ್ನತ್ವಮಿಲ್ಲದುದೆ ಶರಣಂಗೆ
ಭಾವಪ್ರಕಾಶನಂ; ಬುದ್ಧಿವೈಚಾರಿಕದ
ಭಾವ ಪರಭಾವದಲಿ ಲಯಿಕುಂ ತರಂಗ ನೀರ್ಬೆರೆವಂತೆ; ರಾಗಾದಿಯ ||
ಭಾವಮಂ ತವಿಸಿರ್ದ ಶಿವಯೋಗಿಗಾನಂದ–
ಭಾವದೊಳ್ ಕರಣಂಗಳಣ್ಮಲಲ್ಲೆಲ್ಲ ಶಿವ–
ಭಾವಮೆ ಪ್ರಕಾಶಿಪುದು; ರವಿಕಿರಣ ಮಧ್ಯದೊಳ್
ರಜನಿ ಬಾಳುವಳೆ ಪೇಳಾ? ||೮೭||

ಅಭೇದ ಭಾವವು ಭಾವಪ್ರಕಾಶನವು! ತೆರೆನೊರೆ ನೀರಲ್ಲಿ ನೀರಾಗಿರುವಂತೆ. ಬುದ್ಧಿ ವಿಚಾರಗಳ ವಿವಿಧ ಭಾವಗಳು ಶಿವಭಾವದಲ್ಲಿ ಲೀನವಾಗಿರುವ, ಶಿವ ಯೋಗಿಯ ಕರಣಗಳು, ಚಲಿಸಿದರೂ ಅಲ್ಲೆಲ್ಲ ಶಿವಭಾವವೇ ಪ್ರಕಾಶಿಸುವದು.

**ಜ್ಞಾನಪ್ರಕಾಶ ಸ್ಥಲಂ:—**

ಪರಮಲಿಂಗಾಂಗಯೋಗಜ್ಞಾನ ಯೋಜನಂ
ಶರಣಂಗೆ ಜ್ಞಾನಪ್ರಕಾಶಸ್ಥಲಂ; ಬಗೆಯೆ
ಪರಮಂಗೆ ಬ್ರಹ್ಮಾಂಡ ಬೇರಿಲ್ಲವೆಂಬ ಬ್ರಹ್ಮಜ್ಞಾನಮುಂಟಾಗಲು ||
ಸರುವ ವಿಶ್ವಂ ಜ್ಞಾನಮಯುವಾಗಿ ಬೆಳಗುವದು;
ಪರಶಿವಾದ್ವೈತ ವಿಜ್ಞಾನವೇ ಮೋಕ್ಷಮೆಂ–
ದಿರದೆ ಚಿನ್ಮಯತೆಯೊಳಗಾಳ್ದಾಳ್ದು ಶಿವಯೋಗಿ ವಿಹರಿಸು–
ವದೇನೆಂಬೆನು ||೮೮||

ಲಿಂಗಾಂಗ ಸಾಮರಸ್ಯಜ್ಞಾನ ಯೋಜನೆಯು ಶರಣನ ಜ್ಞಾನಪ್ರಕಾಶನದ ನೆಲೆಯು. ಬ್ರಹ್ಮಾಂಡವು ಶಿವನಿಗೆ ಬೇರಲ್ಲವೆಂಬ ಜ್ಞಾನ, ನಿಧಿಗೊಂಡಾಗ ಸರ್ವ ವೆಲ್ಲ ಜ್ಞಾನಮಯವಾಗಿ ಬೆಳಗುವದು. ಅದುವೇ ಮೋಕ್ಷವೂ ಆಗಿರುವದು.

|| ಓಂ ||

# ಐಕ್ಯ

ಕಂದ|| ಶಿವ–ಜೀವೋಭಯ ಭಾವಂ
ತವಿಸಿದ ಸಮರಸಸುಖಸ್ವರೂಪಂ ಮಹಿಮಂ
ಅವಿರಲ ಸದ್ಭಕ್ತ್ಯಾನಂ–
ದವೆ ತಾನಾಗಿರ್ಪ ಜೀವಮುಕ್ತಂ ಐಕ್ಯಂ ||

ಸೂಚನೆ:– ಶಿವ–ಜೀವರೆಂಬ ಭೇದವಳಿದವನು ಲಿಂಗಾಂಗ ಸಮರಸಸುಖ ಸ್ವರೂಪನು ಶ್ರೇಷ್ಠವಾದ ಭಕ್ತಿ–ಆನಂದಗಳೇ ತಾನಾದವನು ಜೀವನ್ಮುಕ್ತನು ಐಕ್ಯನು.

## ಐಕ್ಯನ ಅಂಗಸ್ಥಲಂಗಳ್: ೪

**ಐಕ್ಯ ಸ್ಥಲಂ:—**

ಶಿವ–ಜೀವ ಬೇರಲ್ಲ; ಲಿಂಗಾಂಗವೆರಡಲ್ಲ:
ಹವಣು ಹಾರಯಿಪಿಲ್ಲ; ದೇಹವಲ್ಮೀಕದೊಳ
ಗವಿತಿರ್ಪ ಸಂಸಾರಸರ್ಪ ಮುನ್ನಿಲ್ಲ; ಮಾಯಾವಿಜೃಂಭಣೆಯಿಲ್ಲವು ||
ಭುವನವೈಭವವೀಕ್ಷಿಸುವದಿಲ್ಲ; ಸಂಗಡಿಸಿ–
ದವರೊಳಾಪ್ತರನಾಪ್ತರಿಲ್ಲ; ಸದಸತ್ತಿಲ್ಲ;
ಶಿವಸಾಮರಸ್ಯ ಶಿಖರವನೇರ್ದು ಬಯಲನಾಳಿದಖಂಡ
ಸುಖಿಯೈಕ್ಯಗೆ ||೮೯||

ಶಿವಸಾಮರಸ್ಯಕ್ಕೇರಿದವನಿಗೆ ಶಿವ–ಜೀವ, ಲಿಂಗ–ಅಂಗ; ಸತ್–ಅಸತ್ ಎಂಬ ಭೇದಗಳಿರುವದಿಲ್ಲ. ಇಚ್ಛೆಯತ್ನಗಳಿಲ್ಲ; ಮಾಯಾಮಾಟದ ಸಂಸಾರವಿಲ್ಲ; ಭುವನ ವೈಭವವಿಲ್ಲ. ಆಪ್ತರು ಅನಾಪ್ತರು ಎಂಬ ಪರಿಯೂ ಇಲ್ಲ. ಇದು ಐಕ್ಯನ ಬಗೆ.

**ಆಚಾರಸಂಪತ್ತಿ ಸ್ಥಲಂ:—**

ರೂಢಿಯೊಳ್ ತಾನೈಕ್ಯನಾಡಿದುದು ಶಿವಮಂತ್ರ;
ನೋಡಿದುದು ಶಿವರೂಪ; ಕೇಳಿದುದು ಶಿವನ ತುತಿ;
ಮಾಡಿದುದು ಶಿವಪೂಜೆ; ಮುಟ್ಟಿದುದು ಶಿವಲಿಂಗ; ನಡೆಯೆ
ಶಿವನೆಡೆಗೆ ಗಮನ ||

ಕೂಡಿದುದು ಸತ್ಸಂಗ; ಧ್ಯಾನಿಪುದು ಶಿವತತ್ವ;
ಬೇಡಬೇಕೆನೆ ಶಿವನ ಲೀಲೆ; ಇಂತಾಚಾರ
ನಾಡೆ ಶಿವಶುಭಮಾಗಲಾಚಾರ ಸಂಪತ್ತಿಯೆಂಬುದೈಕ್ಯಂಗೆ ನೆಲೆಯು ||೯೦||

ಐಕ್ಯನ ಆಚಾರವೆಲ್ಲ ಶಿವನ ಲೀಲಾಮಯವಾದಾಚಾರವೇ ಆಗಿರುವದು. ಅವನ ನಡೆ ನುಡಿಗಳೆಲ್ಲ ಶಿವನ–ಪೂಜೆ–ಧ್ಯಾನ ಜಪ ಮುಂತಾದವುಗಳೇ ಆಗಿರುವವು. ಅವನ ಆಚಾರ ಮಂಗಲಕರವಾಗಿರುವದೇ ಆಚಾರ ಸಂಪತ್ತು.

**ಏಕಭಾಜನ ಸ್ಥಲಂ:—**

ಸಕಲವಿಶ್ವಮಿದು ಶಿವನೊಳ್, ಶಿವಂ ವಿಶ್ವದೊಳ–
ಗಕಲಂಕಮಾಗಿ ಬೆಳಗುವವು; ತಾಮೊಂದು ಮೊಂ–
ದಕೆ ಶಿವಂ ವಿಶ್ವಮಾದಾರಮಾಧೇಯ ಮಾಗಿಹವು ಜೀವನ್ಮುಕ್ತನು ||
ಸಕಲ ಭುವನಂಗಳೊಳ್ ತನ್ನೊಳಾ ಅಭವನೊಳ್
ಪ್ರಕಟಿತ ಶಿವಾದ್ವೈತ ಸಚ್ಚಿದಾನಂದದಾ
ಸುಕರ ಸ್ವರೂಪವನ್ನೀಕ್ಷಿಸುವನಿದೆ ಏಕ ಭಾಜನಸ್ಥಲದ ನಿಲವು ||೯೧||

ಶಿವನಲ್ಲಿ ವಿಶ್ವವು ವಿಶ್ವದಲ್ಲಿ ಶಿವನು ಬೆಳಗುವವು. ವಿಶ್ವಕ್ಕೆ ಶಿವನು ಆಧಾರನಾಗಿಯೂ ಶಿವನಿಗೆ ವಿಶ್ವವು ಆಧೇಯವಾಗಿಯೂ ಇರುವವು. ಜೀವನ್ಮುಕ್ತನು ವಿಶ್ವದಲ್ಲಿ ತನ್ನಲ್ಲಿ ಶಿವನಲ್ಲಿ ಸಚ್ಚಿದಾನಂದ ಸ್ವರೂಪವನ್ನೇ ಕಾಣುವನು; ಇದು ಏಕಭಾಜನ.

**ಸಹ ಭಾ (ಭೋ) ಜನ ಸ್ಥಲಂ:—**

ಗುರುವಿನೊಳ್ ಲಿಂಗದೊಳ್ ತನ್ನೊಳಲ್ಲದೆ ಚರಾ–
ಚರ ವಿಶ್ವದೊಳಗಭೇದತ್ವ, ವಾಸ್ತವಿಕಮಾ–
ಗಿರೆ, ಸರ್ವ ಸಾಕ್ಷಾಚ್ಚಿದಾತ್ಮೈಕ್ಯ ಶಿವಯೋಗಿಗೆಸೆವ
ಸಹಭಾಜನಮದು ||
ಗುರುವಾನೆ, ಶಿವನಾನೆ, ಚರವಾನೆ, ವಿಶ್ವವಾ–
ನಿರದಿರದು ತನಗನ್ಯವೆನೆ, ತಾನೆ ತಾನಾದ
ಪರತರಾಹಂಕಾರವದೆ ಮಹಾಲಿಂಗಸಾಕ್ಷಾತ್ಕಾರ ಮುಕ್ತಿಸಾರ ||೯೨||

ಗುರುಲಿಂಗಜಂಗಮರಲ್ಲಿ, ತನ್ನಲ್ಲಿ, ಚರಾಚರ ವಿಶ್ವದಲ್ಲಿ ಅಭೇದ ವಾಸ್ತವಿಕ

ವಾಗಿರುವದೇ ಸಹಭಾಜನದ ನೆಲೆ. ತನಗನ್ಯವಿಲ್ಲೆಂದು ತಾನೆ ತಾನಿಹೆನೆಂಬ ಪರತರ ಅಹಂತಾಭಾವವೇ ಮಹಾಲಿಂಗ ಸಾಕ್ಷಾತ್ಕಾರವು.

### ಐಕ್ಯನ-ಮಹಾ-ಲಿಂಗಸ್ಥಲಂಗಳ್: ೯

**ಸ್ವೀಕೃತ ಪ್ರಸಾದ ಸ್ಥಲಂ:—**

ತನುವಿಂದ್ರಿಯಂಗಳಾತ್ಮಂ ಮತ್ತವಕೆ ಕ್ರಮದ
ಲನುಬಂಧಮಾದನ್ನ ವಿಷಯಭಾವಂಗಳ
ರ್ಪಣಮುಂ ಪ್ರಸಾದಮುಂ ತಾವಾಗೆ ತೃಪ್ತಿಪ್ರಸಾದಿ ತಾನಾದೈಕ್ಯನು ||
ಘನಮಾಗಿರುವ ಸ್ವೀಕೃತಪ್ರಸಾದಸ್ಥಲ-
ಸ್ಥನವಂಗೆ ತತ್ಕ್ರಿಯೆಯು ಭಾವಮಿನ್ನಿಲ್ಲ; ಕಿ-
ಚ್ಚಿನೊಳಗಪಿತಿರ್ಪ ಕಟ್ಟಿಗೆ ಕಿಚ್ಚ ಕೊಳಬೇಕೆ ತಾನೆ ಕಿಚ್ಚಾಗಿರಲ್ಕೆ? ||೯೩||

ತನು–ಇಂದ್ರಿಯ–ಆತ್ಮಗಳೂ ಅವುಗಳಿಗೆ ಕ್ರಮದಿಂದ ಸಂಬಂಧಿಸಿದ ಅನ್ನ ವಿಷಯ ಭಾವಗಳೂ ಅರ್ಪಣವಾಗಿ–ಪ್ರಸಾದರೂಪವಾಗಲು ತಾನು ತೃಪ್ತಿ ಪ್ರಸಾದಿಯಾಗುವನು. ಇಂತಹ ಐಕ್ಯನು ಸ್ವೀಕೃತ ಪ್ರಸಾದಿಯೆನಿಸುವನು. ಇವನಿಗೆ ಆ ಆ ಕ್ರಿಯಾಭಾವವಿಲ್ಲ.

**ಶಿಷ್ಟೌದನ ಸ್ಥಲಂ:—**

ಜಗದ ಜೀವರುಗಳಿಗೆ, ತನುಕರಣಗಳ, ಧರೆಯು
ಸೊಗದೊಡವೆಗಳ ಭೋಗದೋದನಂ ತಾನಹಳ್
ಜಗದಗಲಮಾಯೆ; ಆ ಮಾಯೆ ಚಿಲ್ಲಿಂಗದೊಳಗಡಗಿ ಚಿದ್ರೂಪದಿಂದ ||
ಮಿಗಿಲಹ ಮಹಾಲಿಂಗದಲಿ ನಿಲ್ಲಲಾ ಭೋಗ
ಬಗೆಯೆ ಶಿಷ್ಟೌದನಂ; ಚಿಲ್ಲಿಂಗ ತನ್ಮಯತೆ-
ಯೊಗೆವೈಕ್ಯಗೊದಗಿದ ಪ್ರಸಾದ ಶಬ್ದಾದಿಗಳ್
ವಿಷಯಂಗಳೇಕೆನಿಪವು ? ||೯೪||

ಮಾಯೆಯು ತನುಕರಣಗಳ ರೂಪದಿಂದ ಬಗೆಬಗೆಯ ವಸ್ತುಗಳ ರೂಪದಿಂದ ಜೀವರ ಭೋಗದ ಸಾಧನವಾಗಿರುವಳು. ಆ ಮಾಯೆ ಚಿದ್ರೂಪದಿಂದ ಲಿಂಗಸ್ವರೂಪದಲ್ಲಿ ಅಡಗಿದಾಗ ಆ ಲಿಂಗಭೋಗವು ಶಿಷ್ಟ + ಓದನವಾಗುವದು. ಲಿಂಗಮಯನಿಗೆ ಶಬ್ದಾದಿಗಳು ವಿಷಯವೆನಿಸದೆ ಶಿಷ್ಟ+ಓದನವೆನಿಸುವವು.

**ಚರಾಚರ ಲಯ ಸ್ಥಲಂ:—**

ನೆರೆಯೊಂದೆಯೊಂದೆ ತನತರಿವು ಮಾಯೆಯ ಲಯಿಸೆ
ಸ್ಥಿರ ಚರಾತ್ಮಕ ವಿಶ್ವಮಿದು ತೋರ್ವುದಿನ್ನೆಲ್ಲಿ?
ಮೆರೆದು ನಭದೊಳ್ ಮೋಡ, ನಭದೊಳೇ ಕರಗುವದು;
ಶಿವಯೋಗಿ ಚೇತನದೊಳು ||
ಹೊರಗೈದ ಶಬ್ದಾದಿ ವಿಷಯವಲ್ಲಿಯೆ ಲಯಿಕು; ಜಾ-
ಗರ-ಸ್ವಪ್ನ-ಷುಪ್ತಿಗಳ ಮೂರವಸ್ಥೆಯ ಮೀರಿ
ತುರಿಯದೊಳಗಾದವ, ಪ್ರಮೋದಮಲ್ಲದೆ ಪೆರತರಿಯ;
ಚರಾಚರ ಲಯಮಿದು ||೯೫||

ಸ್ವಜ್ಞಾನವು ಮಾಯೆಯ ನಾಶ ಮಾಡಿದ ಬಳಿಕ ಚರಾಚರ ವಿಶ್ವವು ಬೇರೆ ಇರಲಾರದು. ಗಗನದಲ್ಲಿ ಕಾಣುವ ಮೋಡಗಳು ಗಗನದಲ್ಲಿಯೇ ಕಾಣದಾಗುವಂತೆ, ಶಿವಯೋಗಿ ಚೇತನದೊಳು ಸನ್ನಿಹಿತವಾದ ಚರಾಚರ ವಿಶ್ವವೂ ವಿಷಯಗಳೂ ಅಲ್ಲಿಯೇ ಲಯಿಸುವವು. ಅಲ್ಲಿ ಆಗ ಪರಮಾನಂದವಲ್ಲದೆ ಬೇರೆ ಇರದು.

**ಭಾಂಡ ಸ್ಥಲಂ:—**

ಎಣಿಸಬಾರದಜಾಂಡಗಳ ಸುಳಿವಿಗುಳಿವಳಿವಿ-
ಗಣಿತಕಾಧಾರಮಾಗಿಹ ವಿಮರ್ಶಾಶಕ್ತಿ-
ಯನುಪಮ ಪರಬ್ರಹ್ಮ ತತ್ವ ತುಂಬಿದ ಭಾಂಡಮಾ ವಿಮಲ
ವಿಶ್ವಚರಿತೆ ||
ವಿನುತನೈಕ್ಯನ ಸ್ವಾನುಭವವಿಮರ್ಶಾ ಭಾಂಡ-
ದನುವಿನೊಳ್ ತುಂಬಿರ್ಕುಮೀ ವಿಮರ್ಶೆಯೆ ಶಂಭು
ವಿನ ಸಚ್ಚಿದಾನಂದ ರೂಪಮಂ ಬೆಳಗುವದು ದಲ್
ಪರಾಶಕ್ತಿಯೆನಿಸಿ ||೯೬||

ಪರಬ್ರಹ್ಮನಲ್ಲಿದ್ದು ಅವನನ್ನು ಬೆಳಗುವ ಹಾಗೂ ಸೃಷ್ಟಿ ಸ್ಥಿತಿಲಯಗಳ ಕಾರಣವಾಗಿರುವ ವಿಮರ್ಶಾ ಶಕ್ತಿಯು ಪರತತ್ವಗಳನ್ನೆಲ್ಲ ತುಂಬಿಕೊಂಡ ಭಾಂಡ ವಾಗಿರುವಳು. ಅವಳು ಐಕ್ಯನ ಸ್ವಾನುಭವ ವಿಮರ್ಶೆಯಲ್ಲಿ ತುಂಬಿರುವಳು. ಅವಳು ಅವನ ಸಚ್ಚಿದಾನಂದ ಸ್ವರೂಪವನ್ನು ಬೆಳಗುವಳು.

**ಭಾಜನ ಸ್ಥಲಂ:—**

ಇಂದುವಿಂ ಪಸರಿಸಿದ ಜೊನ್ನ ಬೇರಕ್ಕುಮೇ–
ನಿಂದುವಿಂ? ಜಗವ ಹರಹಿದ ವಿಮರ್ಶೆಯು ಪರಮ
ನಿಂದನ್ಯಮೇನದೊಂದಹುದಕಾಧಾರಮಾದುದೆ
ತಿರೋಧಾನಮದುವೇ ||
ಸಂದು ಸಲೆ ಬ್ರಹ್ಮದಾಶ್ರಯಕಲ್ಲಿ ಭಾಜನವ
ದೆಂದೆನಿಕುಮಿಂತು ಭಾಜನನಾಗಿ ಚಿತ್ಕಲೆಯೆ–
ನೊಂದು ಗೂಡಿದ ಪರಮ ಶಿವಯೋಗಿ ವಿಶ್ವಾತ್ಮನಾಗಿ ಪ್ರತಿ
ಭಾಸಿಸುವನು ||೯೭||

ಚಂದ್ರಿಕೆಯು ಚಂದ್ರನಿಂದ ಬೇರಾಗಿಲ್ಲವಾದಂತೆ ಜಗವ ಪಸರಿಸಿದ ವಿಮರ್ಶೆಯು ಶಿವನಿಂದ ಬೇರಾಗಿಲ್ಲ. ಹೀಗೆ ವಿಮರ್ಶೆಯು ಬೆರೆದಿರುವದಕ್ಕೆ ಆಧಾರವಾದುದು ತಿರೋಧಾನವು; ಅದೇ ಶಿವಭಾಜನವು. ಭಾಜನನಾಗಿ ಚಿತ್ಕಲೆಯ ಬೆರೆದ ಶಿವಯೋಗಿ ವಿಶ್ವಾತ್ಮನಾಗಿ ಬೆಳಗುವನು.

**ಅಂಗಾಲೇಪ ಸ್ಥಲಂ:—**

ಲಿಂಗಭಾಜನದ ನೆಲೆ ನಿಂದೈಕ್ಯನಿಗೆ ಭೌತಿ–
ಕಾಂಗಮಿಲ್ಲವ ಸಹಜ ವಿಹರಿಪಂ ಬಗೆಯೆ ಜ್ಞಾ–
ನಾಂಗದೊಳ್; ಜ್ಞಾನತನುಯುಕ್ತಗೀ ಕಾಯಕರ್ಮದ ಲೇಪಮಿಲ್ಲವಾಗಿ ||
ಮಂಗಲಾತ್ಮೈಕ್ಯಗಂಗಾಲೇಪನದ ನೆಲೆಯಿ–
ದೆಂಗುಮರಿದರ ಗಡಣ; ಹೊಗೆ ಹುಡಿಗಳಂಟದ ನ–
ಭಾಂಗಣದವೊಲ್ ಚಿತ್ಸ್ವರೂಪಂ ವಲಂ ವಿಧಿ-ನಿಷೇಧ–
ದೂರಾಗಿರ್ಪನು ||೯೮||

ಲಿಂಗಭಾಜನನಾದ ಐಕ್ಯನ ತನು ಭೌತಿಕವಾದುದಲ್ಲ; ಅದು ಜ್ಞಾನತನು. ಅದಕ್ಕೆ ಕರ್ಮಗಳ ಲೇಪವಿಲ್ಲ. ಹೊಗೆ–ಹುಡಿಗಳಂಟದ ಗಗನಾಂಗಣದಂತೆ ಚಿತ್ ಪ್ರಕಾಶದ ಐಕ್ಯನು ವಿಧಿನಿಷೇಧಗಳಿಂದ ದೂರಾಗಿರುವನು. ಇದು ಅಂಗ ಅಲೇಪದ ನಿಲವು.

**ಸ್ವಪರಾಜ್ಞ ಸ್ಥಲಂ:—**

ಜ್ಞಾನಪೂರ್ಣಂ, ಭೇದವಿರಹಿತಂ, ನಿರ್ಭಯಂ
ತಾನಪ್ಪ ಬ್ರಹ್ಮನೊಳ್ ಶಿವಯೋಗಿ ನಿತ್ಯ ತ-
ಲ್ಲೀನನಾಗಿರಲವಗೆ ತನತು ಪೆರತುಗಳಿಲ್ಲ; ಕೂಡುವಗಲುವದಿಲ್ಲವು ||
ನೀನಾನದೆಂಬುದಿಲ್ಲಳಲು ನಲಿವುಗಳಿಲ್ಲ;
ಭಾನ-ವಿಸ್ಮೃತಿಯಿಲ್ಲ; ಬಂಧಮುಕ್ತಿಗಳಿಲ್ಲ-
ದೇನಿಲ್ಲ; ದೇಶಕಾಲಾದಿಯೊಳ್ ಪರಿಛಿನ್ನನಲ್ಲದಿಹ ಶಿವಯೋಗಿ
ಸ್ವಪರಾಜ್ಞನು ||೯೯||

ಭೇದರಹಿತ-ಜ್ಞಾನಪೂರ್ಣ ಬ್ರಹ್ಮದಲ್ಲಿ ನಿತ್ಯತಲ್ಲೀನನಾದ ಶಿವಯೋಗಿಗೆ ತನ್ನದು-ಪರರದು, ಹೊಂದು-ಅಗಲು, ಅಳಲು-ನಲಿವು, ಬಂಧ-ಮುಕ್ತಿ, ನೆನಹು-ಮರವು, ನಾನು-ನೀನು-ಅದು ಎಂಬ ವೈವಿಧ್ಯ-ಭೇದ-ಪರಿಚ್ಛಿನ್ನತೆಗಳು ಇಲ್ಲದಿರುವದು ಸ್ವಪರಾಜ್ಞತೆಯು.

**ಭಾವಾಭಾವಲಯ ಸ್ಥಲಂ:—**

ಜೀವಮುಕ್ತಗೆ ಚಿದಂಬರದೊಳಿಂಬಾದವಗೆ,
ಭಾವಮುಮಭಾವಮುಂ ತೋರ್ಕೆವಡೆದಿರದಹಂ-
ಭಾವ-ನಿರಹಂಭಾವಗಳನಳಿದ ಶಿವಯೋಗಿ ಸುಖದುಃಖ ಭೋಗಂಗಳ||
ಭಾವಮುಂಟಿಲ್ಲೆಂಬುವೆರಡುಮಿಲ್ಲದ ನಾಸ್ತ್ಯ-
ಭಾವಿ, ತನುವಸುವಾತ್ಮವಾನು ನೀನದಿದೆಂಬ-
ದಾವಾವುದಿಲ್ಲದಿರುವೈಕ್ಯಗಿದು ನಾಡೆ ಭಾವಾಭಾವ ಲಯದ
ನೆಲೆಯು ||೧೦೦||

ಚಿದಂಬರದಲ್ಲಿ ವಿಹರಿಸುವ ಜೀವನ್ಮುಕ್ತನಿಗೆ ಭಾವವೂ ಇಲ್ಲ, ಅಭಾವವೂ ಇಲ್ಲ. (ಅಭಾವವೂ ಒಂದು ಭಾವವೇ!) ಭೋಗದ ಭಾವ ಉಂಟೆಂಬುದಿಲ್ಲ, ಇಲ್ಲೆಂಬುದಿಲ್ಲ. ಅವನು ಎರಡೂ ನಾಶವಾದ ಅಭಾವಿ! ತನ್ನಲ್ಲಿ ಸರ್ವವೂ ಇಲ್ಲವಾಗಿ ತಾನೆತಾನೆ ಆಗಿ, ಭಾವಾಭಾವಲಯ ಎನಿಸುವದು.

**ಜ್ಞಾನಶೂನ್ಯ ಸ್ಥಲಂ:—**

ಹರಿದು ಭಾವಾಭಾವಮಿಲ್ಲದಾದಾಗವ–
ನ್ನರಿವ ಜ್ಞಾನವದಿರುವುದೇಂ? ತಾನೆ ಬಯಲಿಹುದು;
ಪರತರ ಬ್ರಹ್ಮನೊಳ್ ಜ್ಞಾತ್ರಾದಿ ಸಂಭವವೆ? ಹಾಗೆ ತನಗನ್ಯಮಿರದ||
ಪರಮನೊಳ್ ತನ್ಮಯಂ ಪರಯೋಗಿಯದನರಿಯ–
ಲೊರೆಯಲಕ್ಕುಮೆ? ಅವಂ ಜ್ಞಾನಶೂನ್ಯಂ; ಶೂನ್ಯ–
ದುರುತರದ ಬೆಳಗೆ ತಾನಾದವಂ; ಪರಮೈಕ್ಯ ನಿನ್ನೇ ನದೇವೇಳ್ವೆನು||೧೦೧||

ಭಾವಾಭಾವದ ಭಾವವೂ ಇಲ್ಲವಾಗಲು ಭಾವಾಭಾವವನ್ನು ಅರಿಯುವ ಜ್ಞಾನವೆಂತು ಉಳಿಯುವದು? ಅದೂ ಬಯಲಾಗುವದು. ಪರಬ್ರಹ್ಮನಲ್ಲಿ ಜ್ಞಾತೃ, ಜ್ಞೇಯ, ಜ್ಞಾನಗಳು ಸಂಭವಿಸವು. ಪರಮನಲ್ಲಿ ಬೆರೆದ ಶಿವಯೋಗಿ ಅದನ್ನು ತಿಳಿಯಲೂ ಹೇಳಲೂಬಾರದು. ಇದು 'ಜ್ಞಾನಶೂನ್ಯ'ವೆಂಬ ಬಯಲ ಬರೆದು ಬಯಲಾದ ಸ್ಥಿತಿಯು.

ಓಂ ಶಾಂತಿಃ ಶಾಂತಿಃ ಶಾಂತಿಃ

೧. ಭಕ್ತ, ಮಹೇಶ, ಪ್ರಸಾದಿ ಈ ಮೂರು ಸ್ಥಲಗಳಿಂದ ಕೂಡಿದುದು ಆತ್ಮೋದ್ಧಾರದ ಮಾರ್ಗದಲ್ಲಿ ಗುರುಕರುಣಾಜನ್ಯವಾದ ಕ್ರಿಯಾ ಪ್ರಧಾನ ವಿಭಾಗವು!

೨. ಪ್ರಾಣಲಿಂಗಿ, ಶರಣ, ಐಕ್ಯ ಈ ಮೂರು ಸ್ಥಲಗಳಿಂದ ಕೂಡಿದುದು ಆತ್ಮೋದ್ಧಾರದ ಮಾರ್ಗದಲ್ಲಿ, ಗುರುಕೃಪೆಯ ಪರಿಣಾಮವಾದ ಸ್ವಾನುಭವಜನ್ಯ ವಾದ ಜ್ಞಾನಪ್ರಧಾನ ವಿಭಾಗವು!!

||ಓಂ||

# ಮಂಗಲಾರ್ಪಣಂ

ನಿರುಪಮಾನಂದನಿಧಿ, ಪರಮಕರುಣಾಂಬೋಧಿ,
ನೆರೆ ಜಿತೇಂದ್ರಿಯ ನಿಚಯು, ನೂರೊಂದು ನೆಲೆಯ ಮಂ–
ದಿರದೊಡೆಯ, ಭವದ ಭಯನಿರ್ಮುಕ್ತ, ಸಚ್ಚರಿತ, ಷಟ್‌ಸ್ಥಲ
ಬ್ರಹ್ಮರೂಪ ||

ಹರಳೇಶ್ವರಾಶ್ರಮನಿವಾಸ, ಪರಹಿತ ತೋಷ,
ಗುರು, ಶಾಂತವೀರೇಶರಿವರ ಪಾದಾಂಬುಜಕೆ
ಹರುಷ ತುಂಬಿದ ಮನದಿ ವೈಯಿಕ್ಕಿ ಅರ್ಪಿಸುವೆ ಕವಿತಾಸುಮಾಂಜ–
ಲಿಯನು ||

ಪ್ರಭು ಗುರುವಿನಿಂ ಪಡೆವ ನುಡಿಗಡಣ, ಗುರುಕೃಪೆಯು
ಪ್ರಭೆಗೂಡಿ ಬೆಳಗಿ ಗುರುಪದಕೆ ಸಂದ ಕತದಿಂ,
ಶುಭಕೃತ ಸವತ್ಸರದ ಮಾಘ ಬಹುಳದ ದಶಮಿ ಸೋಮವಾರದ ಸಂಜೆಯು||
ಶುಭಸಮಯುವಾಯ್ತು; ಬಯಸಿರ್ದ ಮನ, ಬರೆದ ಕೈ,
ಸೊಬಗಿನಲಿ ಪಡಿನುಡಿದ ಬಾಯ್ಗ್ಳೊಡಗೂಡಿಯೆನ–
ಗಭವ ಪೂಜೆಯುಗೈದನಾನಂದಮಾಯ್ತಿನ್ನುತವೆ ಧನ್ಯನಾನಾದೆನು ||

ಕೃತಿಯನಿಂತರ್ಪಿಸಿದ ಲಕ್ಕಣಂ ಸಂತೋಷಿ–
ಸುತ ನೆನೆದನರುವತಬ್ಧದ ಮುನ್ನ ಮುವ್ವಪನ
ಸತಿ, ವಿನುತೆ, ಮನ್ಮಾತೆ ಬಸವಾಂಬೆ ತಳೆದ ಗರ್ಭಂ ಸಫಲ–
ಮಾಯ್ತೆನ್ನುತ ||

ಭದ್ರಂ, ಶುಭಂ, ಮಂಗಲಂ.

# ಲಘು ಕೋಶ

ಅಧಿಷ್ಠಾನ–ಆಶ್ರಯ, ಆಧಾರ
ಅನಾಹತ–ಆಘಾತವಿಲ್ಲದೆ ನಾದ ಉಂಟಾಗುವ ಸ್ಥಳ. (ಮೂಲಾಧಾರಾಧಿಯಾದ ನಾಲ್ಕನೆಯ ಚಕ್ರ)
ಅನುಶಾಸಕ-ಆಳುವವ, ನಿಯಂತ್ರಕ,
ಅವಿತು-ಅಡಗಿಕೊಂಡು
ಅಸ್ತೇಯ-ಕಳದಿರುವಿಕೆ, (ಸ್ತೇಯ-ಕಳವು)
ಆದಾನ-ಗ್ರಹಣ
ಆಯತ-ಸ್ವಾಧೀನ, ವಿಶಾಲ
ಉಪಾಧಿಪ–ರಮಾತ್ಮನ (ಮೂಲವ)ನ್ನು ಬೇರೆಯಾಗಿ ತೋರಿಸುವ ವಸ್ತು
ಉಪಾಸನೆ-ದೇವಸಾನ್ನಿಧ್ಯದಲ್ಲಿ ತಾದಾತ್ಮ್ಯಶಿ
ಓಜೆ-ಏಕಾಂಗ, ಪ್ರಕಾಶ
ಓದನ-ಅನ್ನ, ಆಹಾರ, ಭೋಗ್ಯ
ಕರಿಗೊಳು-ಬೆಸುಗೆಯಾಗು
ಕುಂಭಕ-ಪ್ರಾಣವಾಯುವನ್ನು ಮಸ್ತಕಾಗ್ರದಲ್ಲಿ ನಿಲ್ಲಿಸುವಿಕೆ
ಚಿತ್-ಜ್ಞಾನ
ಜ್ಞಾತೃ-ತಿಳಿದುಕೊಳ್ಳುವವ
ಜ್ಞೇಯ-ತಿಳುವಳಿಕೆಗೆ ಯೋಗ್ಯವಾದದ್ದು
ತವಿಸು-ಕಳಚು

ತಿರೆ(ಧ್ವ), ಸ್ಥಿರಾ(ತ್ಸ)-ಭೂಮಿ
ತಿರೋಧಾನ-ಉಪಸಂಹೃತಿ
ತ್ರೈಪುಂಡ್ರ-ವಿಭೂತಿಯ ಮೂರು ಗೆರೆ
ನಿರಂಜನ-ರಂಜನ (ರಚನಾತ್ಮಕ ನಡೆನುಡಿ) ಇಲ್ಲದವ, ರಂಜನಾತ್ಮಕವಾದ ಜಗತ್ತಿನ ಸಂಪರ್ಕವಿಲ್ಲದವ,
ನಿರ್ದೇಶ-ಉನ್ನತ ಸ್ಥಿತಿಯನ್ನು ತೋರಿಸುವಿಕೆ
ನಿಷ್ಪತ್ತಿ-ಅಲಿಪ್ತತೆ, ಹೊಂದದಿರುವಿಕೆ
ವರ-ಶ್ರೇಷ್ಠ, ಶಕ್ತಿಯುಕ್ತ ಶಿವ
ಪರತರ-ಅತಿಶ್ರೇಷ್ಠ
ಪರತ್ವ-ಶ್ರೇಷ್ಠತ್ವ
ಪರಮ-ಶ್ರೇಷ್ಠತಮ
ಪರಾತ್ಪರತೆ-ಶ್ರೇಷ್ಠಕ್ಕೆ ಶ್ರೇಷ್ಠ, ವೀರಶೈವರ ಕಡೆಯ ತತ್ವ, ಬಾವಾಭಾವಕ್ಕೆ ಆಧಾರ, ಶೂನ್ಯಕ್ಕೆಆಧಾರ.
ಪರಿಣತ-ಪರಿಪಕ್ವ
ಪ್ರಕೃತಿ (ಸಾಂಖ್ಯ), ಮಾಯೆ (ವೇದಾಂತಿ), ಶಕ್ತಿ ದ್ವೈತಾ (ದ್ವೈತ,ದ್ವೈತ)
ಪ್ರಣವ-ಓಂಕಾರ
ಪ್ರಬಂಧನ-ಬಂಧನ, ಆಚ್ಛಾದನ

ಪ್ರಾಕೃತರು-ಪ್ರಕೃತಿ (ಮಾಯಾ) ಜನ್ಯರು
ಪ್ರಾಕೃತಾಂಗ-ಮಾಯಾಸೃಷ್ಟಿ
ಭಾನ-ಹೊಳೆವು, ನೆನಹು
ಭಾವ-ಮನಸ್ಸಿನ ವಿಶೇಷ ಸ್ಥಿತಿ
ಮುಸಗು-ಉಲ್ಬಣಿಸು
ಯಜಿಸು-ಪೂಜಿಸು
ವಲ್ಮೀಕ-ಹುತ್ತು

ವೇಧಾದೀಕ್ಷೆ-ಭಾವಗೊಳಿಸುವ ಸಂಸ್ಕಾರ
ಶಕ್ತಿಪಾತ-ಶಿವಕರುಣೆಯ ಉತ್ಕಟೇಚ್ಛೆ
ಶುಶ್ರೂಷೆ-ಸೇವೆ, ಗುರುಸೇವೆ
ಸಾರಾಯ-ಮೋಕ್ಷ
ಸ್ವಯ-ಕೇವಲ, ತಾನೇ ತಾನು
ಹದುಳ-ಸಂತೋಷ.

# ನೀತಿ ಮುಕ್ತಾವಲಿ

## ಪೀಠಿಕೆ

॥ಕಂದಂ॥

ಒಸೆದು ವಿನೋದಕೆ ವಿಶ್ವವ
ಪಸರಿಸಿಯುಸಮಾನಲೀಲೆಗಳನಾಗಿಸುತಂ
ನಸುನಗೆಯಿಂ ನಗುವೀಶನ
ದಶನಾಂಶುವು ಬೆಳಗನೀಗೆ ಮನ್ಮತಿಗನಿಶಂ ||೧||

ತೊಡಿಸುತ ಮಾಗಬ್ಬಂಗಳ
ತೊಡಂಗಳಂ, ನಲಿದು ಕನ್ನಡದ ನುಡಿವೆಣ್ಣಂ
ನಡೆಕೈಗೈಸಿದ ವಿಶ್ರುತ
ಷಡಕ್ಷರಾದ್ಯಖಿಲ ಕವಿಗಳೆನಗಭಿವಂದ್ಯರ್ ||೨||

ಮುನ್ನಂ ಶಿಶುವಾಲ್ಮೀಕಿ ಜ–
ಗನ್ನುತಕವಿಯೊರೆದ: ತೊರವೆರಾಮಾಯಣಮಂ
ಎನ್ನೂರೊಳೆಸೆದನಾ ಕವಿ–
ಯನ್ನೆನೆವೆಂ ನೆಲದ ಪೈಮೆಯಿಂ ನಲವಡೆದಾಂ ||೩||

## ನಾಡನಲ್ಮೆ

ಎನ್ನಯ ಬೀಡಿದು ಚೆಲ್ವಿನ
ಕನ್ನಡ ನೆಲೆವೀಡು, ಮಹಿತ ವಿದ್ಯಾರಣ್ಯರ್
ಮನ್ನಣೆಗೊಳಿಸಿದ ಮುದ್ದಿನ
ಪೊನ್ನೆಸಕದ ನಾಡು, ಜಸದ ನಾಡಿದು ನಿಸದಂ ||೪||

ಮತ್ತಿನ ನಾಡಿಗರುನ್ನತಿ–
ವೆತ್ತಿರದಂದಗ್ಗಳಳವಿನಿನಿಗಬ್ಬಿಗರಿಂ
ಬಿತ್ತಿಗರಿಂ ರಾಜ್ಯಗಳಿಂ
ಬಿತ್ತರದೇಳ್ಗೆಯಲಿ ಮೆರೆದುದೀ ಕರುನಾಡು ||೫||

ಸಿರಿವೊಂದಿದ, ಭಟರುದಿಸಿದ,
ಪಿರಿಗಬ್ಬಿಗರಿಂ ಪೊಗಳ್ಕೆದಾಳಿದ, ಜಸದಾ–
ಳ್ದರಿದರ್ ತಿಳಿವಂ ಬೆಳಗಿದ,
ಕರಿನಾಡಿನ ಪೆರ್ಮೆಗೊಲಿಯದವನುಂ ನರನೇಂ? ||೬||

ಗೆಲಿದೀ ಭಾರತಮಂ ಗೆ–
ಲ್ಬಳಿಯಿಗೆಯಂ ಮೆರಿಸಿ ಕನ್ನಡದ ಸಮ್ರಾಜರ್
ಸಲಹಿದ ದಳದಾಳ್ಗಳ್ ದು–
ರ್ಬಲರೋ ಬಲಯುತರೊ? ಪೇಳ್ಗೆ ಕನ್ನಡದರಿಗಳ್ ||೭||

ತನತಲ್ಲದ ಪೆರನುಡಿಯಂ
ಜನುಮದ ನುಡಿಯುಳಿದು ನುಡಿವರೇತಕೊ ಗಾಂಪರ್?
ಇನಿಗನ್ನಡ ತಾಯ್ನುಡಿಯೊಳ್
ತನಗಿಹ ಸಂಬಳವನುಸಿರಲದು ಕಿರಿದಹುದೇ? ||೮||

ಎಳೆತನದೊಳೊಡಲಿಗಶನಂ–
ಗಳ ತಿಳುಪಿದ ತಾಯನುಡಿಯನೊಗಡಿಸಿ ನುಡಿವಂ
ಪೊಳೆವಂಗದ ಪಣ್ಯಾಂಗನೆ–
ಗೊಲಿದಮ್ಮನ ಜರೆವ ನೀಚನಿಂದಂ ಕೀಳಂ ||೯||

ನುಡಿಯೇಳ್ಗೆಯೆ ನಾಡೇಳ್ಗೆಯು
ನಡೆಗಲ್ತೇನುದಿತ ಬೀದಿ? ಕುಂದಿಸಿ ನುಡಿಯಂ
ಪಡೆವಂ ನಾಡೇಳ್ಗೆಯನೆನೆ
ಕಡಲೊಳ್ ಕಲ್ಗೊಂಡು ಬೀಳ್ದ ತೆರನಕ್ಕುಂ ಕೇಳ್ ||೧೦||

ಬರೆವೊಡೆ ನಲ್ಗಬ್ಬಂಗಳ–
ನರಿದಾಸರಗುಡುವರಾರೊ? ಸಿರಿಯುತರಕಟಾ!
ಕರಿಯಂ ಬಳವೆಯು ತಿಂಬೊಡೆ
ಪೊರೆವರ್; ಪಿಡಿಯನ್ನವಿಕ್ಕಿ ಪೊರೆಯಲ್ ಬುಧನಂ ||೧೧||

ಕನ್ನಡ ನುಡಿಯೊಳವೆಡಗಂ
ಮನ್ನಿಸಿಯರಿದೊರೆದ ಕಬ್ಬಗಂಗಾಶ್ರಯಮಂ
ಮುನ್ನಿತ್ತುದಾರ ಧನಿಕಂ
ಸನ್ನುತನಹನಲ್ತೆ ಸಾಸಿರದ ಸಿರಿಯುತರೊಳ್? ||೧೨||

ಕ್ಷಿತಿಯೊಸರ್ವ ನೀರನೀಂಟಿಯೆ
ಕ್ಷಿತಿಯೊಳ್ ಬೆಳೆದೋಗರಮನೆ ಸೇವಿಸಿ ಬಳೆದುಂ
ಹಿತವೆತ್ತಿರೆಯುಂ ಮಾತೃ–
ಕ್ಷಿತಿಯಂ ಸೇವಿಸದ ನರನ ಬಾಳದು ಬಾಳೇ? ||೧೩||

ಬಿಸಿಗುಂದದಾರದೆದೆರೊಳ್
ಪೊಸನೆತ್ತರಮಾ ಸುವೀರ ತರುಣರೆ ಧುರದೊಳ್
ವಸುಧಾಮಾತೃದ್ಧಾರಮ–
ನೆಸಗಿದಪರ್ ಬಾಳಿಗಳಲ್ದ ಮುದುಪರಿಗಳವೇಂ ||೧೪||

ಸ್ವಾರ್ಥಮನುಳಿದಿಹ ದೇಶಹಿ–
ತಾರ್ಥಿಯೆ ಸಲ್ಗುಂ ಸ್ವದೇಶಸೇವೆಗೆ ನಿರುತಂ;
ಸ್ವಾರ್ಥವಿಶಾರದನಳವಂ
ಸ್ವಾರ್ಥನಿಶಾಚರನೆ ಸೆಳೆವನವನೆಸಪ್ರದದೇಂ? ||೧೫||

ಎಡರ್ಗಳ್ ಮಾರ್ಕೊಂಡೊಡೆ ಪಿಂ–
ದಡಿಯಿಡುವನೆ ದೇಶಹಿತಕೆ ಬಗೆಗೊಟ್ಟವನುಂ?
ಎಡರ್ಗಳನೊಲ್ಲದೆ ಕೀರ್ತಿಯ
ಪಡೆಯಲ್ಕಹುದೇನದಾವ ಮಹಿತಂಗುಂ ಪೇಳ್ ||೧೬||

ನಾಡಿನ ಕಜ್ಜದಿ ಬರಿದುಂ
ನೀಡುಂ ನರರರಿಗಳಕ್ಕುಮೆಡರಕ್ಕುಂ; ಕೇಳ್
ನಾಡೆ ವಿಪತ್ತಂ ಸಹಿಸದೆ
ನಾಡೊಳ್ ಬೆಳ್ಳಸವನೆಂತು ಪಡೆಯಲ್ಕಹುದೋ? ||೧೭||

ಕೇಡೊಂದಿದ ನಾಡುನ್ನತಿ
ನಾಡಿಗರುರೆ ಬನ್ನಬಡದೆ ಸಾಧಿಸಲರಿದೈ;
ನಾಡಿನ ಬಿಸುಬೆಮರ್ವೊನಲೊಳ
ನಾಡಿನ ಸ್ವಾತಂತ್ರ್ಯಲಕ್ಷ್ಮಿ ತೇಲ್ದಪಳಲ್ತೇ? ||೧೮||

ದೇಶಾಭಿಮಾನಿ ಮಾರಣ–
ಕೋಸರಿಪನೆ ದೇಶಕಾರ್ಯದೊಳದಂ ಬರಿಕುಂ;
ದೇಶಹಿತಾರ್ಥದ ಕಲಿ ಪುಲಿ–
ಕೇಶಿ ನಿಮಿರ್ದರಿಗಳೊಡನೆ ಬೆರ್ಚದೆ ಪೋರ್ದಂ ||೧೯||

## ಘನವಂತರ್

ಪರಹಿತದಕ್ಷರ್ ಪಿರಿಯರ್
ಬಿರುನುಡಿಯಂ ನುಡಿದೊಡೇನೊ ಕಷ್ಟವ ಕಳೆವರ್;
ಅರಿಯಲ್ಕೌಷಧಿ ಕಹಿಯಾ–
ಗಿರುತಿರ್ದೊಡಮೇನೊ ರೋಗಮಂ ಬಾರಿಸುಗುಂ ||೨೦||

ಒಡೆಯರ್ ಪಲಂಬರಿರಲೇಂ?
ಬಡವರ ಭಾರವನೆ ಪೊತ್ತೊಡವನೆ ಮಹಾತ್ಮಂ;
ಪೆಡೆವಡೆದಹಿಗಳ್ ಪಲವಿರೆ,
ಪೊಡವಿಯ ನಿಜಶಿರದೊಳಾಂತವನೆ ಮಾಶೇಷಂ ||೨೧||

ತಿಳಿಯರ್ ತಮತೊಳ್ಕಡೆಯುಂ;
ನಲಿವರ್ ಪೆರತೊಳ್ಕಡಾವಳಿಗೆ ಸುಜನರ್ಕಳ್;
ಬೆಳಗದಿರಂಗೆದೆಗರಗುವ
ಕುಳಿರರೆಯರಿದಪ್ಪುದೆ ತನ್ನ ತಂಪಿನ ಸೊಬಗಂ? ||೨೨||

ಎಡರುಗಳೆನಿತಡಸಿದೊಡಂ
ಬಿಡರೆಂದುಂ ಸ್ವಮತಮಾರ್ಗಮಂ ಸತ್ಪುರುಷರ್;
ಕಡಿಕಡಿದು ಚಂದನವ ತೇ–
ದೊಡಮೇಂ ಪರಿಮಳವ ಬೀರ್ವುದಂ ಮಾಣ್ದಪುದೇ? ||೨೩||

ನಡೆಗೆಡುವಳಿಪಾನಿಸನೆರ್ದೆ-
ಗೆಡುವಂ ಬಂದೆಡರ್ಗಳಿಂದೆ ನೋಯಂ ಸಂತಂ;
ಗಿಡಗಳ ಮಾರುತಮುರುಳಿಸಿ-
ದೊಡಮೇಂ ನಿಡುಪೆಟ್ಟನಲಗುವುವೆಯೆನಿಸಾಸುಂ? ||೨೪||

ದುರುಳಂ ತಾಳದೆ ಜರೆದೊಡೆ
ಪಿರಿಯರ್ ಕಳೆಗುಂದರೆಂದುಮೆರ್ದೆಗೆಡರೆನಿತುಂ;
ಹರಿಯ ತಿರಸ್ಕರಿಸಲ್ ನರಿ,
ಕರಿಯಂ ಕೊಲ್ವುದನೆ ಮಾಣ್ಗುಮೇನಾ ಸಿಂಗಂ? ||೨೫||

ಎಡರಂ ನೀಚಂ ತನಗಿರ-
ದೊಡರ್ಚಿದೊಡಮವನ ಮನ್ನಿಪವನೆ ಮಹಾತ್ಮಂ;
ಸುಡುಗುಂ ತನ್ನನುಮಾದೊಡ-
ಮೊಡಲೊಳ್ ಮಡುಗಿಪುದು ವನಧಿ ವಡವಾಗ್ನಿಯುಮಂ ||೨೬||

ವಿಲಸದ್ಗುಣಗಣಯುತನಂ
ಪಳಿಯಲ್ ಪಾಪಾತ್ಮನವಗೆ ಕುಂದೇನಹುದೇ?
ಅಳುತಿರಲೇಂ ಫಲಮೆಂಜಲ-
ದೆಲೆಗರ್ಚುವ ನಾಯಿ ಪಟ್ಟದಾನೆಯಯೆದುರೊಳ್? ||೨೭||

ನೇರಿದರ್ವೈಸಿರಿಪೆಟ್ಟವ-
ನೇರಿದೊಡಂ ನಯದ ನಡೆಯನುಳಿಯರ್ ನಿರುತಂ;
ಏರುವ ವಾರಿಧಿ ತೀರವ
ಮೀರದೆ ಪರಿವುದು ನದೀಮುಖಂಗಳೊಳಲ್ತೇ? ||೨೮||

ಪೆರನಡೆಯೊಳ್ ಗ್ರಹಿಸಿದೊಡಂ
ಕರೆಯಂ, ಸುಜನರ್ ಪ್ರಕಾಶಗೊಳಿಪರ್ ಗುಣಮಂ;
ಶರಧಿಯ ಕ್ಷಾರಂ ಕೊಂಡುಂ
ಕರೆವುವು ಮಧುರತರವಾರಿಯಂ ಮೇಘಂಗಳ್ ||೨೯||

ಪೇರ್ವೈಸಿರಿಯೊದವಿದೊಡಂ
ನೇರಿದರೆಡೆಗೊಡರು ಮದಕೆ; ವಿನಯಮನುಳಿಯರ್;
ಪೀರುತಲಿನಿವಣ್ ರಸಮಂ
ತೋರದು ಕಂಠದಿ ಕಠೋರತೆಯ ಕೋಕಿಲವು ||೩೦||

ಪರಹಿತದೊಳ್ ಸವೆಗುಂ ಸ-
ತ್ಪುರುಷರ ಪ್ರತ್ಯಂಗಮದುವೆ ಸಾಜಮವರ್ಗೆ;
ನೆರಳಿಂ ಪೂವೆಲೆವಣ್ಗಳಿ-
ನಿರದುಪಕೃತಿಗೈಯ್ವ ಮಾವೆ ಮಾಮರಮಲ್ತೇ? ||೩೧||

ಇನಿತಂ ಬೇಡಲುದಾರಿಗ-
ಳೆನಿತೆನಿತೋ ಕುಡುವರೆಲ್ಲ ಬೇಳ್ಪರ್ ತಣಿವೊಲ್;
ತಣಿವೊಲ್ ಧರೆಯೇ ಕರೆಗುಂ
ಘನಂಗಳಾಸಿಸೆ ಚಕೋರೆ ಪನಿಯೊಂದೆರಡಂ ||೩೨||

ಮೃದುವಾದುದಲ್ತೆ ಸುಜನರ
ಹೃದಯಂ ನವನೀತದಿಂದ? ತನ್ನಯ ಪರಿತಾ-
ಪದಿ ದ್ರವಿಕುಂ ಬೆಣ್ಣೆ; ಪೆರಂ-
ಗೊದವಿದ ತಾಪಕ್ಕೆ ದ್ರವಿಕುಮೊಳ್ಳಿದರೆದೆಯ್ಯೆ ||೩೩||

ಕರೆಯುಂ ಪಳಂಚಿ, ಮನಮಂ
ನಿರುಮಲಮಂ ಗೈವ, ದುಷ್ಕೃತವ ಪರಿಹರಿಪ,
ಕರುಣಂಗೊಳಿಸುವ ಭೂತನಿ-
ಕರದೊಳ್, ಸತ್ಪುರುಷಸಂಗಮೇಂ ಕೇವಳಮೇ? ||೩೪||

ಸುಮನುಷ್ಯರ ಸಹವಾಸಂ
ಸಮೆಗುಂ ಸುಚರಿತನನಾವ ಸಾಮಾನ್ಯನನುಮಂ
ಸುಮಸಹವಾಸದಿರುಂಪೆಗ-
ಳಮರವಿನುತದೈವಶಿರವನೇರಿದುವಲ್ತೇ? ||೩೫||

ಸೇವಿಸೆ ಮಹಾನುಭಾವರ,
ಸೇವಕನುಂ ಮಾನ್ಯನಹನದಾಶ್ರಯದ ಬಲಂ;
ದೇವರ ಪೊರೆಗಿರ್ದರೆಯುಂ
ದೇವಾಲಯದೊಳ್ ಜಲಾಭಿಷೇಕಂಗೊಳ್ಗುಂ ||೩೬||

ಘನಮಹಿಮರ ಮಹಿಮೆಯುನಾ
ಗುಣಭೂಷಿತರರಿವರಲ್ಲದರಿವರೆ ಗಾಂಪರ್?
ಮಣಿಯುಂ ಪಳ್ಳಿಯ ಪೆಣ್ಣಿಗೆ
ವಣಿಜಂ ತೋರಲ್ಕೆ, ಕಾಸಿಗೀಯೆನದಿಹಳೇ? ||೩೭||

ಅತಿಬಲಯುತನಿರಲೇಂ ತಾಂ
ಕ್ಷಿತಿಯೊಳ್ ಪೂಜ್ಯರನತಿಕ್ರಮಿಸೆ ಜಸವಳಿಗುಂ;
ಗತಬಲಮಪ್ಪುದು ಚಳಿಯಿಂ
ಕ್ಷಿತಿಧರವಂ ದಾಂಟಲವ್ವಳಿಸಿ ಜಳಧರಮುಂ ||೩೮||

ತನಗೆದುರಾರೆಂದಾವಂ
ತೊನೆವಂ ನೇರಿದರ ನೆರವ ಜರಿದವನಳಿಗುಂ;
ವನಕರಿಯು ಮೀರ್ದ ಮದಮಂ
ಮಣಿಪ ಮೃಗಾದಿಪನುಮಾಶ್ರಯಿಸುವಂ ನಗಮುಂ ||೩೯||

ಪೊರೆಯೊಳಗಿರ್ದುಂ ಸಜ್ಜನ-
ನಿರದವನಿಂ ಮೂಢ ಪಡೆಯನಮಲಗುಣಗಳಂ,
ಪರಿಮಳಮಂ ಸವಿಯದೆ ತಾ-
ವರೆದೇಂಟಿನ ಬುಡದ ಕಪ್ಪೆ ಕೆಸರನೆ ತಿಂಗುಂ ||೪೦||

ಅರಸಿ ವಿವೇಕಿ ಮಹಾತ್ಮನ-
ನರಿದವಗೆರಗುತ ಮನೋವಿಕಾಸವ ಪಡೆವಂ;
ಅರಸುಗುಮರವಿಂದಮನೆ-
ಲ್ಲಿರಲುಂ ಕಂಡೆರಗಿ ಪರಮ ಮಧುವಂ ಪಡೆಗುಂ ||೪೧||

ಪರನರಿದಪುದಲ್ಲದೆ ಮುನಿ-
ಪರ ನೆರವಿಂದವರ ಮುಳಿಸನೇಳಿಸೆ ಕಿಡಿಕುಂ;
ದೊರೆಕೊಂಡನಲನಿನಡಿಗೆಯ
ನಿರುಮಿಪ್ಪುದೋ? ಮನೆಯ ಸುಟ್ಟು ಪಲ್ಗಿರಿದಪುದೋ? ||೪೨||

## ದುರುಳರ್

ಮುಳಿದಗಿವುದು ಫಣಿ ತನ್ನಂ
ತುಳಿದೊಡೆ; ಖಳನುಸಿಕನಿರ್ದೊಡಂ ಮುಳಿದಗಿವಂ;
ತಿಳಿದಿದನಂಜುವದಿಳೆಯೋ;
ಖಳನಂ ಕಂಡೊಡನೆ ದೂರ ಸಾರ್ವುದೆ ತಗುಗುಂ ||೪೩||

ಕಿರಿದೈಸಿರಿಯೊದವಿದೊಡಂ
ದುರುಳಂ ಗರುವಿಪನು; ಚಣದಿ ಚ್ಯುತಿಯುಂ ಪಡೆವಂ;
ದೊರೆಯೆ ಕೆಸರನೀರುಂ "ಕೊಡ
ಕೊರ" ವೆನ್ನುತೆ ಕಪ್ಪೆ ಕಾಗೆವಾಯುಂ ಪುಗುಗುಂ ||೪೪||

ಗುಣಮಂ ಗ್ರಹಿಸಿದೊಡಂ ದು-
ರ್ಗುಣಿ ಪೆರನಡೆಯೊಳ್ ಪ್ರಕಾಶಗೊಳಿಪಂ ಕರೆಯಂ;
ಇನಿವಾಲಂ ಗ್ರಹಿಸಿದೊಡಂ
ಫಣಿ ಕಾರುವುದುಗ್ರವಿಷವ ನೈಜಮುದಲ್ತೇ? ||೪೫||

ಕ್ರೂರಂ ಪಾವದರಿಂದಂ
ಕ್ರೂರಂ ನೀಚಾತ್ಮನರಿಯೆ; ಮಂತ್ರೌಷಧಿಗಳ್
ಬಾರಿಪುಗುಮುರಗಬಾಧೆಯ;
ಬಾರಿಸಲರಿದರಿದು ನೀಚನಿಂದಹ ಕೇಡಂ ||೪೬||

ಎಡರಾಳಿಗುವೊಡನಾಳಿಗು-
ಮೊಡರಿಸುವಂ ಕೇಡನಧಮನಾರ್ಗುಂ ಬಿಡದೆ;
ಕೊಡಲಿಯು ಕಡಿತದಿ ಕಡಿದಗು-
ಮಡಿಯುಂ ಪೂಜಿಪಗುವೊಂದೆ ಕಹಿಯಲ್ಲವೆ ಬೇವ್? ||೪೭||

ಚದುರಂ ಕುಜನಂ ಗಡ ಪೆರ–
ಪದುಳಂ ಗಳೆವುದಕೆ; ಸುಕೃತಕೆಲ್ಲಿಯು ಜಾಣಂ?
ಪೊದೆಯೊಳ್ ಪುದುಗಿರುತಂ ತುರು–
ಗಿದ ತಮವನೆ ನೋಳ್ಪ ಗೂಬೆ ನೋಳ್ಪುದೆ ಬೆಳಗಂ? ||೪೮||

ಮೊಗವುರವಿಂದದಿಮಾ ನುಡಿ
ಸೊಗಯಿಪ ಬಾವನ್ನದಂಪಿನಿಂ ಮಿಗಿಲಿರ್ದುಂ
ಬಗೆ ಕುಟಿಲಾಗಿರೆ ತಗುಗುಮೆ?
ಬಗೆಯಲ್ಕಿದೆ ಧೂರ್ತಜನರ ಲಕ್ಷಣಮಲ್ತೇ? ||೪೯||

ಮೊದಲೆ ದುರಾತ್ಮಂ ಕೇಡೊಂ–
ದೊದಗಲ್ ಕಂಗೆಟ್ಟು ಕಾಡನೇನುತ್ತಮರಂ?
ಪುದುಗಿರ್ದುಗ್ರೋರಗಮುಂ–
ತದರೊಳ್ ಬಿಸಿಯುಸಿರನೂದೆ ಭುಸ್ಸೆನ್ನದೆ? ಪೇಳ್ ||೫೦||

ಬಿದಿಯಿಂ ನೇರಿದಗೂನತೆ–
ಯೊದವಲ್, ಕಾದಿರ್ದ ನೀಚರವಸಂ ಸುಲಿವರ್;
ಉದಿಸಲ್ ಗೋಶಿರಕೆ ವ್ರಣಂ,
ಬಿದಿರ್ವುದಾ ವಾಯಸಾಳಿ ಕನಿಕರದೊರೆದು ||೫೧||

ವಿರಚಿಪನನ್ಯಗೆ ಕೇಡಮು–
ನಿರದೆನಿಸುಂ ಕೇಡ ತಾನುಮೊಂದದೆ ಮಾಣಂ;
ಪೆರಮೊಗಕೆ ಕಪ್ಪನೆಳೆವೊಡೆ
ಕರೆಗೊಳ್ಳವೆ ಪೇಳ್ ಕರಾಂಗುಲಿಗಳನಿಸಾನುಂ? ||೫೨||

ಗುರುಸದುಪದೇಶಗಳೊಳ–
ದ್ದಿರಿಸಿದೊಡಂ ಹೃದಯಶುದ್ಧನಪ್ಪನೆ ದುರುಳಂ?
ಪರವಿದ ಕಸ್ತೂರಿಯ ಗೊ–
ಬ್ಬರದೊಳ್ ನೀರುಳ್ಳಿ ಬೆಳೆಯೆ ತಾಳ್ವುದೆ ಕಂಪಂ? ||೫೩||

ನೀಚರ ವಿರೋಧದಿಂ ಕರೆ,
ನೀಚಗುಣಂ ಸಂಗದಿಂದಮೈತರ್ಕುಂ ಕೇ-
ಳೂಚರ್ ಜಸದಿಂದಿರುವೊಡೆ
ನೀಚರ ನೆರಳಂ ನಿರೀಕ್ಷಿಸದೆ ದೂರಿರ್ಕೆ ||೫೪||

ಕಡುಬಿಜ್ಜೆಯು ಕಲಿತವನೆಂ
ದೆಡೆಗೈದಿಸೆ ದುರುಳನಿಂದಲುಪಹತಿ ಬರದೇ?
ಪೆಡೆಯೊಳ್ ಮಣಿಯಿಹುದೆನ್ನುತ
ಒಡಲೊಳ್ ಮಡುಗಿಪೊಡೆಕೇಡನೆಯ್ದಿಸದೇಂಪಾವ್? ||೫೫||

ಹದಿಟೆಯನಾಂತಿಹ ಮನುಜನು-
ಮಧಮರಕೆಳೆಗೂಡೆ ಪಳಿಯನೊಸಮೆಯನಾಳ್ವಂ;
ಮುದಮುದಿತ ಪೊನ್ನದುಂಗಾ-
ರದ ಸಂಗಮನೊಂದಿ ಬಡಿವನೊಂದುವುದಲ್ತೇ? ||೫೬||

ಆಗದರ ಪಳಿಯನೇನಹು-
ದಾಗದರಂ ನೋಳ್ಪೆನೆಂದು ಸಾಗದಿರೆಂದುಂ;
ಕೂಗಿದೊಡೆ ಕಾಗೆ ಪಲಲೆಂ-
ದಾಗುವದೇಂ ಪನಸು ಪಲಲ? ಪನಸದು ಪನಸೇ? ||೫೭||

ಒಳ್ಳಿದನಲ್ಲದನೆಸಗಿದ
ತಲ್ಲಳಮೆನ್ನಿಂದಲೈದಿತೆಂಬುದೆ ವಿಹಿತಂ
ಮುಳ್ಳೇ ಚುರ್ಚಲ್ ಕಾಲಿಗೆ
ಮುಳ್ಳಂ ತಾನಕಟ ತುಳಿದೆನೆಂಬುದೆ ಸಾಜಂ ||೫೮||

## ಕೆಳೆತನ

ಪುರುಳಂ ಪಡೆವುದರಿಂ ಸುಜ-
ನರ ಕೆಳೆಯುಂ ಗಳಿಪ್ಪುದೊಳಿತು; ನಿರುಮಲಮನವೊಂ-
ದಿರಲುಳಿವುದಾ ಕೆಳೆತನಂ;
ಪುರುಳಿರ್ಪುದು ತಿರಮೆ ಮನಮುದೆಂತಿರುತಿರಲುಂ? ||೫೯||

ಅರಿಯುದೆ ಕೆಳೆಯುಂ ಕಷ್ಟದೊ-
ಳುರುಳುತ್ತಿರಲವನ ಕಾವ ಕೆಳೆಯುನೆ ಕೆಳೆಯುಂ;
ತರಳಗರಿಯದೊಗೆದೆಡರಂ
ಪರಿಹರಿಪಾ ತಾಯು ನೇಹಕಿನ್ನೆಣೆಯುಂಟೇ? ||೬೦||

ಕೆಳೆಯುನ ಮರೆವಾತಂ ಮನ-
ದಲಿ ಮರೆಗಿಡುತವನ ಸದ್ಗುಣಂಗಳ ಬೆಳಗಿ,
ನಲುವಳಲಂಗಳೊಳುಂ ತಾ-
ನುಳಿಯದೆ ಸಹಚರಿಪ ಕೆಳೆಯುನೊಳ್ಳಿದಗೆಳೆಯುಂ ||೬೧||

ಸಖವರನೆನಿಪಂ ಕರೆಯುದೆ
ಸಖನೇಳ್ಗೆಯು ಕಜ್ಜಕೊಲಿಯುತೀವಂ ನೆರವಂ
ಶಿಖಿಯುಂ ಪ್ರೋಜ್ವಲಿಪೊಡೆ ತ-
ತ್ಸಖನನಿಲಂ ಕರೆಯುದೈದುತೂದುವನಲ್ತೇ? ||೬೨||

ಬರಿದೊಡಲಿರೆ ಗೋಳಿಟ್ಟಳಿ-
ದುರೆ ನೀರ್ಗೊಂಡಾರ್ದು ಪಾರ್ವ ಯಾತದ ತೆರದಿಂ
ಪುರುಳಿಲ್ಲದಂದು ಸುಳಿಯುತ
ಪೊರೆಯೊಳ್, ಪುರುಳ್ಪಡೆದು ಪೋಪನವನಳಿಗೆಳೆಯುಂ ||೬೩||

ಅಸತೀಪತಿಯಾಗಿರ್ಪುದು,
ವಿಷಮುಸ್ನೇಹಿತನ ಸ್ನೇಹಮಿರ್ಪುದನಿಷ್ಟಂ;
ವಿಷದಹಿ ಸೇರಿದ ಗೇಹದೊ-
ಳೊಸೆದಿರುತಿರೆ ನಿಸದಮಳಿಗುಮಲ್ಲವೆ ಜೀವಂ? ||೬೪||

## ಸಿರಿ

ಮೆಲುವಾತಿನ ಮೃದುಹೃದಯುದ
ಸುಲಲಿತ ಮುಖಮುಪ್ರೆಯುವನ ಸಿರಿ ತೊಲಗುವಳೇ?
ಜಲಜಂ ಮಾರ್ದವದಿಂ ಕೋ-
ಮಲತರದಿಂದೆಸೆಯುಲಾಕೆ ನೆಲಸಿದಳದರೊಳ್ ||೬೫||

ಉಜ್ಜ್ವಳಿಪ ಗುಣಂಗಳುಮಾ
ಬಿಜ್ಜೆಯುಮಿರಲವನ ಸೇರ್ವಳೊಮ್ಮೆಲೆ ಲಕುಮಿ;
ಹೆಜ್ಜೆಗೆ ಹೆಜ್ಜೆಯನಿಕ್ಕುತೆ
ತಜ್ಜಾನಕಿ ನಡೆದಳೇಕೆ ರಾಮನ ವನಕೆ? ||೬೬||

ಫಲಗಳ್ ದೊರೆಗುಂ ದೈವದ
ಬಲಮಿರ್ದವೊಲತುಲಬುದ್ಧಿ ಪೌರುಷಮಿರಲುಂ;
ಜಲಧಿಯ ಮಥನದ ಕಾಲದಿ
ಜಲಜಾಕ್ಷಂ ಸಿರಿಯ, ತಿಸುಳಿ ಬಿಸಮಂ ಪಡೆದರ್ ||೬೭||

ಕಡವರವೆಟ್ಟದೊಳಿರಲೇ–
ನಡವಿಯೊಳಿರಲೇನದೃಷ್ಟದನಿತೇ ದೊರೆಗುಂ
ಕೊಡಮುಂ ಕೂಪದೊಳಲ್ಲದೆ
ಕಡಲೊಳ್ ಮುಳುಗಿಪೊಡೆ ಪಿರಿದು ನೀರ್ಗೊಂಡಪುದೇ? ||೬೮||

ಸಿರಿಯಂ ಸುಜನರ್ ಸಂಗಳಿ–
ಸಿರಲುಂ ಭೋಗಿಸದೆ ತಾವೆ, ಪರಹಿತಕೀವರ್;
ಧರಿಸಿದ ಜಲಮುಂ ಜಲಧರ–
ಮಿರದೀಂಟುವದೇನೋ ತಾನೆ? ಧರೆಗೀಯದೆ? ಪೇಳ್ ||೬೯||

ಸಿರಿ ಚರಿಪುದು; ತಿರಮಲ್ಲಂ;
ಸಿರಿಯಿರಲುಂ ಸೊಗಸು ತಿರಮೆ? ತಲ್ಲಳಮಕ್ಕುಂ;
ಶರದೃತುವಿನಂಬುದಂಗಳ್
ಚರಿಪುವು; ಮೇಣವುಗಳೊಡನೆ ನೆರಳ್ಗ ವಿದಿರ್ಕುಂ ||೭೦||

ಭೋರೆಂದು ಮೇರು ತಿರುಗಲ್
ವಾರಿಧಿಯೊಳ್ ಪುಟ್ಟುಗೊಂಡ ಸಿರಿಯೊಂದೆಡೆಗುಂ
ಓರಂತೆ ನಿಲ್ಲದಾ ಸಂ–
ಸ್ಕಾರದ ಯೋಗದಿನಿಳಾತಳದಿ ತಿರಿತಿರಿವಳ್ ||೭೧||

ಕಂಡೊಡಮಲಸನ ಸಂಪದ-
ಮುಂಡಿಸಿ ಪೆರಸಾರಿ ಧೀರಚಪಲನ ಸೇರ್ಗುಂ;
ಪಂಡರ ನಿರಾಕರಿಪರೆಳ-
ವೆಂಡಿರ್ ರತಿರಸಿಕನಪ್ಪ ಪೆರನೊಳ್ ಪರಿವರ್ ||೭೨||

ಧನಮಿಲ್ಲದನಂ ಪಳಿವಳ್
ಜನನಿ; ನಿರಾಕರಿಸಿ ನೋಳ್ಪನಾಗಳೆ ಜನಕಂ;
ಅನುಜಾತರೊಡನೆ ನುಡಿಯರ್;
ಮುನಿವಂ ಸೇವಕನದನಿತು ಧನಮುಗ್ಗಳವೋ ||೭೩||

ಧನವೊಂದಿಲ್ಲದನಂ ನಿಜ-
ವನಿತೆಯು ನಲಿದಪ್ಪಿಕೊಳ್ಳಳಣುಗಂ ಸೇರಂ;
ತನಗುಂ ಯಾಚಿಸುವಳ್ಕಿನಿ-
ಮಿನಿಸುಂ ಬರನವನ ಪೊರೆಗೆ ಸಖನೆಂದಾನುಂ ||೭೪||

ನೆರೆವರ್ ನೆಂಟರುಮೆಲ್ಲರ್
ಸಿರಿವರೆ ತನಗಂದು ಬಾಯ ಮಾತಿನ ಹಿತದಿಂ;
ಸರದೊಳ್ ಜಲಮೈದಲೊಡಂ
ಕರೆಯದೆ ಬಂದೊದರುತಿಹವು ಕಪ್ಪೆಗಳೆನಿತೋ ||೭೫||

ಸಿರಿಯಿರುವನ್ನಂ ನಿಲ್ವರ್
ಸಿರಿಪರಿಯಲ್ ಪಳಿದು ಪೋಪರೆಲ್ಲರ್ ನೆಂಟರ್;
ಅರವಿಂದಮುಳಿಯೆ ಬಂಡಂ
ಪರಮೆಗಳೇಕಿರ್ಕುಮೋಡುಗುಂ ಪೆರತೆಡೆಗಂ ||೭೬||

ಕುಡುಕುಡುತೆ ಬಡವನಾದಂ-
ಗೊಡನೊಡನೆಯು ದೈವದಿಂದಮೊಗೆಯುವೆ ಸುಧನಂ?
ಪೊಡವಿಗಮೃತಮಂ ನೀಡು-
ತ್ತುಡುಪತಿ ಬಡವಾಗಿ ಮತ್ತೆ ಬಳೆಯುನೆ ಕಳೆಯಿಂ? ||೭೭||

ಗಳಿಪೆಂ ಗಳಿಪೆನೆನುತ್ತಂ
ಬಳಿಕೊಳುತಿರೆ ಪೆರರ ಪುರುಳನದು ಪಾಳ್ಗೆಯ್ಗುಂ;
ಬಳಿಸಾರ್ಗುಮೆನುತ ಗರಲಂ
ಗಳಗಳನೀಂಟಲ್ಕೆ ಗಳಿಲನಳಿಯದೆ ಹರಣಂ? ||೭೮||

ಕಡುತರ ಹಿಂಸೆಗೆ ತಾನೊಳ-
ಪಡವೇಳ್ಕುಂ ಬರಿದೆ ಧನಿಕನದು ತಪ್ಪದು; ಕೇಳ್
ಹೆಡೆಯಿರೆ ಪಾವಂ ಕೊಲ್ವರ್;
ಗಡಮಾಲೋಚಿಪರೆ ಸೌಮ್ಯಮುಗ್ರಮಿದೆನುತಂ? ||೭೯||

ತ್ಯಾಗಮನೆನಿತುಂ ಗೈಯ್ಯದೆ-
ಯೇಗಳುಮಿರ್ದನಿತು ತಾನೆ ತಿಂಬುದು ಕೀಳಂ;
ಕಾಗೆಯುಮೊಂದಗಳಂ ಕಂ-
ಡಾಗಳೆ ಕರೆದಪುದು ತನ್ನ ಬಳಗಮನೆಲ್ಲಂ ||೮೦||

ಸಿರಿಯುಂ ನಚ್ಚಲ್ ಸೊಗಕಾ
ಸಿರಿ ತೊಲಗಿದೊಡದಕೆ ಪಿರಿದು ಕಳವಳಮಕ್ಕುಂ;
ಸಿರಿಯಿಂ ಸೊಗಮಳಲಲ್ಲಂ;
ಸಿರಿಯುಂ ಜರೆದಾಸೆಗಳೆದ ತೃಪ್ತಿಯೆ ಸೊಗಮೈ ||೮೧||

## ಸಾಮಾನ್ಯ ನೀತಿ

ನಲಿದೊಲಿದನ್ಯರ ಸುಗುಣಂ-
ಗಳ ಪ್ರಕಟಿಪ ಗುಣಿಯು ಸುಗುಣಗಣಮೇ ಬಳೆಗುಂ;
ಬಿಳುದಾವರೆಯುನ್ನರಳಿಪ
ಚಳಿಗದಿರನ ಕಳೆಯು ಬೆಳ್ಪು ಬಳೆದಪುದಲ್ತೆ? ||೮೨||

ಅರ್ಥದ ತಿರುಳಂ ತಿಳಿಯದೆ
ಹೊತ್ತಿಗೆಹೊತ್ತಿಗೆಗಳೆಲ್ಲನೋದಿದೊಡವಗುಂ
ಹೊತ್ತಿಗೆಗಳ ಮೊತ್ತಗಳಂ
ಪೊತ್ತೊಡೆ ಕತ್ತೆಗುಮದೇನೊ ಭೇದಂ? ಪೇಳಾ ||೮೩||

ಜನರಿಂ ಧನಮಂ ಕೊಳ್ವುದು
ಜನಪಂ ತನಗಲ್ತು; ಲೋಕಹಿತಕಾಗಿರ್ಕುಂ;
ತನಗೋ ಧರಣಿಯ ಜನರಂ
ತಣಿಸಲೊ ಮೇಘಂ ಜಲಾಶಯಗಳಂ ಪೀರ್ಗುಂ? ||೮೪||

ಜನಮಾನ್ಯ ತನಯನೋರ್ವನೆ
ಜನಿಸಿದೊಡಂ ಜನಕಗಿಲ್ಲದಿಹ ಪುರುಳುಂಟೇ?
ತಣಿಗುಂ ಬಹುಸುಖದೊಳ್ ಸಿಂ-
ಹಿಣಿ ಬಲ್ಲಿದ ಮಗುವನೊಂದೆ ಪಡೆದದರಿಂದಂ ||೮೫||

ಪೆತ್ತೊಡೆ ಫಲಮೇನಿರ್ದುಂ
ಸತ್ತವೊಲಿಹ ಪತ್ತುಮಕ್ಕಳಂ? ಬಾಳ್ಗೋಳಂ;
ಕತ್ತೆ ಮರಿಗಳಂ ಪತ್ತಂ
ಪೆತ್ತುಂ ಪೊತ್ತಪುದು ಮಣ್ಣನವುಗಳ ಕೂಡೆ ||೮೬||

ಕಿಡುಗುಂ ಗುಣಗಣಮೊಡಲೊಳ್
ಕಡುಪೇರಿದ ಪಸಿವೆಯಿಂದಮಿರದೊಡೆ ಬೋನಂ;
ಸುಡುಗುಂ ಸುಲಲಿತ ಬನಮುಂ
ಕಡುಸರಿಯಿಲ್ಲದೊಡೆ ಬೇಗೆಯಿಂ ಕಾನನದೊಳ್ ||೮೭||

ಪೊರೆದಪನೆಲ್ಲರನೀಶಂ;
ನರರೋರ್ವರ ಪುರುಳನೋರ್ವರೆಳೆಯಲದೇಕೆ?
ದುರುಳನದಿಕ್ಕೈಗಳಿನಪ-
ಹರಿಸುವೊಡೀರೈದು ಕರದಿನ್ನೈಮೊಗನೀವಂ ||೮೮||

ಹರನೀವುದು, ತಾಂ ಭೋಗಿಪು-
ದುರುತರಮಪ್ಪುದು; ಪರಾರ್ಥಕಳಿಮನಮೇಕೈ?
ನರನೀವನೊರ್ಮೆ ಹಂಗಿಪ-
ನರಿವೊಡೆ ಜಗದೆರೆಯನೀಯಲುದ್ಧೃತನಕ್ಕುಂ ||೮೯||

ವರಕವಿವಾಣಿಯದರ್ಥವ–
ನರಿಯದನುಂ ತಣಿಕುವಾಗಿಸುತ ಕಿವಿಗಿಂಪಂ
ಪರಿಮಳ ಪೊರಸೂಸದೊಡಂ
ನಿರುಕಿಸಲೆಸೆದಿಹುದು ಮಾಲತೀಸುಮಮಾಲೆ ||೯೦||

ಸಭೆಯೊಳ್ ಸಾಲಂಕೃತರಿರೆ
ಸೊಬಗೇನವರೊಳ್ ಕಲಾನಿಧಿಯೆ ಪೊರಡದಿರಲ್?
ನಭದೊಳರಿಲ್ಗಳ್ ಪೊಳೆದೇಂ
ಸೊಬಗಿನ ಶಶಿಯಿಲ್ಲದಂದು? ವಿಫಲಮಪೆಲ್ಲಂ ||೯೧||

ಕರೆಪೊರ್ದದವೊಲ್ ನಡೆಯದೆ
ಕರೆಪೊರ್ದಲದಂ ಪಳಂಚಲೆಸಪುದು ಕರಿಣಂ;
ನೆರೆಯಲದೇಕಾ ಕೇಸರಂ?
ಶರೀರಮುಂ ಬಳಿಕೆ ಕರ್ಚುವಾಯುಸಮೇಕಾ? ||೯೨||

ಜ್ಞಾನಿದುರಾಶೆಗಳಿಂದಂ,
ಭೂನಾಥ ನಿರಾಶೆಯಿಂದಮಳಿವಂ ಪಡೆವರ್;
ನಾಣಿಲಿಯಾದೊಡೆ ಮಾನಿನಿ,
ನಾಣಿಂದಂ ಸೂಳೆಯಳಿವರಚ್ಚರಿಯಲ್ತೆ? ||೯೩||

ಪರಯುಂ ಮರಕೆ ಬಸಂತಮೆ;
ಪರಯುಂ ಪುರುಷರ್ಗೆವಿಪುಲ ಧನದೊಡೆತನಮೇ;
ಪರಯುಂ ಬುಧಂಗೆ ಬಿಜ್ಜೆಯೆ
ಪರಯುಂ ಗರತಿಯರಿಗೈದೆದಾಳಿಯ ಸಿರಿಯೇ ||೯೪||

ಕೂರ್ಮೆಯ ಕೆಳೆತನವೈಸಿರಿ
ಧರ್ಮಾಧರ್ಮಗಳು ಮೋಕ್ಷಬಂಧನ ಬಲಗಳ್
ದುರ್ಮರಣಂ ನಾಲಿಗೆಯಿಂ–
ದೊರ್ಮೆಯುಮಳಿವಾತನಾಡದಿರ್ಕುಮೆ ತಗುಗುಂ ||೯೫||

ಇಳಿವಿಸಿಲಂ ಮುಖಧೂಮ್ರಂ
ತಿಳಿಯಾದೊಳನೀರಮಿರುಳು ಪಾಲೋಗರಮಂ
ಎಳವರೆಯುದಳಂ ಸೇವಿಸೆ
ಬಳೆಗುಂ ದಿನದಿನದೊಳಾಯುವಿದನರಿದಿಹುದೈ ||೯೬||

ಎಳೆವಿಸಿಲಂ ಶವಧೂಮ್ರಂ
ಕೊಳೆಹಳ್ಳದ ನೀರಮಿರಳು ಮೊಸರೋಗರಮಂ
ಇಳಿಮೆಯ ಪೆಣ್ಣಂ ಸೇವಿಸ-
ಲಳಿಗುಂ ದಿನದಿನದೊಳಾಯುವದರಿಂ ತೊರೆಗುಂ ||೯೭||

ಧನಮುಂ ಧರ್ಮವ ವಿದ್ಯೆಯು-
ನಿನಿತಿನಿತನೆ ಗಳಿಸುತಿರ್ಕೆ; ಪೂರ್ಣತೆಯುಕ್ಕುಂ;
ಹನಿಹನಿ ಸೇರುತ್ತಿರಲುಂ
ವನಪೂರಿತಮಪ್ಪುದಲ್ತೆ ಕೊನೆಯೊಳ್ ಘಟಮುಂ? ||೯೮||

ಅರಿದಿರ್ದೊಡಮೆಲ್ಲವನುಂ
ಪೆರರಿಂ ತನ್ನಿರವನರಿವುದರಿದಗೆ ತಗುಗುಂ;
ಧರೆಯನೆ ನೋಡಿದೊಡಂ ತ-
ನ್ನಿರವಂ ನೋಡುವುದು ಕಣ್ಣು ಕನ್ನಡಿಯಿಂದಂ ||೯೯||

ಕೆಸರಿರದಿರೆ ಪೊಳೆಗುಂ ಕೊಳ-
ಮೆಸೆಗುಂ ಕಟುವರ್ಣಮಿರದೊಡೊಳ್ಗಬ್ಬಂ; ಮೇ-
ಣೆಸೆಗುಂ ಸಭೆ ಖಳನಿರದಿರೆ;
ವಿಷಯುಗಳಿರದಿರೆ ಪ್ರಕಾಶಿಪುದು ಮಾನಸಮುಂ ||೧೦೦||

ಗುಣಗಣಮಿರದಿರ್ದೊಡಮುಂ
ಮನುಜಂ ಜನಮಾನ್ಯನಪ್ಪನದು ದೈವಬಲಂ;
ತನಿವಣ್ಮಲರ್ಗಳಿಲ್ಲದೆ
ಜನಮರಳಿಯ ಗಿಡವ ಪೂಜಿಕುಂ ಪೇಳೇಕೆ? ||೧೦೦||

ಪದವಧಿಕಾರಗಳಿರೆ ಪೆಂ-
ಪೊದಗಿದುದೇಂ ಸುಜನರೊಲಿವ ಗುಣಮಿರಲುಂ?
ಬಿದಿರುಂ ಮಲಯದ ಸಂಸ-
ರ್ಗದಿನೇಂ ಪಡೆದಪುದೆ ಚಂದನದ ಗೌರವಮಂ? ||೧೦೨||

ಮಾನಂ ನಿಜಗುಣದಿಂದೇ
ಮಾನವಗೈತಪುದು; ಸ್ಥಾನಗುಣದಿಂದಲ್ಲಂ;
ಆನೆಯನುಳಿದುತ್ಸವದೊಳ್
ಕ್ಷೋಣೀಶಾಲಯಬಿಡಾಲಮಂ ಮೆರಿಸುವರಾರ್? ||೧೦೩||

ಹಳಿಯಲ್ಕೇನಳಿವಾನಿಸ-
ನುಳಿಯದೆ ಸತ್ಕರಿಪರಲ್ತೆ ಬುಧನಂ ತಿಳಿದರ್?
ಉಳಿದೊಡೆ ಮೂಢಂ ಕತ್ತುರಿ-
ಯಳಿವುದೆ? ದೊರೆಕೊಂಡುಕೂರ್ತುಧರಿಸನೆಶಿರದೊಳ್ ||೧೦೪||

ಸುಗುಣಂಗಳಿಲ್ಲದಂದೋ-
ಲಗಿಸದು ಜನಮುಮಲಕುಲಜನೆಂದಾವನುಮಂ
ಒಗೆದೊಡಮೇನಿಂಗಡಲೊಳ್
ಬಗೆದಪರಾರ್ ಕಾಲಕೂಟ ವಿಷಮೊಳಿತೆಂದು? ||೧೦೫||

ಸಾಗದೆ ಸಭಾವಿನೋದಕೆ
ವಾಗೀಶಂ ನುಡಿಯಲೋರ್ವನೇತಕೆ ಪಲಬರ್?
ಕೋಗಿಲೆ ಕಲರುತಿಗೈದಿರೆ
ಕೂಗಲ್ವಿಹಗಗಳಗಣ್ಯಮಾಲಿಪರಾರ್? ಪೇಳ್ ||೧೦೬||

ಕುಲಜಂ ಯೌವನಯುಕ್ತಂ
ಚೆಲುವಂ ತಾನಿರ್ದೊಡೇನೊ ವಿದ್ಯಾಹೀನಂ?
ತಳೆಯದೆ ಸೌಸವಮಂ ಸಲೆ
ಪೊಳೆಯುತ್ತಿರೆ ಫಲಮದೇನೊ ಮುತ್ತುಗದಲರ್ಗಳ್? ||೧೦೭||

ಬಡವಂಗೋಲಗ ನುಡಿ ಬಿಸ-
ಮಡಸಲು ಮುಪ್ಪೆಳೆಯ ಪರಯುದಾಮುಡದಿಬಿಸಂ;
ಪೊಡೆಯೊಳ್ ಕರಗಿಪ ಬಲಮಿರ-
ದೊಡೆ ಗಡ ನಲ್ಲುಣಿಸು ಬಲಿದ ಬಿಸಮಾಗದೆ ಪೇಳ್? ||೧೦೮||

ಸತಿ ಗುಣವತಿಯಾಗಿರೆ ಸಂ-
ಸೃತಿ ಮನುಜಂಗಮೃತಮೆಳೆಯುನಿನಿವಾತಮೃತಂ;
ಹಿತದಿಂದುಣಬಡಿಸಲ್ ಪಸಿ-
ವತಿಶಯಮಾದಂಗೆ ತಂಗುಳೋಗರವಮೃತಂ ||೧೦೯||

ಬಲ್ಲಾಳ್ತನಮೆನಿತಿರಲೇಂ
ಸಲ್ಲಲಿತೊಳಬುದ್ಧಿಯಿಲ್ಲದಂದದು ವಿಫಲಂ;
ಬಲ್ಲಿದ ಮೃಗರಾಜನುಮಂ
ನಿಲ್ಲದೆ ಕೊಲ್ವುದು ಶೃಗಾಲನಾವುದು ಬಲದಿಂ? ||೧೧೦||

ಇರೆ ಕ್ರೋಧಾಂಧಗೆ ಲೋಕೋ-
ತ್ತರ ಶಕ್ತಿಗಳೇನು ಫಲಮೊ ತನಗುಂ ಪೆರರ್ಗುಂ?
ಕುರುಡಗೆ ಶರೀರ ಬಲಮಿರು-
ತಿರಲೇನೊಳ್ಗಜ್ಜನೆಸಗಿ ಸೊಗವಡೆದಪನೇ? ||೧೧೧||

ಅನಿವಾರ್ಯಕಷ್ಟಗಳುಮಂ
ಮನುಜಂ ಸಹಿಪನಪಮಾನಮಂ ಸಹಿಪನೆ? ಪೇಳ್
ತನಗೊಗೆದಪಮಾನವ ನೀ-
ಚನುಮೆಂದುಂ ತಾಂ ಸಹಿಸನಕಟ ಮಾನಮೆ ಜೀವಂ ||೧೧೨||

ಅಳಿವುದು ಹಣಮವಿವೇಕದಿ-
ನಳಿವುದು ಕೆಳೆ ಲೋಭಗುಣದ ದುರ್ಮಾನಸದಿಂ;
ಅಳಿವುದನೀತಿಯ ಪಥದಿಂ
ಗಳಿಲನೆ ಮುಂಕೊಂಡ ಕಜ್ಜದೊಳ್ ಯಶದಾಸೆ ||೧೧೩||

ವೀರತ್ವಮೆನಿತುಮಿಲ್ಲದೆ
ಭೀರುತನಂ ನಯದ ನಡತೆ; ನೀತಿಯನುಳಿದಾ
ವೀರತನಂ ಪಶುವೃತ್ತಿ: ಸು–
ವೀರಂ ನಯಶೀಲನಾಗೆ ಪದಿಟೆಯನಾಳ್ವಂ ||೧೧೪||

ಆರಾದರಿಪರ್ ತನ್ನಂ
ವೀರತ್ವಂ ಜಾಣ್ಮೆ ಸಿರಿಗಳಿರದಿರಲೊಂದುಂ?
ಹಾರೈಪುದೆ ಚಾತಕಮುಂ
ನೀರಿಲ್ಲದ ನೀರದಂಗಳಂ ನಭದೆಡೆಯೊಳ್? ||೧೧೫||

ಕಲಿಯತಿ ಚದುರಂ ನೀತಿ ಕು–
ಶಲನಿರೆ ನೆರವೇಕೆ ತಾನೆ ಗೆಲ್ಸಿರಿಬರ್ಕುಂ;
ನಲುವಾತಿನ ಚಲುವನ ಕಂ–
ಡೊಲೆದಭಿಸಾರಿಕೆಯೆ ಬರ್ಪಳಾರ್ ಬರಿಸಿದಪರ್? ||೧೧೬||

ಗಳಹದೆ ಕಾರ್ಯವಿಚಾರಮ–
ನೊಳಗೆಸಪುದೆ ಕಾರ್ಯಸಿದ್ಧಿಗನುವಪ್ಪುದು; ಕೇಳ್
ನಳಿವಣ್ಣಪ್ಪುದು ಕಾಯುಂ
ಕಳಮೆಯಸೊಪ್ಪೆಯೊಳೆಮಡುಗಲೋಪೊರಗಿಡಲೋ? ||೧೧೭||

ತಿಳಿವಂ ವಿಬುಧಂ ವಿದ್ಯೆಯ
ಗಳಿಪುದರೊಳ್ ಪಡೆವ ಶ್ರಮುವ ಪೆರರರಿದಪರೇ?
ತಿಳಿವಳ್ ತಾಯಿಯೆ ಪೆರಿಗೆಯೊ–
ಳಳಲುವದಂ ಬಂಜೆ ಬಲ್ಲಳೇನದರಂದಂ? ||೧೧೮||

ನರವೀರಂ ಪೌರುಷಮಂ
ನೆರೆ ಪ್ರಕಟಿಸದಿರೆ ನಿರಾಕರಿಪ್ಪು ದವನ ಜಸಂ;
ಪೊರಡಿಸದಿರೆ ಮರವೊಳಗಿಹ
ಮರಗೂಳಮನೆಲ್ಲರದನೆ ತುಳಿದಪರಲ್ತೇ? ||೧೧೯||

ಸರಸಕವೀಂದ್ರಂ ಕಬ್ಬಂ
ವಿರಚಿಪನೆಂದೆಲ್ಲರೆಸಗೆ ನಗೆಗೆಡೆಯಕ್ಕುಂ;
ಹರನುಂ ಕುಣಿದಪನೆನುತಂ
ನೆರೆ ನರ್ತಿಸಲೇಂ ಪಿಶಾಚಿ ನಯಮುಣ್ಮುಗುಮೇ? ||೧೨೦||

ಪಿರಿಯರ ಗುಣಂಗಳೇಗಳ್
ಪಿರಿದಾಗಿಪವೆಂದು ನೆಮ್ಮಲದು ಕಿಡಿಕುಂ; ಪೆ-
ಮ್ಮರಮಿದು ಪಿರಿಗಾಯ್ಗಳೆನುತ
ಮರುಳ ಶುಕಂ ಕೆದರೆ ತೆಂಗ ಚುಂಚೇ ನೋಯ್ಗುಂ ||೧೨೧||

ಕಳೆದಾಯುಷ್ಯದ ಪಳೆಯುಂ
ತಿಳಿಯುಂ ಮುತ್ತನಿವನೆನ್ನದವನನುಭವಿ; ಪೇಳ್
ತಿಳಿಯೆಯೊ ತಿಳಿದರ್ ನುಡಿಯುವ
ಪಳೆಯೆತ್ತನೆ ಪೊಳೆಯೊಳಿರದೆ ಪೂಡೆಂಬುದನು ||೧೨೨||

ದೇವಾನುಗ್ರಹ ಘನಮಿರ-
ಲಾವಾವನದೆನಿತೊ ಪುಣ್ಯಮನಿತೇ ದೊರೆಗುಂ;
ತೀವಿರೆ ಪಾಲೇ ಜಲಧಿಯು
ನೇವುದು? ತನಗಿರ್ಪ ಪಾತ್ರೆಯನಿತೇ ಕೊಳ್ಗುಂ ||೧೨೩||

ಕಳವಳ ಸೇರುತೆ ಬಗೆಯೊಳ್
ಕಲುಕದೊಡುಣ್ಮುಗುಮೆ ಸಾಹಸಾದಿ ಗುಣಂಗಳ್?
ಜಳಧಿಯನೊಳವುಗುತಚಳಂ
ತುಳುಕಿಸಲೊಗೆದತ್ತು ಸಾವ ಗೆಲೆವಮರ್ದಲ್ತೇ? ||೧೨೪||

ಬಡವಂ ಧನಿಕಗೆ ಧನಮಂ
ಕುಡಲ್ಕೈತರುತಿರ್ಕೆ ಬೇಡಬಂದಪನೆಂಬರ್;
ದುಡಿದೊರ್ವೆ ಪಾಲನೀಂಟಲ್
ಕುಡಿದಪನನ್ಯರಲಿ ತಂದ ತಕ್ರಮನೆಂಬರ್ ||೧೨೫||

ತಿಳಿತಿಳಿದು ಕಜ್ಜ ನೆಸಗುವ-
ದೊಳಿತಳವೇನಳಿದ ಬಳಿಕವೊಳಿತೆಸಗುವೊಡೆ?
ಪುಳಿಗೂಡೆ ಪಾಲೊಳಪ್ಪುದು
ಪುಳಿವೊಸರಾ ಪೊಸರು ತಿರುಗಿ ಪಾಲಹುದೇಂ ಪೇಳ್ ॥೧೨೬॥

ಮುನಿದೊಡಮನ್ಯರ ಮೇಲಂ
ಮುನಿದವನೊಳಬಗೆಯೆ ಬೇಯ್ಗು ಮಾಬಳಿಕನ್ಯಂ;
ಅನಲೋದಯಮಂ ತೋರ್ಪಿಂ-
ಧನಮೆ ಮೊದಲ್ ಸುಡುಗುಮುಳಿದುದಾಬಳಿಕಳಿಗುಂ ॥೧೨೭॥

ನಿಂದೊಡೆ ಬಗೆಯೊಳ್ ಜಂಜಡ-
ಮೆಂದುಂ ಮಾನವನ ಪಾಳನೆಯ್ದಿಸದಿರದೈ;
ಬಂಧುರಮಂದಿರಮಿರಲೇಂ
ಸಂಧಿಸಿ ಮೊಳೆದಾಲಮದನೆ ಬೀಳಿಸದಿಹುದೇ? ॥೧೨೮॥

ಕೊಚ್ಚದಿರೆಲ್ಲರ ಮನಮಂ
ಮೆಚ್ಚಿಪೆನುಚ್ಚಂಡನಿರ್ದಪೆಂ ತಾನೆಂದು;
ಹುಚ್ಚನಹನೆಂದು ನುಡಿವರ್
ಮೆಚ್ಚಿದವೊಲ್ ಮುಂದೆ ಪೊಗಳುವವರೇ ಪಿಂದೆ ॥೧೨೯॥

ಅತ್ತೊಡಮೆನಿತೇಂ ಸಾಯಲ್?
ಸತ್ತವರೊಡನಳ್ವರೆಲ್ಲ ಸಾಯಲು ಬಹುದೇ?
ಸತ್ತೊಡೆ ತಾವುಂ, ಕಲೆವುದು
ಮತ್ತೆಲ್ಲಿಯದವನ ತಮ್ಮ ಮಾರ್ಗವೆ ಬೇರೆ ॥೧೩೦॥

## ಸ್ತ್ರೀನೀತಿ

ಗದಿರೊಂದಿದ್ದೈದೆದಾಳಿಗೆ
ಹದಿಬದೆ ಕಳೆಗೊಳ್ವಳೊಂದು ತೊಡಮಂ ಬಯಸಳ್;
ಗದಿವಿಸಿ ಗಂಡನ, ತೊಡಗಳ
ಗದಿಪಿಂ ಮೆರೆವವಳದೆಂತು ಹದಿಬದೆಯೆನಿಪಳ್? ॥೧೩೧॥

ಸಿರಿವೋದನಾಗಲಿನಿಯನ
ನಿರಾಕರಿಪುದೇಕೆ ನಾರಿ? ಕಾಲವ ಕಳೆಯಲ್
ಸಿರಿವಡೆದು ಮೆರೆಯನೇಂ ಪತಿ?
ನೆರೆವೆರೆಯಹನವಸೆಗಳೆದು ಸೊರಗಿದ ಪೆರೆಯುಂ ||೧೩೨||

ಇನಿಯನ ಮರೆಗುಮ್ಮಳಿಸು–
ತ್ತಿನಿಯಂ ಬರೆ ಮಂದಹಾಸ್ಯದಾದರದೋರಿ
ಇನಿಯನ ತಲ್ಲಳಮಂ ಕಳೆ
ವಿನಿಯಳ ಕೈವಿಡಿದವಂಗೆ ಸಿರಿ ಪೆರತುಂಟೇ? ||೧೩೩||

ನಲ್ಲನ ಹಿತಾಹಿತಂಗಳ–
ನೊಲ್ಲದೆ, ತನತೊಂದು ಬೇರೆ ಸೊಗಮಂ ಬಯಪಾ
ನಲ್ಲಳ್ ನಲ್ಲನ ಕೀರ್ತಿಯ
ನಿಲ್ಲದೆ ಪಾಳ್ಗೆಯ್ದು ತಾನುಮಘದೊಳ್ ಬೀಳ್ವಳ್ ||೧೩೪||

ರಸವಿಷಯಂಗಳ ಪೊರೆಗಿರೆ
ಬಿಸಜಾಕ್ಷಿಯ ಮೃದುಲಹೃದಯಮೆಳೆವುದೆ ಸಾಜಂ;
ಬಿಸಿವಡೆದಗ್ನಿಯ ಪೊರೆಯೊಳ್
ರಸಮೊಸರದೆ ಮಾಣ್ಗುಮೇನೊ ನವನೀತಂ? ಪೇಳ್ ||೧೩೫||

ಕೆಲಬಲದ ವಿಷಯಕೊಲಿಯದೆ
ಲಲನೆಯಿಡಲ್ ಮನವನಿನಿಯನೊಳ್ ಜಸವಡೆಗುಂ;
ಗೆಲೆವನೆ ಡೊಂಬಂ ಹಗ್ಗದಿ
ಕೆಲಬಲಕೀಕ್ಷಿಸುತ ನಡೆದೊಡೆದುರ್ಗುರಿಯುಳಿದು? ||೧೩೬||

## ವೈರಾಗ್ಯನೀತಿ

ಪಲವುಂ ಮತಂಗಳಿರಲೇ–
ನೊಳಗಣ ತತ್ವಗಳದೋರ್ವ ದೇವನ ಕಲೆಗುಂ;
ಹೊಳೆಹೊಳೆಯೊಳ್ ಪರಿವಜಳಂ
ಹೊಳೆಯಾಣ್ಮನ ಕಲೆವುದಲ್ತೆ ಪರಿದೆತ್ತಾನುಂ? ||೧೩೭||

ಪಿರಿದೀ ಮತಮಲ್ಲಾ ಮತ-
ಮರಿದೊಡೆ ಪಿರಿದೆಂದು ಬರಿದೆ ವಾದಿಸಲೇಕೆ?
ವರಮತಮದಲ್ಲಮೇನೊಳ-
ಗಿರಲತ್ಯುಚ್ಚತಮತತ್ತ್ವಮಚಲಾನಂದಂ? ||೧೩೮||

ಸರದೊಳ್ ಬೀಳ್ದೊಡೆ ಪಶುವುಂ
ಪೊರಮಡಲುಜ್ಜುಗಿಪ್ಪುದಲ್ತೆ ಕಾಲ್ಗಳ ಬೀಸಿ?
ನರನುಂ ಭವಶರಧಿಗೆ ಬೀ-
ಳ್ದಿರೆ ಪೊರಡಲ್ ಹವಣಿಸದೊಡೆ ಪಶುವಿಂ ಕೀಳಂ ||೧೩೯||

ಮಾನವಜನ್ಮವ ಪಡೆದಿಹೆ-
ನಾನುಣ್ಣಲ್ ತಿನ್ನಲೆಂದೊಡದು ಸಾರ್ಥಕಮೇಂ?
ಆನೆ ಕುಜಾತನೆ ತಿಂಗುಂ;
ನೀನಾದೊಡಮಾನೆಯಾಗಲಧಿಕನೆ ತಿಂಬೈ ||೧೪೦||

ಮನುಜರೊಳೊಗೆದೆಂ ಪಡೆಯು-
ಲ್ಕಣುಗರನೇಕರನೆನಲ್ಕೆ ಸಾರ್ಥಕಮೇಂ? ಪೇಳ್
ಮನುಜರೊಳೊಗೆಯುದೆ ಪಂದಿಯು
ಜನುಮದೊಳುದಿಸಿದೊಡೆ ಪತ್ತುಪತ್ತನೆ ಪಡೆವೈ ||೧೪೧||

ಪಿಂದೆಸಗಿದ ಕರ್ಮಫಲಂ
ಬಂದೊದಗುವದೆಲ್ಲಿ ಜನಿಸಿದೊಡಮೆಲ್ಲಿರಲುಂ;
ಪೊಂದುಗುಮೆಳಗರು ತಾಯನೆ
ನಿಂದೊಡಮಾ ತಾಯಿ ಸಾಸಿರಾಕಳವಿಂಡೊಳ್ ||೧೪೨||

ಕರ್ಮಮದುತ್ಕಟಮಾಗಿರ-
ಲೊರ್ಮೆಯೆ ಫಲಿಕುಂ; ವಿಲಂಬಮೇಕಡಿಗೆರಗಲ್
ಪೆರ್ಮಿಗನೊಲಿವಂ ಕೂಡಲೆ;
ಮಾರ್ಮಲೆವಂ ಬಡಿವನೊಡನೆ ಬೈದೊಡೆ ತಡವೇ? ||೧೪೩||

ಬಲುಹಿನ ಪಾಪಕ್ಕೊಡನೆಯೆ
ಫಲಮಕ್ಕುಂ; ಪಾಪಮಲ್ಪಮಿರೆ ಕಾದಿರ್ಕುಂ;
ಸುಲಿವಂ ಬಲಯುತನಿರಲೂ-
ರ್ಕೆಲದೊಳೆಯಲ್ಲದೊಡೆ ಹಾದಿಗಾಯ್ವಂ ಕಳ್ಳಂ ||೧೪೪||

ಅರಸಂ ಗೈಯುದೆ ಮನುಜರ್
ಪರಿಯಲ್ ವಿಷಯಕೆ ಮಹಾಮಹಿಮರೊಲಿದಪರೇ?
ಕರಿಯಂ ಮಾರ್ಗೊಟ್ಟು ನರಂ
ಖರನಂ ಕೊಳೆ ಜಗದ ನಗೆಗೆ ಪಕ್ಕಾಗಿರನೇಂ? ||೧೪೫||

ವಿಷಯುದ ಕೇಡರಿಯುದ ನರ-
ಪಶುವಿಗೆ ಪಶುಪತಿಯ ಭಕ್ತಿಪಾಶವೆ ವಿಹಿತಂ;
ಬಿಸವೆಂದರಿಯದೆ ಕಂಡೊಡೆ
ಪಸುರ್ಗಂ ಪಶುವೋಡೆ ಕಾಯ್ದುಗ್ಗವೋವನ ಬಂಧಂ ||೧೪೬||

ಜಡನಾದೀ ನರನಾ ಜಗ-
ದೊಡೆಯನ ಮಹಿಮೆಯ ಗುಣಂಗಳಂ ತಿಳಿದಪನೇ?
ತಡೆಯಲಿ ನಿಂತು ನರಂ ಪೆ-
ರ್ಗಡಲೊಳ್ ಪೊಳೆವಲೆಗಳೆಣಿಕೆ ಮಾಡಲ್ಕಹುದೇ? ||೧೪೭||

ನಿರವಯವನಿರಾಕಾರಂ
ತರತರನಾಗಿಹನುಪಾಧಿವಶದಿಂ ದೇವಂ;
ಶರದಗಳೀವಂಬುಗೆ ರುಚಿ-
ಯಿರುವುದೆ? ನೆಲಮಿರ್ದ ತೆರದಿ ಸೀಕಹಿಯಕ್ಕುಂ ||೧೪೮||

ಅಳವೇಂ ಬುಧಂಗುಮಭವನ
ತಿಳಿದರಿಯಲ್? ಬರಿದೆ ತಿಳಿವೆನೆಂಬುದು ಮೌಢ್ಯಂ;
ಜಲದಲಿ ತೋರುವ ಚಂದ್ರನ
ಕಲೆಗಿಕ್ಕುವನೇನೊ ಕರವ ಕಂದನೊ ಬುಧನೋ? ||೧೪೯||

ಅರಸನ ಕೃಪೆಯಿರೆ ಬಡತನ-
ಮಿರಲೇಂ? ವಾರಣವನೇರೆ ಸೊಣಗನ ಭಯಮೇಂ?
ಧರಿಸಿರೆ ಜಗದೆರೆಯನ ಪದ-
ಸರೋಜ ಭಕ್ತಿಯನೆ ಮನದಿ ಭವದಂಜಿಕೆಯೇ? ||೧೫೦||

ಗೂಗೆಗೆ ನೇಸರಬೆಳಗುಂ,
ಮೂಗಿಲ್ಲದವಂಗೆ ರನ್ನಗನ್ನಡಿಯುಂ, ಮೇಣ್
ರೋಗಿಗಿದೌಷಧಮುಂ, ಭವ-
ಭೋಗಿಗೆ ವರದೈವಭಕ್ತಿ ಸೇರ್ಗುಮೆ ಸತತಂ? ||೧೫೧||

ಹರನಂ ಪೂಜಿಸಲೆನಿತೇಂ
ಗುರುವವಗೀಯದೊಡೆ ಹರನ ನೋಳ್ಪೊಳಗಣ್ಣಂ?
ಕರದೊಳ್ ಕಣ್ಣಲಿ ಮುಕುರವ
ಧರಿಸಿದೊಡೇಂ ತನ್ನರೂಪನವನರಿದಪನೇ? ||೧೫೨||

ಮಸ್ತಕದೊಳ್ ಸದ್ಗುರುವಿನ
ಹಸ್ತಂ ಮೂಡಿರೆ ಪುನೀತನಾಗನೆ ಮನುಜಂ?
ಪ್ರಸ್ತರಮುಂ ಸತ್ಪುರುಷನ
ಹಸ್ತದಿ ಸಂಸ್ಥಾಪಿಸಲ್ಕೆ ದೈವಮೆನಿಸದೇಂ? ||೧೫೩||

ವೇದದೊಳಿಹ ಶಿವಮಂತ್ರವ-
ನೋದಿದೊಡಾಯ್ತೇಕೆ ಗುರುವೆನಲ್ ಫಲಿಕುಮೆ? ತಾ-
ನೈದುತಲೀಂಟಲ್ ಸವಿಯೊ ಪ-
ಯೋಧಿಯ ಜಲಮಂ, ಘನಂಗಳೀಯಲ್ ಸವಿಯೋ? ||೧೫೪||

ಪೊಂದರವಿನ ಗುರುವಂ; ತೊರೆ
ಮಂದಿಯು ಮರುಳ್ಗೊಳಿಪ ಬಾಯಪೇದದ ನರನಂ;
ಅಂಧನ ಹಿಂಬಾಲಿಸಿದೊಡೆ
ಪೊಂದುಗುಮೊಂದಗಳತಮನೆ; ಬನ್ನಂಬಡೆಗುಂ ||೧೫೫||

ಬಗೆಗೊಳಿಸುವ ಮೇಲ್ವಾತಿಂ-
ದೊಗೆವುದೆ ಸಮ್ಮುಖದಿ ತನ್ನ ಸೊಗದೋರ್ವುದರಿಂ-
ದೊಗೆವುದೆ ಗುರುಕಾರುಣ್ಯಂ?
ಬಗೆ ಬೇರಾಗಿರಲದೆಂತು ದೊರೆಗೊಳ್ಗುಂ? ಪೇಳ್ ||೧೫೬||

ಓಸರಿಸದಿರೆ ಮನಂ ಶು-
ಶ್ರೂಷೆಯನೆಸಗಲ್ ಪ್ರಸನ್ನನಪ್ಪಂ ಗುರುವುಂ;
ಬೇಸರದಾಸಕ್ತಿಯೊಳ-
ಭ್ಯಾಸಿಸುವಂಗಾವ ವಿದ್ಯೆಯುಂ ದೊರೆಗೊಳ್ಗುಂ ||೧೫೭||

ಅಡಗಲೊಡಂ ಮನಮಚ್ಚಿ-
ರ್ದೊಡವೆಗಡಂ ಮರುಳನದಕೆ ಕಡುಮರುಗಿದಪಂ
ಜಡವಾದೊಡವೆಗೆ ಮರುಗದೆ-
ಯುಡುಗುವರದರೊಡನೆ ಮನದ ಮೋಹವ ಸಂತರ್ ||೧೫೮||

ಮನವೊಲಿದೊಡವೆಗಳೆಂತುಂ
ವಿನಾಶಮಪ್ಪುದೆ ನರಂಗೆ ಮೋಕ್ಷಕೆ ಸಾಯುಂ;
ಮನಮಿಚ್ಛಿಸಿದುದು ದೊರೆವುದು
ಧನಮುಗ್ಗಳಮಪ್ಪುದಂತೆ ಬಂಧನಗೆಯ್ಗುಂ ||೧೫೯||

ವಿಷಯಕೆ ಮಾಯಾಗೇಹಮ
ನೊಸೆದೊಳಸೇರ್ವಂ ವಿನಾಶನಪ್ಪದೆ ಮಾಣಂ;
ನಶಿಸದೆ ಬಿಡಾಲಮದು ಮೋ-
ಹಿಸಿ ಪಾಲಂ, ಘಟದಿ ತಲೆಯನಿಡೆ ಬಡಿಗೋಲಿಂ? ||೧೬೦||

ಮಿರುಪ ಸುರೂಪಕೆ ಮೋಹಿಸ
ದಿರವೇಳ್ಕುಂ; ಚೆಲ್ವು ಬಲಿದ ಮೋಸದ ಜಾಲಂ;
ಗರಿವೂವುಂ ಹರಣವಸಪ-
ಹರಿಪುಗ್ರೋರಗದ ನಿಲಯಮಾದುದನರಿಯಾ? ||೧೬೧||

ಕಲೆತೊಡೆ ವಿಷಯಂ ಮನದೊಳ್
ಕಲುಷಿತಮಪ್ಪುದು ನಿರೀಕ್ಷಿಸುವ ಶಿವನೊಲಿಯಂ;
ಜಲದೊಳ್ ಮಣ್ಣೂಡಲೊಡಂ
ವಿಲೋಕಿಪರದಂ ವಿಸರ್ಜಿಪರೊ ಕೊಂಡಪರೋ? ||೧೬೨||

ಹೊಳೆವ ಮನೋಹರ ರೂಪದೊ-
ಳಳಿಯಾಸೆಯನಿರಿಸಲದುವೆ ದುಕ್ಕಂಗೊಳಿಕುಂ;
ಹಳದಿಯ ಬಣ್ಣದ ಹೂವೆಂ-
ದಳಿಯಾ ಪೊಂಬಟ್ಟನೆರಗಿ ಕಳವಳಗೊಳ್ಗುಂ ||೧೬೩||

ಪಿಂಗದೆ ಪಡೆವೆಂ ಮೋಕ್ಷವ-
ನೆಂಗುಂ ಕರ್ಮವನೆ ಗೆಯ್ಯುಗೆತ್ತಣ ಮತಿಯೋ?
ತಿಂಗುವೆ ಬಿದಿಗೋರ್ಜಲಂ ತಾ-
ನಿಂಗೋಲಿನ ಸವಿಯ ಬಯಸಿ? ಮೂಢತೆಯಲ್ತೆ? ||೧೬೪||

ತನಗೆಂದೆಸಗದೆ ಜಗದೆರೆ-
ಯನ ವಿಧಿಯೆಂದೊಸೆದು ದುಡಿಯೆ ಭವಮಂ ಗೆಲ್ವಂ;
ವನಧಿಯ ದಾಂಟಿದ ಹನುಮಂ
ತನಗೆಂದನೊ ರಾಘವೋತ್ತಮಂಗೆಂದನೊ? ಪೇಳ್ ||೧೬೫||

ಮಾಯೆಯ ಗೆಲ್ದಿಹೆನೆನ್ನುತೆ
ಬಾಯಿಂ ನುಡಿದಪನದಾವನವನಂ ನಿಜದಿಂ
ಮಾಯೆಯೆ ಗೆಲ್ದಿಹುದೇಕೆನೆ
ಮಾಯಾಬಲದಿಂದೆ ನುಡಿವನವನೀ ನುಡಿಯಂ ||೧೬೬||

ಒದವುದೆ ತಿಳಿಯೊಳಗರಿಯದೆ?
ಪೊದೆದೊಡಮೋದಿದೊಡಮೇನೊ ವೇದಾಂತಗಳಂ?
ಮಧುರಕ್ಷೀರದಿ ತಲೆಮುಳು-
ಗಿದ ಸಟ್ಟುಗಮದರ ಸ್ವಾದನರಿದಪುದೇಂ? ಪೇಳ್ ||೧೬೭||

ಅರಿದನುಭವದಿಂದಲ್ಲದೆ
ಬರಿದೆ ವಿವೇಚಿಪೊಡೆ ಪರನ ಭವಮಳಿದಪುದೇ?
ಅರಮನೆಯೂಟದ ಪರಿಯಂ
ತಿರುಕರ್ ನೆರೆದಾಡಲೇನೊ ಪಸಿವಳಿಗುಮೆ? ಪೇಳ್ ||೧೬೮||

ಅಂಗನೆಯೊಂದಮುಳಿದು, ಜನ–
ಜಂಗುಳಿಯಿಂ ಪೂಜೆಗೊಳ್ವ ಯತಿಗೆಂತಮೃತಂ?
ಬಂಗಾರದ ಸಂಕೋಲೆಯ–
ನಂಗದಿ ಕೊಂಡಂತೆ ಕಳೆದು ನೂಲೆಳೆಗಟ್ಟಂ ||೧೬೯||

ನೆಮ್ಮದ ಸತೀಸುತರ ತೊರೆ–
ದೊಮ್ಮೆಲೆ ಯತಿಯಪ್ಪುದಲ್ತು ಪೆಸರಂ ಪಡೆಯಲ್;
ಎಮ್ಮೆಯು ತುಳಿತಕ್ಕಳ್ಕುತೆ,
ಗಮ್ಮನೆಯಡಗಿದಪನಾನೆಗಾಲೊಳ್ ಮೂರ್ಖಂ ||೧೭೦||

ಪಲವಿಷಯಂಗಳಲಿ ಮನಂ
ಸಿಲುಕಿರಲದನೊರ್ಮೆಗೆಳೆಯೆ ವಿರತಿಗೆ ಕಿಡಿಕುಂ
ಸಿಲುಕಿದ ಪೊದೆವಂಬರಮಂ
ಸೆಳೆವುದೊ ಮುಳ್ಗಂಟಿಯಿಂದ ನಡೆಬಿಡಿಸುವದೋ? ||೧೭೧||

ತಾಳದೆ ತನಗೊದಗಿದ ಬಾ–
ಳ್ಗೋಳಂ, ಯತಿಯೆಂದು ನಡೆಯಲಡವಿಗೆ ತೆರಪೆ?
ಗಾಳಿಮಳೆಗಳಿಂದಳ್ಕುತೆ
ಕೂಳಿಗೆ ಮರುಳ್ವಂ; ವಿಮೋಹಿತಂ ಯತಿಯೆಂತೈ? ||೧೭೨||

ಶಾಪಾನುಗ್ರಹಶಕ್ತಿಯು–
ನಾ ಪರತರಯೋಗಿ ಬಳಸೆ ನೂನತೆಯಕ್ಕುಂ;
ಶಾಪಾನುಗ್ರಹದೊಳ್ ಪ್ರ–
ಸ್ಥಾಪಿತಮಿಹ ದ್ವೇಷರಾಗಗಳ್ ಭವಬೀಜಂ ||೧೭೩||

ಉಳಿದು ಪ್ರಪಂಚದ ಮೋಹವ,
ತಿಳಿವೆಳಗರಿದಮಲಯೋಗಿ ಮರಳ್ವನೆ ಭವಕೆ?
ತೊಲಗಿದ ಪರೆಯಂ ಸರ್ಪಂ
ತಳೆಯಲ್ ಬಯಸುವುದೆ ತಿರುಗಿ ಜಡಮೆಂದರಿದುಂ? ||೧೭೪||

ಭಾವಂ ಬಯಲಾಗಿರಲಾ
ಜೀವನ್ಮುಕ್ತಗೆ ಶರೀರದಿಂ ಬಂಧನಮೇಂ?
ಪಾವಕಗೆ ಬೆಂದ ಬೀಜಂ
ಬೂವಿಯೊಳಂ ಬಿತ್ತೆ ಮೊಳೆವುದೇಂ ಬೆಳೆಯುವವೇ? ||೧೭೫||

ಧರೆಯೊಳ್ ಮೆರೆದ ಮಹಾಕವಿ-
ವರರೂಳಿಗನೆನಿಪ ಲಕ್ಕಣಂ, ಮೊದಲಾರ್ಯರ್
ಒರೆದಾಚರಿಸಿದ ನೀತಿಯ
ವರವಚನಂಗಳನೆ ಕಂದಛಂದದೊಳುಸುರಲ್ ||೧೭೬||

ಎಸೆದುದು ಕನ್ನಡಿಗರ ಕರ-
ಬಿಸಜದೊಳೀ ಮಾಲೆಯೈದನೆಯ ವತ್ಸರದೊಳ್
ಶಶಿವಾರದ ಶ್ರಾವಣಸಿತ-
ದೆಸೆವ ಚತುರ್ಥಿಯ ಸುಪರ್ವಕಾಲದಿ ಜಸದಿಂ ||೧೭೭||

**ಸಮಾಪ್ತಂ**

# ಕಠಿಣ ಪದಗಳ ಅರ್ಥ

೧ ಒಸೆ = ಮೆಚ್ಚು, ದಶನ = ಹಲ್ಲು, ಅಂಶು = ಕಿರಣ, ಅನಿಶ=ಯಾವಾಗಲು.

೨ ತೊಡ = ಆಭರಣ, ನಡೆ = ಚನ್ನಾಗಿ, ಕೈಗೈಸಿ ಸಿಂಗರಿಸಿ, ವಿಶ್ರುತ = ಪ್ರಸಿದ್ಧ, ನಲಿ = ಆನಂದಪಡು.

೩ ಶಿಶುವಾಲ್ಮೀಕಿ = ಕುಮಾರ ವಾಲ್ಮೀಕಿ, ಜಗತ್+ನುತ.

೪ ಮಹಿತ = ಪೂಜ್ಯ, ನಿಸದ = ನಿಶ್ಚಯು.

೫ ಅಗ್ಗಳ = ಬಹಳ, ಅಳವು = ಸಾಮರ್ಥ್ಯ, ಕಬ್ಬಿಗ = ಕವಿ, ಬಿತ್ತಿಗ=ಜಾಣ, ಬಿತ್ತರ (ದ್ಭ) = ವಿಸ್ತಾರ(ತ್ಸ).

೭ ಬಳಯಿಗೆ = ಪತಾಕೆ (ನಿಶಾನೆ).

೮ ತನತು = ತನ್ನದು, ಗಾಂಪ = ದಡ್ಡ.

೯ ಒಗಡಿಸು = ನಿರಾಕರಿಸು, ಪಣ್ಯಾಂಗನೆ = ವೇಶ್ಯೆ.

೧೦ ಉದಿತ = ಹೇಳಲ್ಪಟ್ಟ.

೧೧ ನಲ್ = ಒಳ್ಳೇ, ಕಬ್ಬ (ದ್ಭ) = ಕಾವ್ಯ (ತ್ಸ), ಬಳಬೆ = ಬಣವೆ.

೧೪ ಎಡರ್ = ಕಷ್ಟ, ಧುರ = ಯುದ್ಧ, ಬಾಳಿಗೆ = ಸಂಸಾರಕ್ಕೆ.

೧- ಮಾರ್ಕೊಳ್ಳು = ಎದುರಾಗು.

೧೭ ಕಜ್ಜ (ದ್ಭ) = ಕಾರ್ಯ (ತ್ಸ), ನೀಡುಂ = ಬಹಳವಾಗಿ, ನಾಡೆ = ಚನ್ನಾಗಿ.

೧೯ ನಿಮಿರು = ಚಾಚು, ಬೆರ್ಚು = ಬೆದರು.

೨೦ ಬಾರಿಸು = ಹೋಗಲಾಡಿಸು.

೨೨ ಒಳ್ನಡೆ = ಸದ್ವರ್ತನ, ಬೆಳಗದಿರ = ಚಂದ್ರ, ಕುಳಿರ್+ಅರೆ = ತಂಪುಕಲ್ಲು (ಚಂದ್ರಕಾಂತಶಿಲೆ).

೨೪ ಅಲಗು ಅಲ್ಲಾಡಿಸು, ಎನಿಸಾನುಂ = ಸ್ವಲ್ಪಾದರೂ.

೨೬ ಒಡರ್ಚು = ತಗಲಿಸು, ಮಡುಗು = ಅಡಗಿಸು.

೨೮ ನೇರಿದರ್ = ಸರಳಸ್ವಭಾವದವರು, ನಯ = ನೀತಿ.

೨೯ ಪೆರನಡೆ = ಮತ್ತೊಬ್ಬರ ನಡತೆ, ಕರೆ = ದೋಷ.

೩೦ ಪೇರ್ = ದೊಡ್ಡ (ದೊಡ್ಡದು), ಇನಿ = ಸವಿ.

೩೨ ಇನಿತಂ = ಸ್ವಲ್ಪನ್ನು, ತಣಿ = ತೃಪ್ತಿಗೊಳ್ಳು, ಘನ = ಮೋಡ.

೩೪ ಪಳಂಚು = ಒರಸು, ನಿಕರ = ಸಮೂಹ.

೩೫ ಸಮೆ = ಮಾಡು, ಸುಮ = ಹೂ, ಇರುಂಪೆ = ಇರುವೆ.

೩೬,೩೭ ಪೊರೆ = ಸಮೀಪ, ವಣಿಜಂ = ವರ್ತಕ.

೩೮ ಅತಿಕ್ರಮಿಸು = ಮೀರು, ಜಸ (ದ್ಭ) = ಯಶ (ತ್ಸ), ಕ್ಷಿತಿಧರ=ಪರ್ವತ, ಅವ್ವಳಿಸಿ=ಪ್ರಯತ್ನಿಸಿ, ಜಳಧರ=ಮೋಡ.

೩೯ ತೊನೆ=ತೂಗು, ನಗ=ಪರ್ವತ.

೪೨ ಪರನ=ಪರಮಾತ್ಮನ, ಕಿಡಿಕುಂ=ಕೆಡಿಸುವುದು.

೪೩ ಅಗಿ = ಕಚ್ಚು, ಉಸಿಕನೆ=ಸುಮ್ಮನೆ, ತಗುಗುಂ=ತಕ್ಕದ್ದು.

೪೭ ಎಡರಾಳಿ=ವೈರಿ.

೪೮ ಪದುಳ=ಸೌಖ್ಯ, ತುರುಗಿದ=ದಟ್ಟಾಗಿ ತುಂಬಿದ.

೫೧ ಬಿದಿ (ದ್ಭ)=ವಿಧಿ (ತ್ಸ), ವ್ರಣ=ಹುಣ್ಣು, ವಾಯಸ=ಕಾಗೆ.

೫೨ ಎನಿಸುಂ = ಎಷ್ಟಾದರೂ, ಮಾಣಂ = ಬಿಡನು.

೫೬ ಪದಿಟೆ (ದ್ಭ) = ಪ್ರತಿಷ್ಠೆ (ತ್ಸ), ಒಸಮೆ = ದುಃಖ.

೫೭,೫೮ ಪಲಲ=ಮಾಂಸ, ತಲ್ಲಳ=ಸಂಕಟ.

೫೯,೬೦ ಪೊರುಳ್ = ಧನ (ಅರ್ಥ), ನೇಹ = ಸ್ನೇಹ.

೬೧ ನಲುವು = ಸಂತೋಷ, ಅಳಲು = ದುಃಖ.

೬೨,೬೩ ಅನಿಲ=ಗಾಳಿ, ಆರ್ದು=ಕೂಗಿ, ಯಾತ=ಮೊಟ್ಟೆ.

೬೪ ಅಸತೀ=ಸೂಳೆ, ಗೇಹ=ಮನೆ.

೬೫ ಸುಲಲಿತ = ಚಂದ, ತೊಲಗು=ಅಗಲು, ಮಾರ್ದವ=ಮೃದುತ್ವ.

೬೬ ಉಜ್ಜಳ (ದ್ಭ)=ಉಜ್ವಲ (ತ್ಸ), ಬಿಜ್ಜೆ (ದ್ಭ)=ವಿದ್ಯಾ (ತ್ಸ).

೬೭,೬೮ ಬಿಸ (ದ್ಭ)=ವಿಷ (ತ್ಸ), ಕಡವರ=ಬಂಗಾರ.

೭೦ ತಿರ (ದ್ಭ)=ಸ್ಥಿರ (ತ್ಸ), ಸೊಗಸು=ಸುಖ, ಅಂಬುದ = ಮೋಡ.

೭೨ ಅಂಡಿಸಿ = ಅಡಗಿ, ಪೆರಸಾರಿ = ಬೇರೆಹೋಗಿ.

೭೪ ಅಣುಗ = ಮಗ, ಅಳ್ಕಿನಿಂ = ಅಂಜಿಕೆಯಿಂದ.

೭೬ ಬಂಡು = ಹೂಹುಡಿ, ಪರಮೆ = ಭ್ರಮರ, ಇರ್ಕುಂ=ಇರುವುವು.

೭೭,೭೮ ಬಗೆ = ಹುಟ್ಟು, ಗರಲ = ವಿಷ.

೮೦,೮೧ ಏಗಳುಂ = ಯಾವಾಗಲೂ, ನಚ್ಚು = ನಂಬು.

೮೨ ಬಿಳುದಾವರೆ = ಕುಮುದ, ಚಳಿಗದಿರ = ಚಂದ್ರ, ಬೆಳ್ಪು = ಬಿಳೀತನ.

೮೭ ಕಡುಪು = ಅತ್ಯಾಶೆ, ಕಡುಸರಿ = ದೊಡ್ಡ ಮಳೆ, ಬೇಗೆ = ಕಾಡಾಗ್ನಿ.

೮೯ ಎರೆಯು = ಒಡೆಯ.

೯೧ ಕಲಾನಿಧಿ = ವಿದ್ವಾಂಸ, ಅರಿಲ್ಗಳ್ = ನಕ್ಷತ್ರಗಳು.

೯೨ ಪೊರ್ದು = ಹೊದ್ದು (ತಗಲು), ನೆರೆ = ಕೂಡು, ಕರ್ಚು = ತೊಳೆ.

೯೩ ನಾಣ್ = ನಾಚಿಕೆ, ನಾಣಿಲಿ = ನಾಚಿಕೆಯಿಲ್ಲದವಳು.

೯೪ ಗರತಿ (ದ್ಭ) = ಗೃಹಸ್ಥಿ (ತ್ಸ), ಐದೆದಾಳಿ = ಮಂಗಲಸೂತ್ರ.

೯೬ ಮಖ = ಯಜ್ಞ, ಎಳ+ಪರಯ = ನವಯೌವನ.

೧೦೧ ತನಿವಣ್ = ರಸವತ್ತಾದಹಣ್ಣು, ಮಲರ್ = ಹೂವು.

೧೦೨,೧೦೩ ಪೆಂಪು = ಪ್ರಸಿದ್ಧಿ, ಬಿಡಾಲ = ಬೆಕ್ಕು.

೧೦೪,೧೦೫ ಕೂರ್ತು = ಪ್ರೀತಿಸಿ, ಇಂಗಡಲ್ = ಕ್ಷೀರಸಮುದ್ರ, ಇನಿದು+ಕಡಲ್.

೧೦೬ ವಾಗೀಶ = ಮಾತಿನಲ್ಲಿ ಜಾಣನಾದವ, ವಿಹಗ = ಪಕ್ಷಿ.

೧೦೭ ತಳೆ = ಧರಿಸು, ಸೌಸವ = ಸುಗಂಧ.

೧೦೮ ಪೊಡೆ = ಹೊಟ್ಟೆ, ನಲ್ಲುಣಿಸು = ಸವಿಯೂಟ.

೧೦೯,೧೧೦ ಸಂಸೃತಿ = ಸಂಸಾರ, ಬಲ್ಲಾಳ್ತನ = ಪರಾಕ್ರಮ.

೧೧೪,೧೧೫ ಭೀರುತನ = ಅಂಜುಬುರುಕತನ, ನೀರದ = ಮೋಡ.

೧೧೬ ಅಭಿಸಾರಿಕೆ = ಪ್ರಿಯನಿಗಾಗಿ ಸಂಕೇತಸ್ಥಳಕ್ಕೆ ಬರುವವಳು.

೧೧೭,೧೧೯ ಕಳಮೆ = ಭತ್ತ, ಮರಗೂಳ = ಅಗ್ನಿ (ಮರವೇ ಕೂಳಾಗಿ ಉಳ್ಳದ್ದು).

೧೨೩ ಏವುದು = ಏನುಮಾಡುವುದು.

೧೨೪,೧೨೫ ಅಮರ್ದು = ಅಮೃತ, ತಕ್ರ = ಮಜ್ಜಿಗೆ.

೧೨೭ ಅನಲ = ಬೆಂಕಿ, ಇಂಧನ = ಉರುವಲ.

೧೨೮ ಜಂಜಡ = ಚಿಂತೆ, ಎಯ್ದಿಸು = ಹೊಂದಿಸು (ಉಂಟುಮಾಡು).

೧೨೯,೧೩೦ ಉಚ್ಚಂಡ = ಬಲಿಷ್ಠ, ಮಚ್ಚು = ಒಲಿ, ಕಲೆ = ಕೂಡು.

೧೩೧ ಗದಿರು=ಪ್ರಕಾಶ, ಪದಿಬದೆ (ಧ್ವ)=ಪತಿವ್ರತೆ (ತ್ಸ), ಗದಿಮಿಸಿ=ಬೆದರಿಸಿ, ಗದಿಪು=ಸಮುದಾಯು.

೧೩೨ ಸಿರಿವೋದ=ಐಶ್ವರ್ಯವನ್ನು ಕಳೆದುಕೊಂಡವ, ಇನಿಯ=ಪ್ರಿಯ(ಗಂಡ), ನೆರೆವೆರೆ=ಪೂರ್ಣ ಚಂದ್ರ, ಅವಸೆ (ಧ್ವ) = ಅಮಾವಾಸೆ (ತ್ಸ), ಪೆರೆ= ಚಂದ್ರ.

೧೩೪ ನಲ್ಲ=ಗಂಡ, ನಲ್ಲಳ್=ಹೆಂಡತಿ, ಅಘ=ಪಾಪ.

೧೩೭ ಹೊಳೆಯ+ಅಣ್ಮ=ಸಮುದ್ರ, ಎತ್ತಾನುಂ=ಯಾವ ಕಡೆಗಾದರೂ.

೧೩೮ ಉಚ್ಚತಮ=ಎಲ್ಲಕ್ಕೂ ಶ್ರೇಷ್ಠ, ಅಚಲಾನಂದ=ನಿತ್ಯಾನಂದ.

೧೪೦,೧೪೧ ಕುಜಾತ=ಗಿಡ, ಅಣುಗರ್=ಮಕ್ಕಳು.

೧೪೩ ಪೆರ್ಮಗ=ದೊಡ್ಡ ಮನುಷ್ಯ, ಮಾರ್ಮಲೆ=ಸೊಕ್ಕಿನಿಂದ ವರ್ತಿಸು.

೧೪೫ ಅರ=ಧರ್ಮ, ಖರ=ಕತ್ತೆ, ಪಕ್ಕಾಗು=ಪಾತ್ರನಾಗು.

೧೪೬ ಓವನ=ಕಾಯುವವನ, ಬಂಧ=ಹಗ್ಗ (ಕಟ್ಟೋಣ).

೧೪೭ ತಡೆ= ದಂಡೆ, ಅಲೆ=ತೆರೆ.

೧೪೮ ಶರದ=ಮೋಡ, ಅಂಬುಗೆ=ನೀರಿಗೆ.

೧೫೦ ವಾರಣ=ಆನೆ, ಸೊಣಗ=ನಾಯಿ, ಭವ=ಸಂಸಾರ.

೧೫೩ ಪುನೀತ=ಪವಿತ್ರ, ಪ್ರಸ್ತರ=ಕಲ್ಲು.

೧೫೪,೧೫೫ ಪಯೋಧಿ=ಸಮುದ್ರ, ಅಗಳತ = ಕಂದಕ.

೧೫೬,೧೫೭ ಬಗೆ= ಮನಸ್ಸು, ಶುಶ್ರೂಷೆ=ಸೇವೆ.

೧೫೮,೧೫೯ ಉಡುಗು=ಏನೂ ಇಲ್ಲದಂತೆ ಮಾಡು, ಅಗ್ಗಳ=ಬಹಳ.

೧೬೦ ಮಾಯಾ=ಅಜ್ಞಾನ [ಭ್ರಾಂತಿ, ಸುಳ್ಳು.]

೧೬೧ ವಿರುಪ=ಹೊಳೆಯುವ, ಗರಿವೂವು=ಕೇದಗೆ.

೧೬೨ ವಿಲೋಕಿಪರ್=ನೋಡುವವರು, ವಿಸರ್ಜಿಸು=ಬಿಟ್ಟುಬಿಡು.

೧೬೩ ಅಳಿಯಾಸೆ=ದುರಾಶೆ, ಪೊಂಬಟ್ಟ=ಬಂಗಾರದ ದುಂಡನ್ನ ತಗಡು.

೧೬೪ ಎಂಗುಂ=ಎನ್ನುವುದು, ಇಂಗೋಲು=ಕಬ್ಬು.

೧೬೭ 'ಒಳಗೆ ಅರಿಯದೆ ತಿಳಿ ಒದವುದೆ?' ಎಂದನ್ವಯವು.

೧೬೯ ಜಂಗುಳಿ=ಸಮುದಾಯ, ಅಮೃತಂ=ಮೋಕ್ಷವು, ಸಂಕೋಲೆ=ಅಪರಾಧಿಯ ಕೈಕಟ್ಟು.

೧೭೦ ನೆಮ್ಮು=ನಂಬು, ಗಮ್ಮನೆ=ಬೇಗನೆ.

೧೭೧ ಪೊದೆವ+ಅಂಬರ=ಹೊದ್ದುಕೊಳ್ಳುವ ವಸ್ತ್ರ.

೧೭೩ ಪರತರಯೋಗಿ=ಬ್ರಹ್ಮಜ್ಞಾನದ ಯೋಗಿ, ಬಳಸೆ=ಉಪಯೋಗಿಸಲು, ಪ್ರಸ್ಥಾಪಿತಮಿಹ=ಸ್ಥಿರವಾಗಿ ಮಾಡಲ್ಪಟ್ಟ, ರಾಗ=ಮೋಹ (ಪ್ರೀತಿ).

೧೭೪ ಪಾವಕ=ಅಗ್ನಿ, ಬೂಮಿ (ದ್ಭ)=ಭೂಮಿ (ತ್ಸ).

೧೭೬ ಊಳಿಗ=ಸೇವಕ.

೧೭೭ ಐದನೆಯ ವತ್ಸರ=ಅರವತ್ತು ಸಂವತ್ಸರಗಳ ಕ್ರಮದಲ್ಲಿ ಐದನೆಯದಾದ ಪ್ರಜೋತ್ಪತ್ತಿನಾಮ ಸಂವತ್ಸರ, ಶ್ರಾವಣಸಿತದ=ಶ್ರಾವಣ ಶುಕ್ಲಪಕ್ಷದ.

# "ನೂರೊಂದು ನೆಲೆಯ ನಿಲವು"

## ಅಂದಿನ ಅಭಿಪ್ರಾಯಗಳ ತಿರುಳು:

ಶಿವಾದ್ವೈತ ಸಿದ್ಧಾಂತ ಶಿಖರವನ್ನೇರಲು, ಷಟಸ್ಥಲ ಸಂಪ್ರದಾಯವು ವೀರಶೈವರಿಗೆ ನಿತ್ಯಸತ್ಯ ಮಾರ್ಗ. ಅದರಲ್ಲಿಯು ಆತ್ಮ ವಿಕಾಸದ ಹಂತದಂತಿರುವ ನೂರೊಂದು ನೆಲೆಗಳ ನಿಲುಮೆಗಳನ್ನು ಒಂದೊಂದು ಪದ್ಯಗಳಿಂದ ಪರಿಚಯು ಮಾಡಿಕೊಡುವ ತತ್ವಕಾವ್ಯವನ್ನು ಶಿಷ್ಯ ಶ್ರೀ ಶಿರಹಟ್ಟಿ ಲಕ್ಕಪ್ಪನವರು ಅರ್ಥ ವತ್ತಾಗಿ ರಚಿಸಿರುವರು.

ಏಕೋತ್ತರ ಶತಸ್ಥಲವು ವೀರಶೈವರ ಸಮಗ್ರ ಸಿದ್ಧಾಂತ. ಈ ಅನುಪಮ ಸಿದ್ಧಾಂತ ರಹಸ್ಯವನ್ನು ಹೃದ್ಯವಾಗಿ ನಿವೇದಿಸಿರುವ ಶ್ರೀ ಶಿರಹಟ್ಟಿಯವರಿಗೆ ಶುಭಮಸ್ತು; ಮಂಗಲಮಸ್ತು.

ಸುಕ್ಷೇತ್ರ ಹರಳೇಶ್ವರಾಶ್ರಮ — **-ಶ್ರೀ ಶಾಂತವೀರ ಸ್ವಾಮಿಗಳು**
ದಿನಾಂಕ: ೧೧-೧-೧೯೬೫

ನೂರೊಂದು ನೆಲೆಯ ತತ್ವ ಕೇವಲ ಆಕಾಶಪುಷ್ಪವಲ್ಲ; ಕಾಲ ಕಳೆವ ವಿನೋದ ಕಥಾಲಾಪವೂ ಅಲ್ಲ. ಕಾರ್ಯಕಾರಣಗಳ ಸಮ್ಮಿಲನದ ಸೌಂದರ್ಯರೂಪ, ದಿವ್ಯರಸಾಸ್ವಾದ. ಇಲ್ಲಿ ಗಂಧ-ಶಬ್ದ-ಸ್ಪರ್ಶಗಳೂ ಇವೆ. ಇವೆಲ್ಲ ದಿವ್ಯ ವಾಗಿವೆ; ಚಿನ್ಮಯವಾಗಿವೆ.

ಷಟಸ್ಥಲ ಸಿದ್ಧಾಂತ ರಹಸ್ಯವನ್ನರಿತ ಶ್ರೀ ಲ. ಹ. ಶಿರಹಟ್ಟಿಯವರು ಆತ್ಮಗುರು ಪ್ರೇರಿತರಾಗಿ, ಶ್ರೀ ಶಾಂತವೀರ ಮಹಾಗುರು ಕರುಣ ಕಾಂಕ್ಷಿತರಾಗಿ ಸಿರಿಗನ್ನಡ ನುಡಿಗಡಣದಿಂದ ಷಟ್‌ಸ್ಥಲಗಳನ್ನು ಛಂದೋಬದ್ಧವಾಗಿ ಸೂತ್ರಿ ಸಿದ್ದಾರೆ. ಷಟ್ಪದಿಯಲ್ಲಿ ವಾರ್ಧಿಕವನ್ನು ಬಳಸಿ ತಮ್ಮ ನಾಮವನ್ನು ತತ್ವಪ್ರೇಮವನ್ನು ವಾಙ್ಮಯ ರೂಪದಲ್ಲಿ ವರ್ಧಿಸಿದ್ದಾರೆ.

ನೂರೊಂದು ಸ್ಥಲಗಳಲ್ಲಿ ಒಂದೊಂದನ್ನು ಒಂದೊಂದೇ ಪದ್ಯದಲ್ಲಿ ಅಳವಡಿಸಿದ ಇವರ ಪಾಂಡಿತ್ಯ ಮೆಚ್ಚುವಂತಹದು. ಪದ್ಯಗಳ ತಿರುಳನ್ನು ಅಲ್ಲಲ್ಲಿ ಸರಳೀಕರಣಗೊಳಿಸಿ ಗದ್ಯದಲ್ಲಿ ಹೇಳಿರುವದು ಸರ್ವರಿಗೂ ಹಿತಕಾರಿಯಾಗಿದೆ. ಒಟ್ಟಿನಲ್ಲಿ ಕೃತಿ ಸುಂದರವಾಗಿದೆ; ಭಾವ ಬಂಧುರವಾಗಿದೆ.

**—ಜ. ಚ. ನಿ.**

ಶ್ರೀ ಲ. ಅ. ಶಿರಹಟ್ಟಿಯವರ 'ನೂರೊಂದು ನೆಲೆಯ ನಿಲವು' ಷಟಸ್ಥಲ ಸಿದ್ಧಾಂತದ ತಿಳಿವಿಗೆ ಶ್ರೇಷ್ಠ ಕೊಡುಗೆಯಾಗಿದೆ. ಸಮಗ್ರ ಸ್ವರೂಪದ ಸಾರವನ್ನು ಕಾವ್ಯದಲ್ಲಿ ನಿರೂಪಿಸಿ ಮಹತ್ಕಾರ್ಯ ಪೂರೈಸಿದ್ದಾರೆ. ಇವರ ಶೈಲಿ, ಕಾವ್ಯ ತನ್ನ ಪ್ರೌಢಿಮೆಯನ್ನು ಈ ಮಹಾ ಕೃತಿಯು ಮೂಲಕ ವ್ಯಕ್ತಪಡಿಸಿದೆ; ಲೇಖಕರು ಅಭಿನಂದನಾರ್ಹರು.

ಬಳ್ಳಾರಿ. **–ವೈ. ನಾಗೇಶಶಾಸ್ತ್ರಿ**

೩೧–೧೨–೧೯೬೪

# ಮುನ್ನುಡಿಯಿಂದ

ನೀತಿಯ ನುಡಿಗಳು ಯಾವ ಕಾಲದಲ್ಲಿಯೂ ಆವಶ್ಯಕಗಳೇ ಸರಿ. ಶಿಕ್ಷಣವು ನೀತಿಯ ಸಾಹಚರ್ಯಕ್ಕೆ ಬೇಸರಗೊಂಡಂತಿರುವ–ಶಿಕ್ಷಣವು ನೀತಿಯನ್ನು ದೂರ ದಲ್ಲಿ ಬಿಡುತ್ತಿರುವ–ಆಧುನಿಕ ಯುಗದ ಘಾತುಕತೆಯನ್ನು (ಸಾರ್ವತ್ರಿಕವಲ್ಲ ದಿದ್ದರೂ ಬಹುಭಾಗದಲ್ಲಿ ಕಾಣಬರುತ್ತಿರುವುದನ್ನು) ನೀಗಬೇಕಾದರೆ "ಓಂ ನಮಃ ಸಿದ್ಧಂ" ಎಂದು ಮಕ್ಕಳಿಗೆ ವಿದ್ಯಾರಂಭವನ್ನು ಮಾಡುವಾಗಲೇ "ತನ್ನಂತೆ ಪರರ ಬಗೆದೊಡೆ ಕೈಲಾಸಬಿನ್ನಣವಕ್ಕು" ಮೊದಲಾದ ತತ್ವಗಳನ್ನೂ, ಪ್ರಾಧಾನ್ಯವಾಗಿ ಅವುಗಳನ್ನನುಸರಿಸಿ ಜೀವನವನ್ನು ಇಟ್ಟುಕೊಂಡಿರುವ ಜೀವಂತ ಆದರ್ಶಗಳನ್ನೂ ಬಾಲಕರಿದಿರಿಗೆ ಇರಿಸುವದರಿಂದ ಸ್ವಲ್ಪವಾದರೂ ಪ್ರಯೋಜನವಾಗದಿರದು. ಆದರ್ಶಪುರುಷರಿಂದಾಗುವ ಕಾರ್ಯವು ಗ್ರಂಥಗಳಿಂದಾಗದೆಂಬದು ನಿಜ; ಆದರೆ ಅವರು ಅಲ್ಪಸಂಖ್ಯಾತರಾಗಿರುವಲ್ಲಿ ಗ್ರಂಥಗಳೇ ಹೆಚ್ಚಿಗೆ ಕೆಲಸಮಾಡುವುವು. ಈ ದೃಷ್ಟಿಯಿಂದ ದೊಡ್ಡ ನೀತಿಗ್ರಂಥಗಳಂತೆ ನೀತಿಮುಕ್ತಾವಲಿಯಂತಹ ಸಣ್ಣ ಪ್ರಕರಣ ಗಳೂ ಉಪಯುಕ್ತವಾಗುವುವು.

ಮಿ. ಶಿರಹಟ್ಟಿಯವರು ಕವಿತಾವಾಙ್ಮಯದಲ್ಲಿ ಹೊಸಬರಾದರೂ ಭಾವನೆ ಹಳದು. ಕೆಲವು ಕಾಲದಿಂದಾದರೂ ಇವರಿಗೆ ರಚನೆಯ ವ್ಯಾಸಂಗವಾಗಿರ ಬೇಕೆಂಬುದನ್ನೂ, ಸ್ಫೂರ್ತಿಯೂ ರಚನಾಶಕ್ತಿಯು ಇವರಲ್ಲಿರುವುವೆಂಬುದನ್ನೂ, ಕವಿತಾರಚನೆಗೆ ಬೇಕಾದ ಸಹೃದಯತೆ ಇವರಲ್ಲಿ ಬಂದಿದೆಯೆಂಬುದನ್ನೂ ಓದುಗರು ಇವರ ಕವಿತೆಗಳಿಂದ ಮನಗಾಣಬಹುದು. ಕವಿಯು ಆರಂಭಕಾಲದಲ್ಲಿ ದೊಡ್ಡ ವರನ್ನು- ಆ ಮಾರ್ಗದಲ್ಲಿ ನುರಿತವರನ್ನು–ಅನುಸರಿಸುವ ಒಲವನ್ನಿಟ್ಟುಕೊಳ್ಳು ವುದು ಸಹಜವು. ತನ್ನಲ್ಲಿ 'ಅಪ್ರತ್ಯಯು'ವಾದ ಮನಸ್ಸು ಹೀಗೆ ಹೋಗುವುದೇನೂ ಅರಿದಲ್ಲ; ಹಾಗೆ ಹೋದುದರಲ್ಲಿ ಗುಣವೇ ಉಂಟಾದಾಗ ಅದು ಅಪ್ರಯೋಜಕ ವಲ್ಲವೆಂದು ಮತ್ತೆ ಹೇಳಬೇಕಾದುದಿಲ್ಲ.

ಮಿ. ಶಿರಹಟ್ಟಿಯವರ ಮುಕ್ತಾವಲಿಯು ನಾಡನಲ್ಮೆ, ಘನವಂತಿಕೆ, ಕೆಳಮೆ, ಸಿರಿ, ಸ್ತ್ರೀಚರ್ಯೆ, ವಿರಕ್ತಿ ಮುಂತಾದ ಮುಕ್ತಾಫಲಗಳನ್ನು ಕೋದು ರಚಿತವಾಗಿದೆ.

ಈ ವಿಷಯಗಳಲ್ಲಿ ಹೇಳಬೇಕಾದ ಮಾತುಗಳಲ್ಲಿ ಹಲವನ್ನು ಹೊಸ ಬಗೆಯಲ್ಲಿ ಹೇಳಿರುವರಲ್ಲದೆ ನಾಡನಲ್ಮೆಯ ವಿಚಾರಗಳು ಆಧುನಿಕ ಯುಗಕ್ಕೆ ಉದ್ಬೋಧಕ ವಾಗಿವೆ. ದೃಷ್ಟಾಂತಗಳ ಔಚಿತ್ಯವು ಎಲ್ಲೆಡೆಗಳಲ್ಲಿ ಆಕರ್ಷಕವಾಗಿ ಮುಖ್ಯ ಆಸ್ವಾದ್ಯ ವಿಷಯವಾಗಿದೆ.

ಸಣ್ಣ ಮಾತುಗಳಲ್ಲಿ ಹೆಚ್ಚು ಭಾವವನ್ನಡಗಿಸುವುದಕ್ಕೆ ಹಳಗನ್ನಡವು ಅನುಕೂಲ. ಆದರೆ ಅದರ ದುರ್ಬೋಧತೆಯನ್ನು ತಿಳಿಗನ್ನಡದ ಛಾಯೆಯಲ್ಲಿ ಹೋಗಲಾಡಿಸಲು ಗ್ರಂಥಕಾರರು ಪ್ರಯತ್ನಪಟ್ಟಿರುವುದು ಸ್ತುತ್ಯವಾಗಿದೆ.

ಭಾವವನ್ನೂ ಔಚಿತ್ಯವನ್ನೂ ಒಳಗೊಂಡ ಈ ಸಣ್ಣ ಸಣ್ಣ ಪದ್ಯಗಳನ್ನು ಬಾಲಕರು ಕಂಠಪಾಠಮಾಡಿದಲ್ಲಿ ಮಿ. ಶಿರಹಟ್ಟಿಯವರು ತಮ್ಮ ನಾಡಿನ ಬಾಲಕರಿಗಾಗಿ ಕೋದ ಮುಕ್ತಾವಲಿಯನ್ನು ತಮ್ಮ ಕಂಠಭೂಷಣವನ್ನಾಗಿ ಮಾಡಿಕೊಂಡಲ್ಲಿ-ಅವರ ಶ್ರಮವು ಸಫಲವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಧಾರವಾಡ
ಗಣೇಶ ಚತುರ್ಥಿ
ಪ್ರಜೋತ್ಪತ್ತಿ ಸಂ.

**–ಮ. ಪ್ರ. ಪೂಜಾರ**
ಕನ್ನಡಪಂಡಿತ
೧೯೩೧

# ಆತ್ಮನಿವೇದನೆಯಿಂದ

ನೀತಿಯ ಪ್ರವಾಹವು ಎಂದೆಂದಿಗೂ ಹರಿಯುತ್ತಲಿಹುದು. ಪ್ರಾಚೀನ ಗ್ರಂಥಗಳಲ್ಲಿ ಅದು ಮಡುಗೊಂಡು ನಿಂತಿರುವುದು. ವಿದ್ವಾಂಸರಾದ ಮಹನೀಯರ ಪುರಾಣ ಪ್ರವಚನಗಳಿಂದ ಹೊರಸೂಸುತ್ತಲೂ ಇಹುದು. ಇಂಥ ಗ್ರಂಥಗಳಲ್ಲಿ ದೊರೆತ, ಮಹನೀಯರ ಪ್ರವಚನಗಳಲ್ಲಿ ಹೊರ ಹೊಮ್ಮಿದ ಸೂಕ್ತಿಮುಕ್ತಾಫಲಗಳನ್ನು ಆಯ್ದು ಅಂತಃಸ್ಫೂರ್ತಿಗೆ ತಿಕ್ಕಿ ಕಂದಪದ್ಯದಲ್ಲಿ ಪೋಣಿಸಿದುದೇ ಈ ಮುಕ್ತಾವಲಿಯು.

ಇದರ ವಿಷಯಸಂಗ್ರಹಕ್ಕೆ ನೆರವಾದ ಪಂಡಿತ ಶ್ರೀ ಬಸವರಾಜ ಶಾಸ್ತ್ರಿಗಳು ಕೋಡಿಕೊಪ್ಪಮಠ ಇವರಿಗೂ, ಇದನ್ನು ಸಂಶೋಧನಗೊಳಿಸಿದ ಪಂಡಿತ ಶ್ರೀ ಕೇಶವಶರ್ಮಾ ಗಲಗಲಿ ಇವರಿಗೂ, ಕೆಲವು ಸೂಚನೆಗಳನ್ನು ಮಾಡಿದುದಲ್ಲದೆ, ಅಚ್ಚುಕಟ್ಟಾದ ಮುನ್ನುಡಿಯಿಂದ ನನ್ನ ಅಲ್ಪಕೃತಿಯನ್ನು ಕನ್ನಡಿಗರಿದಿರಿಗೆ

ಇರಿಸಿದ ಪಂಡಿತ ಶ್ರೀ ಮಹಾದೇವ ಪ್ರಭಾಕರ ಪೂಜಾರ ಇವರಿಗೂ ನಾನು ಅತ್ಯಂತ ಋಣಿಯಾಗಿದ್ದೇನೆ. ಇದಲ್ಲದೆ ಅಚ್ಚು ಮೆಚ್ಚಾಗುವಂತೆ ಅಚ್ಚುಹಾಕಿದ ವಿಜಾಪುರ ಹಿತಚಿಂತಕ ಮುದ್ರಣಾಲಯದ ಒಡೆಯರಿಗೂ ಉಪಕೃತನಾಗಿದ್ದೇನೆ.

ಕೊನೆಗೆ, ಸಮಾಜದಲ್ಲಿ ಹೆಸರ ಪಡೆಯಬೇಕೆಂಬಾಸೆಯಿಲ್ಲದೆ ಕೇವಲ ಸತ್ಕಾರ್ಯದಲ್ಲಿ ವಿನಿಯೋಗವಾಗಲೆಂದು ಇದರ ಮುದ್ರಣಕ್ಕೆ ಹತ್ತಿದ ಹಣವನ್ನು ಕೊಟ್ಟ ಸದ್ಗೃಹಸ್ಥನ ಹೆಸರನ್ನು ಮನದಲ್ಲಿ ನೆನೆದು ಕೃತಜ್ಞತೆಯನ್ನು ವ್ಯಕ್ತಪಡಿಸಿ ವಿರಮಿಸುತ್ತೇನೆ.


೨೧–೯–೩೧ **–ಲ. ಅ. ಶಿರಹಟ್ಟಿ**

# ಅಭಿಪ್ರಾಯ

ನಿಮ್ಮ ಹಿಂದಿನ ಕವಿತ್ವಕ್ಕಿಂತ ಈಗಣ ಈ ನೀತಿಮುಕ್ತಾವಲಿಯ ಕವಿತ್ವವು ಮಧುರವೂ ಲಲಿತವೂ ಆಗಿದೆ. ಇನ್ನು ಮುಂದೆ ಇನ್ನೂ ಹೆಚ್ಚಿನ ಪ್ರಗತಿಯನ್ನು ನೀವು ಕವಿತ್ವದಲ್ಲಿ ಹೊಂದುವಿರೆಂಬು ಕೋರುವೆನು. ಈಗಣ ಕವಿತ್ವದಲ್ಲಿಯ ಬಂಧವು (ಬಿಗು) ಚನ್ನಾಗಿ ಸಾಧಿಸಿದೆ. ಇದನ್ನು ಬೇಗನೆ ಮುದ್ರಿಸುವ ಏರ್ಪಾಡು ಮಾಡಿರಿ.

**ಗಲಗಲಿ** **–ಕೇಶವಶರ್ಮಾ ಗಲಗಲಿ**
೧೦–೮–೩೧ ಕನ್ನಡ ಪಂಡಿತ

# ಶ್ರೀ ಲಕ್ಕಪ್ಪ ಶಿರಹಟ್ಟಿ ಅವರ ಕೃತಿಗಳು



**ಕಾವ್ಯ:**

೧. ನೀತಿ ಮುಕ್ತಾವಲಿ (ನೈತಿಕ ಖಂಡ ಕಾವ್ಯ)
೨. ನೂರೊಂದು ನೆಲೆಯ ನಿಲವು
(ಷಟ್‌ಸ್ಥಲ ತತ್ವ ಕಾವ್ಯ)
೩. ಲಿಂಗರಾಜ ವಿಜಯ (ಚಾರಿತ್ರಿಕ ಕಾವ್ಯ)

**ಐತಿಹಾಸಿಕ ಕೃತಿಗಳು:**

೪. ಚಿತ್ತೂರಿನ ಪುನರುದ್ಧಾರ (ಕತೆ)
೫. ಕನ್ನಡಿಗನ ಕಲಿತನ (ನಾಟಕ)
೬. ಬಯಲಾದ ಸಂಚು (ನೀಳ್ಗತೆ)
೭. ಬಸವನ ಬಾಗೇವಾಡಿಯ ಕ್ಷೇತ್ರ ದರ್ಶನ
೮. ಕೆಳದಿಯ ಚೆನ್ನಮ್ಮ (ಚರಿತ್ರೆ)

**ಮಹಾತ್ಮರ ಜೀವನ ಚರಿತ್ರೆಗಳು:**

೯. ಶ್ರೀ ಸಿದ್ಧರಾಮೇಶ್ವರ ಚರಿತ್ರೆ
೧೦. ಯೋಗಿರಾಜ ವಿಜಯ
೧೧. ಬಸವರಾಜ ದೇವರು
೧೨. ಕ್ರಾಂತಿ ಗಂಗೋತ್ರಿ
೧೩. ಕಾಯಕ ವೀರ
೧೪. ಧರ್ಮದರ್ಶಿ
೧೫. ಬಯಲ ಮೂರ್ತಿ
೧೬. ಸ್ವಯಂ ಜ್ಯೋತಿ

**ಅನುವಾದ:**

೧೭. ಶಿವಾದ್ವೈತ ಸಿದ್ಧಾಂತ

**ಸಂಪಾದಕತ್ವ:**

೧೮. ೧೯೭೧ ರಿಂದ ೧೯೭೩ (ಎರಡು ವರ್ಷ)
ಅನುಭವ ಮಂಟಪ ಮಾಸಿಕ ಪತ್ರಿಕೆ
ಶ್ರೀ ಬಂಥನಾಳ ಶಿವಯೋಗಿಗಳವರ ಆದೇಶದ ಆಶ್ರಯದಲ್ಲಿ

---

ಗಂಗಾಪೂರ ಓಣಿ, ಕುಂಬಾರಗರಡಿ ಹತ್ತಿರ
ತ್ವರಿತ ಮುದ್ರಣ ಗದಗ-೫೮೨ ೧೦೧